ದೇವುಡು ಅವರ ಸಂಸ್ಕೃತಿ ಚಿಂತನೆ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ

ಸಂಶೋಧಕ
ನಾಗಭೂಷಣಗೌಡ ಪಾಟೀಲ್

ಮಾರ್ಗದರ್ಶಕರು
ಡಾ|| ಎಫ್.ಟಿ. ಹಳ್ಳಿಕೇರಿ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೨೧

ಸೆಪ್ಟೆಂಬರ್-೧೯೯೭

61

[illegible] [illegible] ಸಂಸ್ಕೃತಿ ಚಿಂತನೆ

[illegible]

ದೇವುಡು ಅವರ ಸಂಸ್ಕೃತಿ ಚಿಂತನೆ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ

ಸಂಶೋಧಕ
ನಾಗಭೂಷಣಗೌಡ ಪಾಟೀಲ್

ಮಾರ್ಗದರ್ಶಕರು
ಡಾ|| ಎಫ್.ಟಿ. ಹಳ್ಳಿಕೇರಿ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೨೧

ಸೆಪ್ಟೆಂಬರ್-೧೯೯೭

ಮಾರ್ಗದರ್ಶಕರ ದೃಢೀಕರಣ ಪತ್ರ

ನಾಗಭೂಷಣಗೌಡ ಪಾಟೀಲ ಅವರು ''ದೇವುಡು ಅವರ ಸಂಸ್ಕೃತಿ ಚಿಂತನೆ'' ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೇ ಭಾಗವನ್ನು ಇವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೦-೯-೯೭

ಡಾ. ಎಫ್. ಟಿ. ಹಳ್ಳಿಕೇರಿ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಶೋಧಕರ ಪ್ರಮಾಣ ಪತ್ರ

'ದೇವುಡು ಅವರ ಸಂಸ್ಕೃತಿ ಚಿಂತನೆ' ಎಂಬ ಶೀರ್ಷಿಕೆಯ ಈ ಪ್ರಬಂಧವನ್ನು ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ.ಎಫ್.ಟಿ.ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಪ್ರಬಂಧ ಅಥವಾ ಅದರ ಯಾವುದೇ ಭಾಗವನ್ನು ಈ ಹಿಂದೆ ಯಾವುದೇ ಪದವಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಲಿ ಬಳಸಿಕೊಂಡಿರುವುದಿಲ್ಲ.

ನಾಗಭೂಷಣಗೌಡ ಪಾಟೀಲ

ಸ್ಥಳ: ವಿದ್ಯಾರಣ್ಯ

ದಿನಾಂಕ: ೧೦/೯/೯೭

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಅವರಿಗೆ,

ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಕೆ.ಎಂ.ಸುರೇಶ ಅವರಿಗೆ,

ಅಧ್ಯಯನದ ಸಂದರ್ಭದಲ್ಲಿ ಎದುರಾಗುತ್ತಿದ್ದ ಸಮಸ್ಯೆಗಳನ್ನು ತೊಂದರೆಗಳನ್ನು ಸಹನೆಯಿಂದಲೇ ಬಗೆಹರಿಸುತ್ತಿದ್ದ ಮಾರ್ಗದರ್ಶಕರಾದ ಡಾ. ಎಫ್.ಟಿ.ಹಳ್ಳಿಕೇರಿ ಅವರಿಗೆ,

ದೇವೃತು ಕುರಿತ ಅನೇಕ ಮಾಹಿತಿಗಳನ್ನು ನೀಡಿದ ಹಿರಿಯರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರಿಗೆ,

ಡಾ. ಕೆ.ವಿ.ನಾರಾಯಣ, ಡಾ. ಎಚ್.ಎಸ್.ಶ್ರೀಮತಿ ಅವರಿಗೆ,

ದುಂಡು ಮೇಜಿನ ಚರ್ಚೆಯ ಮೂಲಕ ನನ್ನ ಸಂಶೋಧನಾ ಕ್ರಿಯೆಯನ್ನು ಚುರುಕುಗೊಳಿಸಿದ ಪ್ರೊ. ಎ.ವಿ.ನಾವಡ, ಡಾ. ಪುರುಷೋತ್ತಮ ಬಿಳಿಮಲೆ, ಪ್ರೊ. ಲಕ್ಷ್ಮಣ ತೆಲಗಾವಿ, ಡಾ. ಕರೀಗೌಡ ಬೀಚನಹಳ್ಳಿ, ರಹಮತ ತರೀಕೆರೆ, ಪ್ರೊ. ಟಿ.ಎಸ್.ಸತ್ಯನಾಥ್ ಡಾ. ವಿಠಲರಾವ್ ಗಾಯಕ್ವಾಡ, ಡಾ. ವೀರೇಶ ಬಡಿಗೇರ, ಡಾ. ಮೋಹನ ಕುಂಟಾರ, ಡಾ. ಪಾಂಡುರಂಗಬಾಬು, ಡಾ. ಮಂಜುನಾಥ ಬೇವಿನಕಟ್ಟಿ , ಶಿವಾನಂದ ವಿರಕ್ತಮಠ, ಎಸ್.ಎಸ್.ಅಂಗಡಿ, ಡಾ. ಕೆ.ರವೀಂದ್ರನಾಥ ಅವರಿಗೆ,

ಸಹೋದರ ಸಹೋದರಿಯರಾದ ಬಾಬು ಮತ್ತು ಉಮಾಗೆ,

ದೇವೃತು ಅವರ ಬಗ್ಗೆ ಮಾಹಿತಿ ಒದಗಿಸಿದ ಸುರೇಖಾಳಿಗೆ, ನನ್ನೊಂದಿಗೆ ವಿಚಾರಗಳನ್ನು ಹಂಚಿಕೊಂಡ ಸ್ನೇಹಿತರಾದ ಗಂಗಾಧರ, ರಾಜು, ಮಹೇಶ, ಪ್ರಭು, ದಿನೇಶ, ವೆಂಕಟೇಶಮೂರ್ತಿ, ಎ.ಎಸ್. ಪ್ರಭಾಕರ, ಖಾಜಾವಲಿ, ವನ್ಯಗೇರಿ, ಶ್ರೀನಿವಾಸ , ಶ್ರೀಮತಿ. ಗೀತಾಂಜಲಿ ನಾಯಕ್, ಮಂಜುಳಾ, ಚೇತನಾ, ಸುಚೇತಾ ಅವರುಗಳಿಗೆ, ಪ್ರೂಫ್ ನೋಡಲು ಸಹಕರಿಸಿದ ಪ್ರೀತಿಯ ಸ್ನೇಹಿತ ಲಿಂಗಪ್ಪ ಮುದೇನೂರು ಅವರಿಗೆ, ಪುಸ್ತಕಗಳನ್ನು ಒದಗಿಸುವಲ್ಲಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಸಿಬ್ಬಂದಿಗಳಿಗೆ, ಪ್ರಬಂಧವನ್ನು ಅಂದವಾಗಿ ಗಣಕಯಂತ್ರದಲ್ಲಿ ಸಂಯೋಜಿಸಿಕೊಟ್ಟ ಸ್ಫೂರ್ತಿ ಕಂಪ್ಯೂಟರ್ಸ್‌ನ ರೂವಾರಿಗಳಿಗೆ.

ನಾಗಭೂಷಣ ಪಾಟೀಲ
ಸಂಶೋಧನಾ ವಿದ್ಯಾರ್ಥಿ

ಪರಿವಿಡಿ

ಪೀಠಿಕೆ :

ಬ್ರಿಟೀಷ್ ಸಾಮ್ರಾಜ್ಯಶಾಹಿಯ ಆಧಿಪತ್ಯಕ್ಕೆ ಒಳಗಾಗಿದ್ದ ಈ ಶತಮಾನದ ಆರಂಭದ ದಿನಗಳಲ್ಲಿ ಅವರ ಪ್ರಭಾವ ಮತ್ತು ಪ್ರೇರಣೆ ಭಾರತದ ಮೇಲೆ ಗಾಢವಾಗಿತ್ತು. ಆಂಗ್ಲರ ಸಂಸ್ಕೃತಿ ಹೇರುವಿಕೆಯ ಕಾರಣದಿಂದಾಗಿ, ಇಲ್ಲಿನ ಸಂಸ್ಕೃತಿಗೆ ತನ್ನತನವೆಂಬುದೆ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಅನೇಕ ಚಿಂತಕರು ಸಂಸ್ಕೃತಿಯ ಶೋಧನೆಗೆ ತೊಡಗಿದರು. ತತ್ಕಾರಣವಾಗಿ ಪರಂಪರೆ ಮತ್ತು ಮೌಲ್ಯಗಳ ಹುಡುಕಾಟ ಆರಂಭವಾಯಿತು. ಭಾರತದ ಅಂದಿನ ಶೈಕ್ಷಣಿಕ ಮತ್ತು ಸಾಹಿತ್ಯಿಕ ಸಂದರ್ಭವು ಸಂದಿಗ್ಧತೆಯಲ್ಲಿತ್ತು. ನಮ್ಮ ಬದುಕನ್ನು ರೂಪಿಸಬೇಕಾದ ಶಿಕ್ಷಣಕ್ಷೇತ್ರವೇ ಪಾಶ್ಚಿಮಾತ್ಯ ಮಾದರಿಗಳಿಗೆ ಪ್ರಭಾವಿತವಾಗಿತ್ತು. ನಾವು ಓದಬೇಕಾದ ವಿಷಯದಿಂದ ಹಿಡಿದು, ಕಲಿಕೆಯ ಕ್ರಮ, ಕಲಿತ ಜ್ಞಾನದ ಮೌಲ್ಯಮಾಪನ ಹೀಗೆ ಎಲ್ಲದಕ್ಕೂ ಎರವಲು ಸೂತ್ರಗಳಿಗೆ ಅಂಟಿಕೊಳ್ಳಬೇಕಾಯಿತು. ಅಂದಿನ ರಾಜಕೀಯ ಪ್ರಭಾವದ ಕಾರಣದಿಂದ ಇದು ಅನಿವಾರ್ಯ ಕೂಡಾ ಆಗಿತ್ತು. ನಮ್ಮ ಶಿಕ್ಷಣ ವ್ಯವಸ್ಥೆಯು ಮೇಲಿನ ಈ ಪ್ರಭಾವ-ಒಳಿತು-ಕೆಡುಕಗಳೆರಡನ್ನೂ ಒಳಗೊಂಡಿತ್ತು. ಈ ಕುರಿತು ಚಂದ್ರಶೇಖರ ಕಂಬಾರರು ಹೇಳುವಂತೆ, 'ಮಾನವಿಕ ಮತ್ತು ಸಾಮಾಜಿಕ ಅಧ್ಯಯನ ಶಾಖೆಗಳು ನಮಗೆ ಪರಿಚಯವಾದದ್ದು ನಮ್ಮ ಮನಸ್ಸನ್ನು ನಾವು ಪಶ್ಚಿಮಕ್ಕೆ ತೆರೆದುಕೊಂಡದ್ದರಿಂದ. ಈ ವಿಷಯಗಳನ್ನು ನಾವು ಕಲಿತದ್ದು ಇಂಗ್ಲೀಷಿನ ಮುಖಾಂತರ. ಇದರಿಂದ ನಮಗೆ ಲಾಭವಾಗಿರುವಂತೆಯೇ ನಷ್ಟವೂ ಆಗಿದೆ. ನಮಗೆ ಹೊಸ ವೈಜ್ಞಾನಿಕ ದೃಷ್ಟಿಕೋನ ದೊರೆತದ್ದು ಒಂದು ಲಾಭ. ಅಧ್ಯಯನ ವಿಧಾನಗಳ ಪರಕೀಯತೆಯಿಂದಾಗಿ ನಮ್ಮ ಸಮಾಜವನ್ನೇ ನಾವು ವಿದೇಶಿ ಕಲ್ಪನೆಗಳ ಮುಖಾಂತರ ನೋಡುವಂಥಾದ್ದು ನಷ್ಟ[1].

ನವೋದಯದ ಕೆಲವು ಬರಹಗಾರರಿಗೆ ಚಿಂತಕರಿಗೆ ಈ ಅಪಾಯದ ಪ್ರಜ್ಞೆ ಇತ್ತು. ಇದನ್ನರಿತ ಅವರು ದೇಶೀಯ ಚಿಂತನೆಗಳು ರಕ್ತಮಾಂಸಗಳಿಂದ ಮೈಗೂಡಿ ಜೀವಂತಿಕೆ ಪಡೆಯಬೇಕಾದರೆ ಅದು ತನ್ನ ನೆಲದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರಬೇಕು ಎಂಬ ಯೋಚನೆ ಕೆಲ ಕನ್ನಡದ ಬರಹಗಾರರಲ್ಲಿ ಮೂಡಿತು. ಇಂತಹ ತುಡಿತಕ್ಕೆ ಒಳಗಾಗಿ ಭಾರತದ / ಅಥವಾ ಕರ್ನಾಟಕ ಸಂಸ್ಕೃತಿ ಚಿಂತನೆಗೆ ಅನೇಕರು ತೊಡಗಿದರು. ಮುಖ್ಯವಾಗಿ ಮಾಸ್ತಿ,

ಶಂ.ಬಾ. ಜೋಶಿ, ಡಿ.ವಿ.ಗುಂಡಪ್ಪ, ಕುವೆಂಪು, ಬೇಂದ್ರೆ, ದೇವುಡು, ಆಲೂರ ವೆಂಕಟರಾಯ ಮುಂತಾದವರನ್ನು ಹೆಸರಿಸಬಹುದು. ಇವರಲ್ಲಿ ಪ್ರತಿಯೊಬ್ಬರದು ಪ್ರತ್ಯೇಕ ದಾರಿ, ಮಾಸ್ತಿಯವರದು ಆಧ್ಯಾತ್ಮಿಕ ಮೂಲದ ಜನಪದ ಸಂಸ್ಕೃತಿಯ ಹಿನ್ನೆಲೆಯದು. ಶಂ.ಬಾ. ಜೋಶಿಯವರದು ಮಾನವನ ಕ್ರಿಯಾತ್ಮಕ ಬದುಕಿನ ಜೊತೆ ಸಂಬಂಧ ಪಡೆದದ್ದು. ಡಿ.ವಿ.ಗುಂಡಪ್ಪನವರದು ಮನುಷ್ಯನ ಅಂತರಂಗದ ಶೋಧನೆಯನ್ನು, ಶುದ್ಧಿಯನ್ನು ಕುರಿತದ್ದು. ವಿಶ್ವಮಾನವ ಚೇತನದ ವ್ಯಾಪ್ತಿಯುಳ್ಳ ಕುವೆಂಪುರವರದು ಆದರ್ಶ ಸ್ವರೂಪದ ವ್ಯಕ್ತಿತ್ವ ರೂಪಿಸುವ ಧೋರಣೆಯದು. ಬೇಂದ್ರೆಯವರ ಸಂಸ್ಕೃತಿ ಚಿಂತನೆಯು ಜನಪದರವಾದ ತುಮುಲಗಳನ್ನು ಅಭಿವ್ಯಕ್ತಿಸುವಂಥದು, ಆಲೂರ ವೆಂಕಟರಾಯರದು ಮುಖ್ಯವಾಗಿ ರಾಷ್ಟ್ರೀಯ, ಆಧ್ಯಾತ್ಮಿಕ, ಆದರ್ಶಗಳಿಂದ ಮುಪ್ಪುರಿಗೊಂಡದ್ದು. ಇನ್ನು ರಾಷ್ಟ್ರೀಯ ಪ್ರಜ್ಞೆಯು ಆದರ್ಶ ವ್ಯಕ್ತಿತ್ವದ ನಿರ್ಮಾಣದೆಡೆಗೆ ತುಡಿಯುವ, ಜನಪದ ಕಾಳಜಿಯ ಮೂಲಕ ಹೊರಡುವ ದೇವುಡು ನರಸಿಂಹಶಾಸ್ತ್ರಿಗಳದು ಇವರೆಲ್ಲರಿಗಿಂತ ಭಿನ್ನ ಸ್ವರೂಪದ್ದು.

ಈ ಕಾರಣದಿಂದ ದೇವುಡು ಅವರ ಸಂಸ್ಕೃತಿ ಚಿಂತನೆಯನ್ನು ಪ್ರಸ್ತುತ ಪ್ರಬಂಧದಲ್ಲಿ ಅಧ್ಯಯನಕ್ಕೊಳಪಡಿಸಲಾಗುವುದು. ವ್ಯಕ್ತಿ ಕೇಂದ್ರಿತ ಚಿಂತನೆಯನ್ನಾಧರಿಸಿದ ಅಧ್ಯಯನ ಇದಾಗಿದೆ. ದೇವುಡು ಅವರ ಸಮಗ್ರ ಚಿಂತನೆಗಳಿಗೆ ಕೈಹಾಕದೆ ಅವರು ಹುಡುಕಹೊರಟ ರೀತಿಯ ಸಂಸ್ಕೃತಿ ಚಿಂತನೆಯ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಅಧ್ಯಾಯ-೧

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ನಡೆದ ಹಾದಿಯು ಗುರುತಿಸಲಾಗದ-ನಡೆವ ಹಾದಿಯು ಗುರುತಿಸಲಾಗದು. ಅದರಂತೆ ನಾವು ಬದುಕಿದ, ಬದುಕುತ್ತಿರುವ ನೆಲೆಗಳನ್ನು ಹುಡುಕಿ, ಬದುಕಬೇಕಾದ ನೆಲೆಗಳನ್ನು ಕಂಡುಕೊಳ್ಳಬೇಕಾಗಿದೆ. ಈ ನೆಲೆಗಳು ಶಿಷ್ಟ ಪರಂಪರೆಯ ವೇದಮೂಲವೋ, ಪರಿಶಿಷ್ಟ ಪರಂಪರೆಯ ಜಾನಪದ ಮೂಲವೋ ಆಗಿರಬಹುದು ೧. ವೇದಗಳನ್ನು ಪ್ರತಿನಿಧಿಸುವ ವೈದಿಕ ಚಿಂತನೆಯ ಮೂಲಕ ನಮ್ಮ ಬದುಕಿನ ನೆಲೆಗಳನ್ನು ಹುಡುಕುವುದೆಂದರೆ, ವೈದಿಕ ಧರ್ಮವನ್ನೆ ಪ್ರತಿಪಾದಿಸಿದಂತಲ್ಲ. ಇಂತಹ ಪೂರ್ವಗ್ರಹಗಳಿಗೆ ಒಳಗಾದ ನಮ್ಮ ಅಧ್ಯಯನಗಳು ವೇದಗಳು-ವೈದಿಕತೆ -ವೈದಿಕರು ಇವುಗಳನ್ನು ಒಂದೇ ನೆಲೆಯಲ್ಲಿ ಇರಿಸಿಕೊಂಡು ಅಸಮಂಜಸ ತೀರ್ಮಾನಗಳಿಗೆ ಕಾರಣವಾಗುತ್ತವೆ. ವೈದಿಕ ಚಿಂತನೆಯ ಮೂಲಕ ಹೊರಟ ಅಧ್ಯಯನಗಳನ್ನು ಅನುಮಾನಾಸ್ಪದ ದೃಷ್ಟಿಯಿಂದ ನೋಡುವ ನಮ್ಮ ಮನೋಭಾವನೆ ಬದಲಾಗಬೇಕಿದೆ. ವೈದಿಕ ಧರ್ಮದ ಹೆಸರಿನಲ್ಲಿ ವೈದಿಕರು ಚಾತುರ್ವರ್ಣ್ಯ ಧೋರಣೆಯಿಂದ ಕೆಳವರ್ಗಗಳನ್ನು ಶೋಷಿಸಿದ್ದು ಐತಿಹಾಸಿಕ ಕರಾಳತೆಯಾಗಿದೆ. ಅಂದರೆ ಸಮಗ್ರ ಚಿಂತನೆಗಳನ್ನು ಆಧರಿಸಿದ ಸಂಶೋಧಕನಿಗೆ, ತನ್ನ ಅಧ್ಯಯನದ ದೃಷ್ಟಿಯಿಂದ ಧರ್ಮಾಧಾರಿತ, ವಿದ್ಯಾಧಾರಿತ ತಾರತಮ್ಯತೆಗಳು ಸರಿಯೆನಿಸಲಾರವು, ಭಾರತೀಯ ಅಥವಾ ಕರ್ನಾಟಕದ ಅಥವಾ ಇನ್ನಾವುದೋ ಒಂದು ಸಮುದಾಯದ ಸಂಸ್ಕೃತಿ ಶೋಧನೆಗೆ ಹೊರಟ ಅಧ್ಯಯನಗಳು ವೈದಿಕ, ಶೈವ, ಜೈನ, ಬೌದ್ಧ, ಆಸ್ತಿಕ - ನಾಸ್ತಿಕ, ಶಿಷ್ಟ-ಜಾನಪದ ಮುಂತಾದ ಎಲ್ಲ ಮುಖಗಳ ಹರವುಗಳಿಗೆ

ಬಾಚಿಕೊಳ್ಳಬೇಕಿದೆ.

02

ಪಾಶ್ಚಾತ್ಯ ಶಿಕ್ಷಣಕ್ರಮದ ಪ್ರಭಾವದಿಂದಾಗಿ ಆಧುನಿಕ ಮಾನವಿಕ ಅಧ್ಯಯನ ವಿಧಾನಗಳಲ್ಲಿ ವಿಭಿನ್ನ ಪರಿಕಲ್ಪನೆಗಳು, ಪರಿಪ್ರೇಕ್ಷ್ಯಗಳು ಕಂಡುಬರುತ್ತವೆ. ಅದರಂತೆ ಸಂಸ್ಕೃತಿ ಪರಿಕಲ್ಪನೆಯೂ ತೀರಾ ಈಚಿನದು. ೨ ನಮ್ಮಲ್ಲಿ ಸಂಸ್ಕೃತಿ ಪರಿಕಲ್ಪನೆಯನ್ನು ಸೂಚಿಸುವ 'ಸಂಸ್ಕಾರ' ಎಂಬ ಪದ ಮೊದಲು ಬಳಕೆಯಲ್ಲಿತ್ತು. "Culture" ಪದಾಧಾರಿತ (ಸಂಸ್ಕೃತಿ) ಪರಿಕಲ್ಪನೆ ಬೆಳೆದುಬಂದ ಮೇಲೆ ಅದು ಒಳಗೊಳ್ಳುವ ವಿಶಾಲತೆಯ ಕಾರಣದಿಂದ ಈ ಪರಿಕಲ್ಪನೆಯನ್ನು ಮಾನವ ಬದುಕಿನ ಎಲ್ಲ ವಿಧಾನಗಳಿಗೂ ಅನ್ವಯಿಸಿ, ಶೋಧಿಸುವ ಅಧ್ಯಯನಗಳು ಪ್ರಾರಂಭವಾದವು. ಶಂಬಾ ಜೋಶಿ, ಮಾಸ್ತಿ, ಡಿ.ವಿ.ಜಿ, ದೇವುಡು ನರಸಿಂಹಶಾಸ್ತ್ರಿಗಳು, ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಕಪಟರಾಳ ಕೃಷ್ಣರಾವ್, ಮುಳಿಯ ತಿಮ್ಮಪ್ಪಯ್ಯ ಮುಂತಾದವರು ಸಂಸ್ಕೃತಿಯ ಹುಡುಕಾಟಕ್ಕೆ ಅವರವರದೇ ದಾರಿಗಳನ್ನು ನಿರ್ಮಿಸಿಕೊಂಡರು. ಈಚೆಗೆ ಅಂದರೆ ಬಂಡಾಯ ಸಾಹಿತ್ಯ ಸಂಘಟನೆ ಚಳುವಳಿ ರೂಪ ತಾಳಿದ ಮೇಲೆ ಶೋಷಿತರನ್ನು ಪ್ರತಿನಿಧಿಸುವ ಸಮುದಾಯಿಕ ಸಂಸ್ಕೃತಿ ಶೋಧನೆಗೆ ಮೊದಲಾಯಿತು. ಇತಿಹಾಸದಲ್ಲಿ ಗುರುತಿಸದೇಹೋಗಿದ್ದ ಅನೇಕ ಸಂಸ್ಕೃತಿಗಳ ಅಸ್ತಿತ್ವದ ಪ್ರತಿಪಾದನೆಯ ಕಾರ್ಯ ಇಲ್ಲಿ ನಡೆಯಿತು. ಹೀಗೆ ಹೊರಟ ಬರಗೂರ ರಾಮಚಂದ್ರಪ್ಪ (ಉಪಸಂಸ್ಕೃತಿ), ರಹಮತ್ ತರೀಕೆರೆ (ಪ್ರತಿ ಸಂಸ್ಕೃತಿ), ಹರಿಹರಪ್ರಿಯ (ಪರ್ಯಾಯ ಸಂಸ್ಕೃತಿ) ಮುಂತಾದವರು ಸಂಸ್ಕೃತಿಯ ವೈವಿಧ್ಯತೆಯ ಸಮರ್ಥನೆಗೆ ತೊಡಗಿ ಸಂಸ್ಕೃತಿ ಚಿಂತನೆಯ ದಾರಿಗಳನ್ನು, ಆಯಾಮಗಳನ್ನು ವಿಸ್ತರಿಸಿದರು.

ಕನ್ನಡದಲ್ಲಿ ಸಂಸ್ಕೃತಿ ಶೋಧನೆಯನ್ನು ಕುರಿತ ಅಧ್ಯಯನಗಳನ್ನು ಹೀಗೆ ವಿಭಾಗಿಸಬಹುದು:

೧. ಸಂಸ್ಕೃತಿಯ ತಾತ್ವಿಕತೆಗೆ ಸಂಬಂಧಿಸಿದಂತೆ, (ಮರದೊಳಗಣಕಿಚ್ಚು, ಸಂಸ್ಕೃತಿ-ಉಪಸಂಸ್ಕೃತಿ).

೨. ಜನಪದರ ಜೀವನವಿಧಾನಗಳಲ್ಲಿ ಸಂಸ್ಕೃತಿಯ ಶೋಧನೆಗೆ ತೊಡಗಿಕೊಂಡದ್ದು, (ಕರಾವಳಿ ಜಾನಪದ, ವ್ಯವಸಾಯಕರ ಸಾಂಸ್ಕೃತಿಕ ಅಧ್ಯಯನ).

೩. ಸಾಹಿತ್ಯಿಕ ಕೃತಿಗಳಲ್ಲಿ ಮೂಡಿಬಂದಿರುವ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಿರುವುದು,(ಪಂಪಭಾರತ ಒಂದು ಸಾಂಸ್ಕೃತಿಕ ಅಧ್ಯಯನ).

೪. ವಾಸ್ತುಶಿಲ್ಪ, ಸಂಗೀತ ಮುಂತಾದ ಲಲಿತಕಲೆಗಳಲ್ಲಿ ಕಂಡು ಬರುವ ಸಾಂಸ್ಕೃತಿಕ ಅಂಶಗಳನ್ನು ಆಧರಿಸಿದುದು (ಕರ್ನಾಟಕ ವಾಸ್ತುಶಿಲ್ಪ-ರಾಜಶೇಖರ ಸಿಂದಗಿ).

೫. ಸಂಸ್ಕೃತಿ ಕುರಿತ ವ್ಯಕ್ತಿಕೇಂದ್ರಿತ ಚಿಂತನೆಯನ್ನು ಕುರಿತಂತೆ (ಸಂಸ್ಕೃತಿ ಮತ್ತು ಶಂಭಾ)

ಅನೇಕ ಬಗೆಗಳಲ್ಲಿ ಸಂಸ್ಕೃತಿಯ ಹುಡುಕಾಟಕ್ಕೆ ಮೊದಲಾಯಿತು.

ಪ್ರಸ್ತುತ ಅಧ್ಯಯನವು ಸಂಸ್ಕೃತಿ ಕುರಿತ ವ್ಯಕ್ತಿಕೇಂದ್ರಿತ ಚಿಂತನೆಯನ್ನು ಆಧರಿಸಿದ್ದಾಗಿದೆ. ಇಲ್ಲಿ ಈ ವಿಧಾನದ ಅಧ್ಯಯನ ಕ್ರಮವನ್ನು ಕುರಿತು ಒಂದಿಷ್ಟು ವಿವರಿಸಬಹುದು. ಒಂದು ಪರಿಕಲ್ಪನೆಯ ಹಿನ್ನೆಲೆಯನ್ನಿಟ್ಟುಕೊಂಡು ಅನೇಕ ಚಿಂತಕರು ತಾವು ಕಾಣಹೊರಟ, ಅಥವಾ ಕಟ್ಟಹೊರಟ ಹೊಸಲೋಕದ ಕಡೆಗೆ ತಮ್ಮ ಅಧ್ಯಯನವನ್ನು ನಡೆಸಿಕೊಂಡು ಹೋಗುತ್ತಾರೆ. ಅವರ ಅಧ್ಯಯನದ ಹಾದಿಯಲ್ಲಿ ಅನೇಕ ವಾಸ್ತವ ಸತ್ಯಗಳನ್ನು ದಾಖಲಿಸುತ್ತಾ ನಡೆದಿರುವುದನ್ನು ಕಾಣಬಹುದು. ಸಂಸ್ಕೃತಿ ಶೋಧನೆಯ ನೆಪದಿಂದ ಕನ್ನಡದಲ್ಲಿ ಇಲ್ಲಿಯ ಬದುಕಿನ, ಭಾಷೆಯ, ನೆಲೆ-ನಿಲುವನ್ನು ಹುಡುಕ ಹೊರಟ ಮಹತ್ವದ ಹೆಜ್ಜೆಗಳು ಮೂಡಿವೆ. ಶಂಭಾ ಜೋಶಿ, ಹುಲ್ಲೂರ ಶ್ರೀನಿವಾಸ ಜೋಯಿಸ, ಕಪಟರಾಳ ಕೃಷ್ಣರಾವ ರಂತಹ ಹಿರಿಯ ತಲೆಮಾರಿನಿಂದ ಹಿಡಿದು ಈಚಿನ ಎಂ. ಚಿದಾನಂದಮೂರ್ತಿ ಮುಂತಾದ ವಿದ್ವಾಂಸರವರೆಗೆ ಇಂತಹ ಚಿಂತಕರ ಶೋಧನೆಗೆ ಸಿಲುಕದ, ಮತ್ತು ಶೋಧಿಸದೆ ಬಿಟ್ಟ ಅನೇಕ ಅಂಶಗಳು ಇರುತ್ತವೆ. ಆ ಮಹತ್ವದ ಅಂಶಗಳೆಡೆಗೆ ಗಮನ ಸೆಳೆಯುವಂತಹ ಹೊಣೆಗಾರಿಕೆಯನ್ನು ನಮ್ಮ ಅಧ್ಯಯನಗಳು ಹೊರಬೇಕಾಗಿದೆ. ಈ ನಿಟ್ಟಿನಲ್ಲಿ ದೇವುಡು ನರಸಿಂಹಶಾಸ್ತ್ರಿಗಳ ಚಿಂತನೆಯನ್ನು ಆಧರಿಸಿ ಸಂಸ್ಕೃತಿಯ ಶೋಧನೆಗೆ ತೊಡಗಲಾಗಿದೆ.

ಅಧ್ಯಯನದ ಉದ್ದೇಶ:

ದೇವುಡು ನರಸಿಂಹಶಾಸ್ತ್ರಿಗಳು ಕನ್ನಡ ಸಾಹಿತ್ಯದ ಮಹತ್ವದ ಘಟ್ಟವಾದ ನವೋದಯ ಸಂದರ್ಭದಲ್ಲಿ ಕಂಡುಬರುತ್ತಾರೆ. ಇವರು ಸಾಹಿತಿ ಮತ್ತು ಸಂಸ್ಕೃತಿ ಚಿಂತಕರು ಕೂಡ. ಸಮನ್ವಯ ನೋಟದ ಚಿಂತಕರಾಗಿ, ದೇವುಡು ಸಮಕಾಲೀನ ಸಂಸ್ಕೃತಿ ಚಿಂತಕರಿಗಿಂತ ಭಿನ್ನರಾಗಿ ಕಂಡುಬರುತ್ತಾರೆ. ಈ ದೃಷ್ಟಿಯಿಂದ ದೇವುಡು ಅವರ ಸಂಸ್ಕೃತಿ ಚಿಂತನೆಯನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. 'ದೇವುಡು ಅವರದ್ದಾದ ಒಂದು ಸಂಸ್ಕೃತಿ ಚಿಂತನೆ

ಎಂಬುದಿದೆಯೆ? ಇದ್ದರೆ ಅದು ಸಂಸ್ಕೃತಿಯ ಉದ್ದಗಲವನ್ನು ಪ್ರತಿಪಾದಿಸಲ್ಪಡುವುದೆ? ಸಮಕಾಲೀನ ಸಂಸ್ಕೃತಿ ಚಿಂತಕರಿಗಿಂತ ದೇವುಡು ಅವರ ಚಿಂತನೆ ಹೇಗೆ ಭಿನ್ನ? ಮತ್ತು ಹೀಗೆ ಪ್ರತಿಪಾದಿಸಲ್ಪಟ್ಟ ಸಂಸ್ಕೃತಿ ಚಿಂತನೆಯ ಫಲಶ್ರುತಿಗಳಾವುವು? ಇಂತಹ ಪ್ರಶ್ನೆಗಳಿಗೆ ಪರಿಹಾರವನ್ನು ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳಲಾಗುವುದು.

ಅಧ್ಯಯನದ ವ್ಯಾಪ್ತಿ:

ಒಟ್ಟು ಸಂಸ್ಕೃತಿಗೆ ಸಂಬಂಧಿಸಿದ ಪೂರ್ವನಿಗದಿತ ಅಂಶಗಳೆಲ್ಲವೂ ದೇವುಡು ಅವರಲ್ಲಿವೆಯೆಂಬ ತಿಳುವಳಿಕೆಯಿಂದ ಹೊರಟ ಅಧ್ಯಯನ ಇದಲ್ಲ. ಬದಲಿಗೆ ದೇವುಡು ಅವರು ಕಟ್ಟಲು ಪ್ರಯತ್ನಿಸಿದ ಸಂಸ್ಕೃತಿ ಚಿಂತನೆಯ ನೆಲೆಗಳಾವುವು ಎಂಬುದನ್ನು ಗುರುತಿಸುವುದು, ಮತ್ತು ಅವುಗಳನ್ನು ಒಂದು ವ್ಯವಸ್ಥಿತ ಸ್ವರೂಪಕ್ಕೆ ಇರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗುವುದು. ಅಧ್ಯಯನದ ಹರವನ್ನು ಕುರಿತು ಹೇಳುವುದಾದರೆ, ದೇವುಡು ಅವರ ಅಗಾಧವಾದ ಸಾಹಿತ್ಯದಲ್ಲಿ ಅವರ ಸೃಜನಶೀಲ ಸಾಹಿತ್ಯಕ್ಕೆ ಕೈಹಾಕದೇ ಕೇವಲ ಸೃಜನೇತರ ಸಾಹಿತ್ಯದ ಮೂಲಕ ಅಧ್ಯಯನಕ್ಕಿಳಿಯಲಾಗಿದೆ. ಅದರಲ್ಲೂ ದೇವುಡು ಅವರ ಕರ್ನಾಟಕದ ಸಂಸ್ಕೃತಿ ಕುರಿತ ಉಪನ್ಯಾಸಗಳ ಸಂಕಲನ ಕೃತಿ 'ಕರ್ನಾಟಕ ಸಂಸ್ಕೃತಿ' ಕೃತಿಯನ್ನು ಉಪಯುಕ್ತವಾಗಿ ಬಳಸಿಕೊಳ್ಳಲಾಗಿದೆ. ವಿವಿಧ ಪ್ರಕಾರಗಳಲ್ಲಿ ಸಂಕೀರ್ಣವಾಗಿ ಹರಿದ ದೇವುಡು ಅವರು ಸಾಹಿತ್ಯವನ್ನು ವಿಭಾಗಿಸಿ ನೋಡುವುದು ತುಸು ಕಷ್ಟವೆನಿಸಿದರೂ, ಸಂಸ್ಕೃತಿ ಚಿಂತನೆಯ ದೃಷ್ಟಿಯಿಂದ ಈ ವಿಭಾಗೀಕರಣ ಅನಿವಾರ್ಯವೆನಿಸುತ್ತದೆ. ಸಿ. ಎನ್. ಶಿವಕುಮಾರ ಸ್ವಾಮಿ ಗುರುತಿಸಿರುವಂತೆ; ದೇವುಡು ಅವರ ಚಿಂತನೆ ಹೊರಡುವುದು. ಎರಡು ನೆಲೆಗಳಲ್ಲಿ; ಒಂದು ಸೃಜನಶೀಲ ಇನ್ನೊಂದು ಸೃಜನೇತರ.[೩]

ಪ್ರಸ್ತುತ ಅಧ್ಯಯನಕ್ಕೆ ದೇವುಡು ಅವರ ಸೃಜನೇತರ ಸಾಹಿತ್ಯವನ್ನಷ್ಟೆ ಆಧಾರಾಗಿಟ್ಟುಕೊಳ್ಳಲಾಗಿದೆ. ಸಂಸ್ಕೃತಿಯ ಅಧ್ಯಯನ ಮಾಡಲು ಹೊರಡುವವನ ಹೊಣೆಗಾರಿಕೆಯು ಹಲವು ಬಗೆಯದು. ಅಧ್ಯಯನಕ್ಕೆ ಅಗತ್ಯವಾದ ತಾತ್ವಿಕತೆಯನ್ನು ರೂಢಿಸಿಕೊಳ್ಳುವುದು. ಹಾಗೂ ರೂಪಿಸಿಕೊಳ್ಳುವುದು, ಒಂದು ನೆಲೆಯಾದರೆ ಸದಾ ಬದಲಾಗುತ್ತಿರುವ ಆಕರಗಳನ್ನು ಸಂಗ್ರಹಿಸಲು ಹಾಗೂ ವಿಶ್ಲೇಷಣೆ ಮಾಡಲು ಅಗತ್ಯವಾದ ವಿಧಾನಗಳ ನಿರ್ಮಾಣ ಮತ್ತೊಂದು

ಸಾಲು. ಪರಸ್ಪರ ಸಂಬಂಧವೇ ಇಲ್ಲದಂತೆ, ಬೇರೆ ಬೇರೆ 'ಕೂಡುಕೋಣೆ'ಗಳಲ್ಲಿ(compartments) ನಡೆದಿರುವ ಅಧ್ಯಯನಗಳ ಸಂಬಂಧವನ್ನು ಗುರುತಿಸಿ ಒಟ್ಟಂದದ ಸಂಯೋಜನೆಯನ್ನು ತರುವ ಹೊಣೆಯೂ ಇವರದೇ ಆಗಿರುತ್ತದೆ. ಆದ್ದರಿಂದ ಇಲ್ಲಿ ದೇವುಡು ಅವರ ಚಿಂತನೆಯನ್ನು, ಅದು ಹಾದು ಹೋಗಿರುವ ಕವಲುಗಳನ್ನು ಗುರುತಿಸಿ, ಅದರ ವ್ಯಾಪ್ತಿಯನ್ನು ನಿಗದಿಪಡಿಸಿಕೊಳ್ಳಬೇಕಾಗಿದೆ.

ಪ್ರಸ್ತುತ ಸಂಪ್ರಬಂಧವು ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ವ್ಯಾಪ್ತಿಯನ್ನು ಹೇಳಲಾಗಿದೆ. ಎರಡನೆಯ ಅಧ್ಯಾಯವು ಸಂಸ್ಕೃತಿ ಪರಿಕಲ್ಪನೆಯನ್ನು ಕುರಿತ ವಿವರಣೆಗಳನ್ನೊಳಗೊಂಡಿದೆ. ಸಂಸ್ಕೃತಿಯಂತಹ ಪರಿಕಲ್ಪನೆಗಳು ಹುಟ್ಟಿಕೊಳ್ಳುವ ಕಾಲ- ದೇಶ -ಪರಿಸರಗಳ ಹಿನ್ನೆಲೆಯ ನೋಟದೊಂದಿಗೆ ಅದರ 'ಅರ್ಥ' ವ್ಯಾಖ್ಯಾನ'ಗಳನ್ನು ಅನ್ವೇಷಿಸಲಾಗಿದೆ. ಸಂಸ್ಕೃತಿ ಪರಿಕಲ್ಪನೆಯ ಅರ್ಥಗ್ರಹಣದ ಸೂಕ್ಷ್ಮ ಬೆಳವಣಿಗೆಯನ್ನು ಗುರುತಿಸಲಾಗಿದೆ. ಜೊತೆಗೆ ಸಂಸ್ಕೃತಿ'ಯ ಅಧ್ಯಯನಕ್ಕೆ ತಳಹದಿಯಾದ ಇ.ಬಿ.ಟೇಲರ್‌ನಿಂದ ಇಲ್ಲಿಯತನಕ ನಡೆದ ಒಟ್ಟು ಚಿಂತನೆಗಳನ್ನು ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಅನ್ವೇಷಿಸಿಕೊಳ್ಳಲಾಗಿದೆ. ಇಲ್ಲಿ ಮಾನವಶಾಸ್ತ್ರ, ಸಮಾಜಶಾಸ್ತ್ರ, ಧರ್ಮಶಾಸ್ತ್ರ, ಜಾನಪದ ಮುಂತಾದ ವಿವಿಧ ಜ್ಞಾನಶಾಖೆಗಳ ಹಿನ್ನೆಲೆಯಲ್ಲಿ 'ಸಂಸ್ಕೃತಿ' ವ್ಯಾಖ್ಯಾನಗಳನ್ನು ಆಯ್ದು ಕಟ್ಟಲಾಗಿದೆ. ಮೂರನೆಯ ಅಧ್ಯಾಯದಲ್ಲಿ ದೇವುಡು ಅವರ ಸಂಸ್ಕೃತಿ ಚಿಂತನೆಯನ್ನು,ಅವರ ಚಿಂತನೆಗಳನ್ನು ಆಧರಿಸಿ ಚರ್ಚಿಸಲಾಗಿದೆ.ನಾಲ್ಕನೆಯ ಅಧ್ಯಾಯದಲ್ಲಿ ದೇವುಡು ಅವರ ಸಮಕಾಲೀನ ಸಂಸ್ಕೃತಿ ಚಿಂತಕರ ವಿಚಾರಗಳನ್ನು ತೌಲನಿಕವಾಗಿ ಚರ್ಚಿಸಲಾಗಿದೆ. ಅವರ ಇಂತಹ ಯೋಚನೆಗಳಿಗೆ ಕಾರಣವಾದ ಆ ಕಾಲದ ಒತ್ತಡಗಳನ್ನು ಕುರಿತು ವಿವೇಚಿಸಲಾಗಿದೆ. ಅದರಂತೆ ಅಧ್ಯಾಯ ಐದರಲ್ಲಿ ಕರ್ನಾಟಕ ಸಂಸ್ಕೃತಿಯ ಬಗೆಗಿನ ದೇವುಡು ಅವರ ಚಿಂತನೆಯ ಎಳೆಗಳನ್ನು ಶೋಧಿಸುವ ಪ್ರಯತ್ನಮಾಡಲಾಗಿದೆ.

ಅನುಬಂಧದಲ್ಲಿ ಆಕರಗಳು, ದೇವುಡು ಅವರ ಕೃತಿಗಳು, ದೇವುಡು ಅವರ ಜೀವನದ ಪ್ರಮುಖ ಘಟನೆಗಳನ್ನು ಕೊಡಲಾಗಿದೆ. ಈ ಕ್ರಮದಲ್ಲಿ ಪ್ರಸ್ತುತ ಸಂಪ್ರಬಂಧ ರಚನೆಯಾಗಿದೆ.

ಅಡಿಟಿಪ್ಪಣಿಗಳು:

---

೧. ಚಂದ್ರಶೇಖರ ಕಂಬಾರ : ನೆಲದ ಮರೆಯ ನಿಧಾನ : ಪುಟ-೧೭ : ೧೯೯೩.

೨. 'ಭಾರತದ ಸಂಸ್ಕೃತಿ' ಎಂದರೆ, ಸಂಸ್ಕೃತಿಯ ವೈವಿಧ್ಯತೆಯನ್ನೂ, 'ಭಾರತೀಯ ಸಂಸ್ಕೃತಿ' ಎಂದರೆ, ವೈದಿಕ ಸಂಸ್ಕೃತಿಗೆ ಸೀಮಿತಗೊಳಿಸುವ ಅರ್ಥದಲ್ಲಿ ಈ ಎರಡು ಪದಗಳನ್ನು ಬಳಸಲಾಗುತ್ತದೆ.

೩. ಈ ಪದದ ಅರ್ಥಗ್ರಹಿಕೆಗೆ ಪುರುಷೋತ್ತಮ ಬಿಳಿಮಲೆಯವರ 'ಶಿಷ್ಟ-ಪರಿಶಿಷ್ಟ' ಎಂಬ ಕೃತಿಯನ್ನು ನೋಡಬಹುದು.

೪. ಇ.ಬಿ.ಟೇಲರ್ ಪ್ರಿಮಿಟಿವ್ ಕಲ್ಚರ್ (೧೮೭೧)ನಲ್ಲಿ ಸಂಸ್ಕೃತಿಯ ಬಗೆಗೆ ಪ್ರಥಮವಾಗಿ ವಿಶ್ಲೇಷಣೆಯನ್ನು ಮಾಡಿದ್ದಾನೆ.

೫. ಶಿವಕುಮಾರಸ್ವಾಮಿ ಸಿ.ಎಸ್.: ದೇವೃತು ಸಾಹಿತ್ಯ ಪಾಠಕ : ಪ್ರಸ್ತಾವನೆ.

೬. ರಾಘವೇಂದ್ರರಾವ್ ಎಚ್.ಎಸ್.: ಸಿರಿಗನ್ನಡ (ಸಂಪಾದಕೀಯ) : ೧೯೯೩

ಅಧ್ಯಾಯ-೨

ಸಂಸ್ಕೃತಿ ಪರಿಕಲ್ಪನೆಯ ಅರ್ಥ ಮತ್ತು ವ್ಯಾಪ್ತಿ

'ಸಂಸ್ಕೃತಿ ಪರಿಕಲ್ಪನೆ' ವಸಾಹತುಶಾಹಿ ಶಿಕ್ಷಣ ಕ್ರಮದ ಪ್ರಕಾರಗಳಲ್ಲಿ ಒಂದು. ಈ ಶತಮಾನದ ಆರಂಭದಲ್ಲಿ ಸಾಮಾಜಿಕ, ಮಾನವಿಕ, ಧಾರ್ಮಿಕ ಮುಂತಾದ ವಲಯಗಳ ತಿಳುವಳಿಕೆಗೆ 'ಸಾಂಸ್ಕೃತಿಕ ಅಧ್ಯಯನ'ಗಳು ಈ ಮೂಲಕ ಮಹತ್ವವಾದವು. ಭಾರತ ದೇಶದ ಐತಿಹಾಸಿಕ ತಿಳುವಳಿಕೆಯು ಮಹತ್ವದ ಹಾದಿಯಲ್ಲಿ ಸಾಗಿತು. ಅನಂತರ ಈ ದೇಶದ ಚರಿತ್ರೆಯೆಂದರೆ ಇಲ್ಲಿಯ ಜನರ ಜೀವನದ ಪ್ರತಿಯೊಂದು ಅಂಶದ ಅಧ್ಯಯನ ಎಂಬ ಧೋರಣೆ ಬಂದಿತು. ದೇಶದ ಕೇವಲ ರಾಜಕೀಯ, ಧಾರ್ಮಿಕ ಅಥವಾ ನಾಗರೀಕತೆಯ ಅಧ್ಯಯನಗಳು ಬಿಡಿಬಿಡಿಯಾಗಿ ನಡೆಯುವುದರಿಂದ ಅಲ್ಲಿನ ಒಟ್ಟು ಬದುಕಿನ ಕಲ್ಪನೆ ದೊರೆಯುವುದಿಲ್ಲ. ಇವೆಲ್ಲವುಗಳನ್ನು ಒಳಗೊಂಡ ಸಮಗ್ರ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ಅಲ್ಲಿನ ಬದುಕನ್ನು ಅರ್ಥೈಸಬೇಕಾಗಿತ್ತು. ಈ ತುರ್ತಿನಿಂದ ಹುಟ್ಟಿಕೊಂಡದ್ದು 'ಸಂಸ್ಕೃತಿ' ಎಂಬ ಪರಿಕಲ್ಪನೆ. ಸಂಸ್ಕೃತಿಯ ಅಧ್ಯಯನವನ್ನು ಒಂದು ರೀತಿಯಲ್ಲಿ ನಮ್ಮನ್ನು ನಾವು ಅರ್ಥಮಾಡಿಕೊಳ್ಳುವುದಕ್ಕೆ ನೆರವಾಗುವ ತಿಳಿವಿನ ಶಿಸ್ತನ್ನಾಗಿ ಪರಿಗಣಿಸಲಾಯಿತು.

ಸಂಸ್ಕೃತಿ ಪರಿಕಲ್ಪನೆಯು ಎರವಲು ಪದವಾಗಿ, ಚಿಂತನೆಯಾಗಿ ನಮಗೆ ಲಭ್ಯವಾದರೂ, ಇದೇ ಅರ್ಥವನ್ನು ಒಳಗೊಳ್ಳುವ 'ಸಂಸ್ಕಾರ' ಎಂಬ ಪದ ನಮ್ಮಲ್ಲಿ ಬಳಕೆಯಲ್ಲಿತ್ತು. ಆದರೆ ಭಾರತೀಯ ಆಧ್ಯಾತ್ಮಿಕ, ತಾತ್ವಿಕ ವ್ಯಾಪ್ತಿಯನ್ನೊಳಗೊಂಡ 'ಸಂಸ್ಕಾರ' ಪದಕ್ಕೆ 'ಸಂಸ್ಕೃತಿ' (Culture) ಪದದಷ್ಟು ವ್ಯಾಪಕತೆ ಇಲ್ಲವೆಂದು ಹೇಳ-

ಬಹುದು. ಮನುಷ್ಯ ಅಧ್ಯಯನ ಮಾಡುವುದು ಮಾನವ ಮತ್ತು ಅವನ ಕೃತಿಗಳನ್ನು ಕುರಿತು. ಅದರಲ್ಲಿ ಮನುಷ್ಯ ತನ್ನನ್ನೇ ಕಾಣುವನು ಮತ್ತು ಅರ್ಥ ಮಾಡಿಕೊಳ್ಳುವನು.೧ ಹೀಗೆ ಮನುಷ್ಯನ ಆದರ್ಶತೆಗೆ ಒತ್ತು ಕೊಡುವ ವ್ಯಕ್ತಿಗತ ಹಿನ್ನೆಲೆಯ 'ಸಂಸ್ಕಾರ'ವು ಅವನ ಅಂತರಂಗ ಮತ್ತು ಬಹಿರಂಗದ ಬದುಕೆಲ್ಲವನ್ನು ಒಳಗೊಳ್ಳುವ 'ಸಂಸ್ಕೃತಿ'ಯಷ್ಟು ವಿಸ್ತಾರಕ್ಕೆ ಚಾಚಿಕೊಳ್ಳಲಾರದು. ಮಾನವನ ಬದುಕನ್ನು ಅವನ ಒಳಗಿನ ವಿವರದಿಂದ ಅರ್ಥೈಸಲು ಪ್ರಯತ್ನಿಸುವ ಮಾನವಶಾಸ್ತ್ರದಿಂದ ಹೊರಟು ಸಮಾಜಶಾಸ್ತ್ರ, ಜಾನಪದಶಾಸ್ತ್ರ, ಪಳೆಯುಳಿಕೆ ಶಾಸ್ತ್ರ ಮುಂತಾದ ಅವನ ಬಹಿರಂಗದ ಬದುಕನ್ನು ಅರ್ಥಮಾಡಿಕೊಳ್ಳಲು ಸಂಸ್ಕೃತಿ ಪರಿಕಲ್ಪನೆಯು ನೆರವಾಗುತ್ತದೆ.

ಸಂಸ್ಕೃತಿಯೆಂಬುದು ಮಾನವವರ್ಗಕ್ಕೆ ಮಾತ್ರ ಸೀಮಿತವಾಗಿರುವ ವಿಚಾರ. ಅವನ ವೈಯಕ್ತಿಕವಾದ ನಡೆ, ನುಡಿಗಳಿಂದ ಹಿಡಿದು ಸಮುದಾಯದ ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು, ವಿಧಿ-ನಿಷೇಧಗಳವರೆಗೆ ಅದು ಚಾಚಿಕೊಂಡಿದೆ. ಸಮಾಜದಲ್ಲಿ ವ್ಯಕ್ತಿಯೊಬ್ಬನ ಬದುಕು ಸಾಂಪ್ರದಾಯಿಕವಾದ ಅನೇಕ ಕಟ್ಟುಪಾಡುಗಳಿಗೆ ಒಳಪಟ್ಟಿರುತ್ತದೆ. ಈ ಸಂಪ್ರದಾಯ ಮೂಲದ ಬದುಕು ಅವನ ಭಾವನೆ ಮತ್ತು ನಡವಳಿಕೆಯನ್ನು ರೂಪಿಸುತ್ತದೆ. ಇದು ಅವನ ಒಟ್ಟು ಬದುಕಿನ ಸಾಂಸ್ಕೃತಿಕತೆಯಾಗಿ ಕಂಡುಬರುತ್ತದೆ. ಈ ದೃಷ್ಟಿಯಿಂದ ಒಂದು ನಿರ್ದಿಷ್ಟ ಸಂಸ್ಕೃತಿಯ ಚೌಕಟ್ಟಿನಲ್ಲಿ ಬೆಳೆದು ಬಂದ ವ್ಯಕ್ತಿಯನ್ನು ಮತ್ತು ಅವನ ಬದುಕನ್ನು ಸಂಪೂರ್ಣವಾಗಿ ಬೇರ್ಪಡಿಸಲು ಸಾಧ್ಯವಿಲ್ಲ. ಅಷ್ಟೇ ಅಲ್ಲ ಕೆಲವು ಸಂದರ್ಭಗಳಲ್ಲಿ ಒಂದು ದೇಶದ ಸಂಸ್ಕೃತಿ ಯಾವುದು, ಒಂದು ಜನತೆಯ ಸಂಸ್ಕೃತಿ ಯಾವುದು ಎಂದು ವರ್ಗೀಕರಿಸಲಾರದಷ್ಟು ಬೆರೆತು ಹೋಗಿರುತ್ತದೆ. ಈ ತೊಡಕುಗಳ ಕಾರಣದಿಂದಾಗಿಯೇ ಸಂಸ್ಕೃತಿ ಎಂದರೆ ಏನು? ಇದೊಂದು ಪರಿಕಲ್ಪನೆಯೋ? ಜೀವನ ವಿಧಾನವೋ? ಇದನ್ನು ಒಂದು ಗ್ರಹಿಕೆಯ ನೆಲೆಗೆ ತಂದು ವ್ಯಾಖ್ಯಾನಿಸಬಹುದೆ? ಹೀಗೆ ಕಂಡುಕೊಂಡ ವ್ಯಾಖ್ಯೆ ಸಂಸ್ಕೃತಿ ಪದಕ್ಕಿರುವ ವ್ಯಾಪ್ತಿಯನ್ನು ಒಳಗೊಳ್ಳಬಹುದೆ? ಈ ಪ್ರಶ್ನೆಗಳಿಗೆ ಇನ್ನೂ ಸಮರ್ಪಕ ಉತ್ತರವನ್ನು ಕಂಡುಕೊಳ್ಳಲಾಗಿಲ್ಲ ಎನ್ನಬಹುದು.೨

ಈ ಕುರಿತು ನಾಗಭೂಷಣ ಪಾಟೀಲ ಅವರ ಲೇಖನ (ಸಂಕ್ರಮಣ, ಏಪ್ರಿಲ್-ಮೇ ೧೯೯೬)ದಲ್ಲಿ ಇನ್ನಷ್ಟು ವಿವರಗಳಿವೆ.

ಸಂಸ್ಕೃತಿ ಪದದ ಮೂಲಾರ್ಥದಿಂದ ಇದರ ವಿವೇಚನೆಗೆ ತೊಡಗಬಹುದು. 'ಸಂಸ್ಕೃತಿ' ಎಂಬ ಪದ ಇಂಗ್ಲೀಷಿನ 'Culture' ಎಂಬ ಪದಕ್ಕೆ ಸಂವಾದಿಯಾಗಿ ನಮ್ಮಲ್ಲಿ ಬಳಕೆಗೊಂಡಿದೆ. ಈ ಪದ ನಮಗೆ ಹೊಸದರಂತೆ ತೋರಿದರೂ ಇದರ ಹಿಂದಿರುವ ಅರ್ಥ ಹೊಸದಲ್ಲ. 'Cult' ಎಂಬ ಮೂಲ ಲ್ಯಾಟಿನ್ ಪದದಿಂದ Culture ಪದ ಬಂದಿದೆ. 'ಕಲ್ಟ್' ಎಂದರೆ ಪಂಥ, ಪಂಗಡ, ಗುಂಪು, ಸಮುದಾಯ ಎಂಬ ಅರ್ಥವನ್ನು ಕೊಡುತ್ತದೆ. ಇನ್ನೊಂದು ಅರ್ಥದಲ್ಲಿ 'Culture' ಪದವು ಆರಾಧಿಸು, ಸೇವೆಮಾಡು ಎಂಬರ್ಥದಲ್ಲಿ ಬಳಕೆಗೊಳ್ಳುತ್ತದೆ. ೩

ಜರ್ಮನ್ ಭಾಷೆಯಲ್ಲಿ 'ಜಾನಪದ ಸಂಸ್ಕೃತಿ'ಯನ್ನು 'Kultur' ಎಂದು ಪ್ರಯೋಗಿಸಲಾಗುತ್ತಿತ್ತು. ೪ ಹೀಗೆ ಸಂಸ್ಕೃತಿ ಪರಿಕಲ್ಪನೆಯು ಅದು ಒಳಗೊಳ್ಳುವ ವಿಶಾಲ ವ್ಯಾಪ್ತಿಯ ಕಾರಣದಿಂದ ಅದರ ಜಟಿಲತೆಯನ್ನು ಕಂಡುಕೊಳ್ಳುವಲ್ಲಿ ಸೋತಿದೆ. ಸುಲಭದಲ್ಲಿ ಹೇಳುವುದಾದರೆ, 'ಸಂಸ್ಕೃತಿ'ಯು ಅರ್ಥ ಗ್ರಹಿಕೆಯ ನೆಲೆಯಿಂದ ಒಂದು ಪರಿಕಲ್ಪನೆಯಾಗಿ ಹುಟ್ಟಿ 'ವಿಚಾರ ಕ್ರಮ'ವಾಗಿ ಒಳಗೊಂಡ ವ್ಯಾಖ್ಯಾನ ರೂಪವನ್ನು ಪಡೆದಿದೆ ಎನ್ನಬಹುದು.

ಅನೇಕ ವಿದ್ವಾಂಸರು 'ಸಂಸ್ಕೃತಿ' ಪದವನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದರು. ಕ್ರಿ. ಶ. ೧೮೬೫ರಲ್ಲಿ ಎಡ್ವರ್ಡ್ ಬರ್ನೆಟ್ ಟೈಲರನ ಕೃತಿ 'Researches in to the early mankind' ನಲ್ಲಿ 'Culture' ಪದದ ಪ್ರಯೋಗಕ್ಕೆ ಮೊದಲಾಯಿತು. ಅಲ್ಲಿಂದ ಇಲ್ಲಿಯವರೆಗೆ ಅನೇಕರು ತಮ್ಮ ತಮ್ಮ ಅಧ್ಯಯನ ಕ್ಷೇತ್ರಗಳ ಹಿನ್ನೆಲೆಯಲ್ಲಿ 'ಸಂಸ್ಕೃತಿ' ಪದಕ್ಕೆ ವ್ಯಾಖ್ಯಾನ ನೀಡಲು ಪ್ರಯತ್ನಿಸಿದ್ದಾರೆ. ಆ ಒಂದೊಂದು ವ್ಯಾಖ್ಯಾನವೂ 'Culture' ಪದದ ವಿಶಾಲತೆಗೆ ತಮ್ಮ ಮಿತಿಗಳ ನಡುವೆಯೂ ಚಾಚಿದೆ ಎನ್ನಬಹುದು. ಇಂದು ಮಾನವಶಾಸ್ತ್ರ, ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಜಾನಪದ ಶಾಸ್ತ್ರ ಹೀಗೆ ವಿಭಿನ್ನ ಜ್ಞಾನಶಾಖೆಗಳು ಸಾಂಸ್ಕೃತಿಕ ಪರಿಪ್ರೇಕ್ಷೆಯಲ್ಲಿ ಅಧ್ಯಯನವನ್ನು ಆರಂಭಿಸಿವೆ. ಆದರೂ ಸಮಗ್ರ ಎನ್ನಬಹುದಾದ ವ್ಯಾಖ್ಯಾನವನ್ನು ಕಂಡುಕೊಳ್ಳಲಾಗಿಲ್ಲವೆಂದೇ ಹೇಳಬಹುದು.

'ಸಂಸ್ಕೃತಿ'ಯನ್ನು ವ್ಯಾಖ್ಯಾನಿಸುವ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳನ್ನು ಅದರ ವ್ಯಾಪ್ತಿಯ ಹಿನ್ನೆಲೆಯಲ್ಲಿ ವಿಚಾರಿಸಿಕೊಳ್ಳಬೇಕಾಗಿದ್ದಿತು. ''ಭೌತಿಕ ದಾಖಲೆಗಳು ಆಕರಗಳ ಮೂಲಕ ಸಂಸ್ಕೃತಿಯನ್ನು ಗ್ರಹಿಸಿದ್ದರಿಂದ ಅದರ ಸ್ವರೂಪಕಥನ ನಿಶ್ಚಿತವಾಯಿತು. 'ಸಂಸ್ಕೃತಿ' ಎಂದರೆ ಇಲ್ಲಿ ಜನಾಂಗದ ನೆನಪು, ಅದರ ವೃತ್ತಿ, ಜನಾಂಗದ ಹೊಗೆ. ಪಾಶ್ಚಾತ್ಯ ವಿದ್ವಾಂಸರ ಮಟ್ಟಿಗೆ ಈ ಬಗೆಯ ಸಂಸ್ಕೃತಿ ಕೆಲವು ತಾತ್ವಿಕ ಸಮಸ್ಯೆಗಳಿಗೆ ಕಾರಣವಾಯಿತು. ಚಾರಿತ್ರಿಕ, ಭೌತಿಕ, ದಾಖಲೆಗಳಿಂದ ಸಿದ್ಧಗೊಳಿಸಿದ 'ಏಕಘನ' ಕೃತಿಯ ಸಂಸ್ಕೃತಿಯು ಆಕೃತಿಯೊಡನೆ ಸಮಕಾಲೀನ ಜೀವನದ ಸ್ವರೂಪವನ್ನು ಹೊಂದಿಸಿ ನೋಡುವುದು ಅಸಾಧ್ಯವಾದದ್ದೇ ಈ ಸಮಸ್ಯೆಯ ತಿರುಳು''೩.

ಜಾಗತಿಕ ಮಟ್ಟದಲ್ಲಿ ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದಲ್ಲಿ ಸಂಸ್ಕೃತಿಯ ಪರಿಕಲ್ಪನೆ ಅರ್ಥೈಸಿಕೊಳ್ಳುತ್ತಿದ್ದುದು ಮುಖ್ಯವಾಗಿ ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ. ಇದನ್ನೇ 'ಮಾಡರ್ನಿಸಂ' ಎಂಬ ಕಾಲಘಟ್ಟದ ಹೆಸರಿನಲ್ಲಿ ಸಂಸ್ಕೃತಿಯ ಬೆಳವಣಿಗೆಯನ್ನು ಗುರುತಿಸಲಾಯಿತು. ಮಾಡರ್ನಿಸಂ, ವರ್ತಮಾನವನ್ನು ಅದು ಭವಿಷ್ಯದ ಪೂರ್ವಭಾವೀ ತಯಾರಿ ಎಂದತ್ತೇ ಪರಿಭಾವಿಸಿತು. ಅಲ್ಲದೆ ಅದು ಕಾಲ-ದೇಶವನ್ನು ಅವುಗಳ ಲಾಗಾಯ್ತಿನ ಸಾಂದರ್ಭಿಕ ಮತ್ತು ಸಮುದಾಯಿಕ ನೆಲೆಗಳಿಂದ ಬೇರ್ಪಡಿಸಿ ಅದಕ್ಕೆ ವಿಶ್ವಾತ್ಮಕ ಮೌಲ್ಯಗಳ ಏಕರೂಪವನ್ನು, ಪ್ರತಿಯೊಬ್ಬನ ವ್ಯಕ್ತಿತ್ವದ ವಿಕಾಸವೇ ಅತ್ಯಂತ ಮಹತ್ವದ್ದು ಎಂದು ಅದು ತಿಳಿಯಿತು. ಪೋಸ್ಟ್‌ಮಾಡರ್ನಿಸಂ ಈ ಎಲ್ಲದರ ಸ್ವಯಂಘೋಷಿತ ಉದ್ದೇಶಗಳನ್ನು ಪ್ರಶ್ನಿಸುತ್ತದೆ. ಪೋಸ್ಟ್‌ಮಾಡರ್ನಿಸಂ, ರಾಷ್ಟ್ರೀಯತೆಯ ಒಂದೇ ಕೇಂದ್ರದ ಬದಲು, ರಾಷ್ಟ್ರವೆಂಬ ಸಂರಚನೆಯ ಒಳಗೆ ಇರುವ ಜನಾಂಗಿಕ ವೈವಿಧ್ಯ, ಭಾಷೆ, ಸಂಸ್ಕೃತಿಗಳ ವಿಭಿನ್ನತೆಗಳ ಬಹುರೂಪದ ಮೇಲೆ ಒತ್ತುಕೊಡುತ್ತದೆ. ಈ ಪರಿವರ್ತಿತ ಕಾಲಘಟ್ಟಗಳ ಹಿನ್ನೆಲೆಯಲ್ಲಿ 'ಸಂಸ್ಕೃತಿ ಪರಿಕಲ್ಪನೆ' ಬೆಳೆದಿದೆ.

ಇ.ಬಿ.ಟೈಲರನ ಶೋಧನೆಯಿಂದಲೇ ಈ ತರದ ಅರ್ಥೈಸುವಿಕೆಯನ್ನು ಗಮನಿಸಬಹುದು. ಟೈಲರ ತನ್ನ ಕೃತಿ 'Researohes in to the early mankind' ನಲ್ಲಿ ಸಂಸ್ಕೃತಿ ಕುರಿತ ನೇರ ಪ್ರಸ್ತಾಪಕ್ಕೆ ತೊಡಗುತ್ತಾನೆ. ಆದರೂ ಆತ ತನ್ನ ಚಿಂತನೆಗೆ ಗ್ರಾಸ ಒದಗಿಸಿದ ಜರ್ಮನ ಚಿಂತಕರನ್ನು ಸ್ಮರಿಸುತ್ತಾನೆ. ಈ ಕೃತಿಯಲ್ಲಿ ಟೈಲರ 'ಸಂಸ್ಕೃತಿ ಚಿಂತನೆ'ಯ ಮೂಲತತ್ವಗಳನ್ನಷ್ಟೇ ಹೇಳುತ್ತಾನೆ. ಮುಂದೆ ೧೮೭೧ರಲ್ಲಿ ಬರೆದ 'Primative oulture' ನಲ್ಲಿ; ''ಸಂಸ್ಕೃತಿಯೆಂಬುದು ಸಮಾಜದ ಸದಸ್ಯನಾಗಿ ಮಾನವ ತಾನು ಅರ್ಜಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೀತಿ, ನ್ಯಾಯ, ಸಂಪ್ರದಾಯ ಮತ್ತಿತರ ಸಾಮರ್ಥ್ಯ ಹಾಗೂ ಅಭ್ಯಾಸಗಳ ಒಟ್ಟು ಮೊತ್ತ''.೫ ಎಂದು ವ್ಯಾಖ್ಯಾನಿಸುವ ಮೂಲಕ ಸಂಸ್ಕೃತಿ ಪದದ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿದನು.

ಮಾನವನ ಸಾಮಾಜಿಕ ಬದುಕನ್ನು ಪ್ರತಿಬಿಂಬಿಸುವ ಈ ವ್ಯಾಖ್ಯಾನ ಆಗತಾನೆ ಆರಂಭವಾಗಿದ್ದ ಮಾನವಶಾಸ್ತ್ರದ ಅಧ್ಯಯನದಲ್ಲಿ ಮಹತ್ವದ ಸ್ಥಾನಪಡೆಯಿತು. ಆ ಕಾರಣದಿಂದಾಗಿ ಸಂಸ್ಕೃತಿ ಚಿಂತನೆಗೆ ತೊಡಗುವ ಅಧ್ಯಯನ ಶಿಸ್ತುಗಳೆಲ್ಲವೂ ಟೈಲರನ ವ್ಯಾಖ್ಯಾನವನ್ನು ವಿಮರ್ಶಿಸದೆ ಮುಂದೆ ಹೋಗುವಂತಿಲ್ಲ. ಟೈಲರನ ನಂತರ ಅನೇಕ ವಿದ್ವಾಂಸರು ಸಂಸ್ಕೃತಿ ಪದಕ್ಕೆ ವ್ಯಾಖ್ಯಾನ ನೀಡಲು ಪ್ರಯತ್ನಿಸಿದರು.

'ಸಾಮಾಜಿಕ ಸಂಪ್ರದಾಯಗಳ ಒಟ್ಟು ಮೊತ್ತವೇ ಸಂಸ್ಕೃತಿ ೬ ಎಂಬ ಲೂವಿಯ ಅಭಿಪ್ರಾಯವು ಸಾಮಾಜಿಕ ವ್ಯವಸ್ಥೆಯನ್ನು ಒಪ್ಪಿಕೊಂಡ ಮಾನವನು ತಾನು ಬದುಕಿನಲ್ಲಿ ಅನುಸರಿಸಿಕೊಂಡು ಬಂದ ಅಥವಾ ಒಪ್ಪಿಕೊಂಡು ಬಂದ ಸಂಪ್ರದಾಯಗಳ ಮೊತ್ತ ಒಂದು ಸಂಸ್ಕೃತಿಯಾಗಬಲ್ಲದು, ಎಂಬ ಅರ್ಥವನ್ನು ಸೂಚಿಸುತ್ತದೆ. 'ಸಮಾಜದ ಸಂಪ್ರದಾಯಗಳ ಒಟ್ಟು ಮೊತ್ತ' ಎನ್ನುವಲ್ಲಿ ಮುಖ್ಯವಾಗಿ ಸಾಮಾಜಿಕ ದೃಷ್ಟಿಕೋನದಿಂದ ಅರ್ಥೈಸಲು ಪ್ರಯತ್ನಿಸ-ಲಾಗಿದೆ ಎನ್ನಬಹುದು.

ಪರಿಸರದಲ್ಲಿ ಮಾನವ ನಿರ್ಮಿತ ಭಾಗವೇ ಸಂಸ್ಕೃತಿ ೭ ಎನ್ನುವ ಹರಸ್ಕೋವಿಟ್ಸನ ವಾದವು ಪ್ರಧಾನವಾಗಿ ಮಾನವನು ತಾನು ನಿರ್ಮಿಸಿಕೊಂಡ ಬದುಕಿನ ನೆಲೆಗಳನ್ನು, ನಿಲುವುಗಳನ್ನು ಒಳಗೊಂಡಿದೆ ಎಂದು ಹೇಳಬಹುದು. ಮಾನವಶಾಸ್ತ್ರದ ಹಿನ್ನೆಲೆಯ ಈ ಹೇಳಿಕೆ ಅವನ ಬದುಕಿನ ವ್ಯಾಪ್ತಿಯನ್ನು ಒಳಗೊಂಡು ವಿವೇಚನೆಗೆ ದಾರಿ ಮಾಡುತ್ತದೆ.

ಬುದ್ಧಿಗೆ ತಿಳುವಳಿಕೆಯನ್ನು ಸಂಪಾದಿಸಿಕೊಡಬೇಕೆಂಬ ಶುದ್ಧ ವಿಜ್ಞಾನಾಕಾಂಕ್ಷೆಯ ಬಲದಿಂದ ಮಾತ್ರವೇ ಅಲ್ಲದೆ, ಜನಕ್ಕೆ ಒಳ್ಳೆಯದನ್ನು ಮಾಡಬೇಕೆಂಬ ಸಮಾಜ ಹಿತಾಕಾಂಕ್ಷೆಯ ಮತ್ತು ಧರ್ಮಾಕಾಂಕ್ಷೆಯ ಬಲದಿಂದಲೂ ಪ್ರೇರಿತವಾಗಿ ನಡೆಯತಕ್ಕದ್ದು ಸಂಸ್ಕೃತಿ ೮ ಎಂಬ ಮ್ಯಾಥ್ಯು ಆರ್ನಾಲ್ಡ್‌ನ ಯೋಚನೆಯು ಜೀವನದ ಪ್ರತಿಯೊಂದು ಸನ್ನಿವೇಶದಲ್ಲಿಯೂ ನಮ್ಮ ಮನೋಭಾವ, ವರ್ತನೆ ಔಚಿತ್ಯಪೂರ್ಣವಾಗುವಂತೆ ಮಾಡುವ ಪ್ರಯತ್ನವೇ ಸಂಸ್ಕೃತಿ. ಆತ್ಮ ಶಿಕ್ಷಣದ ಹಿನ್ನೆಲೆಯ ಆರ್ನಾಲ್ಡನ ವ್ಯಾಖ್ಯಾನವು ಮುಖ್ಯವಾಗಿ ಆಧ್ಯಾತ್ಮಿಕ ಸ್ವರೂಪದ್ದು. ಈತನ ಪ್ರಕಾರ ಮನುಷ್ಯನ ಅಂತರಂಗವು ಆತನ ಬಹಿರಂಗದ ಬದುಕನ್ನು ನಿಯಂತ್ರಿಸಬಲ್ಲದು. ಕಾರಣ ಅಂತರಂಗ ಶುದ್ಧತೆ ಸಂಸ್ಕೃತಿಯಾಗಬಲ್ಲದು ಎಂದು ಹೇಳಿದನು. ಮ್ಯಾಥ್ಯು ಆರ್ನಾಲ್ಡನ ಸಂಸ್ಕೃತಿ ಚಿಂತನೆಯು ಮಾನವಶಾಸ್ತ್ರಜ್ಞರ ಚಿಂತನೆಗಿಂತ ಭಿನ್ನ ಸ್ವರೂಪದ್ದಾಗಿದೆ. ಈತನ ಸಂಸ್ಕೃತಿ ವಿವೇಚನೆ ವ್ಯಕ್ತಿಗತ ಹಿನ್ನೆಲೆಯುಳ್ಳದು.

ಸಂಸ್ಕೃತಿ ಅಂಶಗಳು ಪ್ರಭಾವಿಸುವ ಮತ್ತು ಪ್ರತಿಪಾದಿಸುವ ಪ್ರಕ್ರಿಯೆಯೆಡೆಗೆ ಗಮನ ಸೆಳೆದ ಕ್ಲಕಾನ್ ಮತ್ತು ಕೆಲ್ಲಿಯವರ ಅಭಿಪ್ರಾಯಗಳು ಸಂಸ್ಕೃತಿಗೆ ಬೇರೆಯದೇ ಅರ್ಥವನ್ನು ಕೊಡುತ್ತವೆ. ಅವರು ಸಂಸ್ಕೃತಿಯ ಬಗ್ಗೆ ವಿವೇಚನೆಗೆ ತೊಡಗುತ್ತಾ, ''ಜನರ ವರ್ತನೆಗೆ ಯುಕ್ತಮಾರ್ಗದರ್ಶಿಗಳಾಗಿ ಯಾವುದೇ ಒಂದುಗೊತ್ತಾದ ಕಾಲದಲ್ಲಿ ಜೀವಿಸಿರಬಲ್ಲ, ಐತಿಹಾಸಿಕವಾಗಿ ಸೃಜನಗೊಂಡ ಮಾದರಿಗಳು''೯. ಸಂಸ್ಕೃತಿ-ಸಮಾಜ ಮತ್ತು ಮಾನವಶಾಸ್ತ್ರಗಳ ಸಂಯೋಜಿತ ಸ್ವರೂಪದ ಚಿಂತನೆಯನ್ನು ಹ್ಯಾಮಂಡನ ಹೇಳಿಕೆಯಲ್ಲಿ ಕಾಣಬಹುದು. ವಿಶೇಷವಾಗಿ ಇವರ ಚಿಂತನೆಯು ಸಂಸ್ಕೃತಿಯ ಸಾರ್ವತ್ರೀಕರಣದ ಕಡೆಗೆ ಗಮನ ಸೆಳೆಯುವುದು. ಸಂಸ್ಕೃತಿ ಎಂಬುದು ಸಾಮಾಜಿಕವಾಗಿ ಸಂಭವಿಸಬಲ್ಲ, ವ್ಯಕ್ತಿಕಲಿತ ಮತ್ತು ಸಂಗ್ರಹಿತ ಅನುಭವ. ಅದು ಸಾಮೂಹಿಕವೂ, ಸಾರ್ವತ್ರಿಕವೂ ಆಗಿರುವಂಥದು ೧೦. ಎಂದು ವಿವರಣೆ ನೀಡುತ್ತಾನೆ.

ಮಾನವಶಾಸ್ತ್ರಜ್ಞನಾದ ಕ್ರೋಬರನ ಚಿಂತನೆಯು ಸಂಸ್ಕೃತಿಯನ್ನು ಅರ್ಥೈಸುವಲ್ಲಿ ವ್ಯಾಪಕವಾಗಿ ಬಳಕೆಯಾಗಿದೆ ಎನ್ನಬಹುದು. ಕ್ರೋಬರ ಜಗತ್ತಿನ ಅನೇಕ ಸಂಸ್ಕೃತಿ ಚಿಂತಕರ ವ್ಯಾಖ್ಯಾನಗಳನ್ನು ಸಂಗ್ರಹಿಸುತ್ತಾನೆ ೧೧. ಮತ್ತು ತನ್ನದೇ ಆದ ವ್ಯಾಖ್ಯಾನವನ್ನು ನೀಡುತ್ತಾನೆ. ಕಲಿಕೆಯಿಂದ ಬಂದ ಮತ್ತು ತಲೆಮಾರುಗಳ ಮೂಲಕ

ಸಂವಹನಗೊಳ್ಳುವ ಚಾಲಕ ಪ್ರಕ್ರಿಯೆ, ಸಂಪ್ರದಾಯ, ತಂತ್ರ ವಿಧಾನ, ಭಾವನೆ ಮತ್ತು ಮೌಲ್ಯಗಳು ಅವು ಪ್ರಚೋದಿಸುವ ನಡವಳಿಕೆಗಳ ಸಮೂಹ, ಸಂಸ್ಕೃತಿಯು ತನ್ನಷ್ಟಕ್ಕೆ ತಾನೇ ಪ್ರತಿಫಲಿಸದ ಅಥವಾ ಪ್ರವೃತ್ತಿಸದ ವ್ಯಕ್ತಿಗಳ ಎಲ್ಲ ಶಾರೀರಿಕೇತರ ಉತ್ಪನ್ನಗಳು ಮತ್ತು ಚಟುವಟಿಕೆಗಳು ಸಂಸ್ಕೃತಿ ಕಲಿತ ಚಟುವಟಿಕೆಗಳೇ ಆಗಿದೆ. ಈ ಕಲಿತಭಾವನೆ ಸಾಮಾಜಿಕವಾಗಿ ಸಂವಹನಗೊಂಡದ್ದು, ಸಂಪ್ರದಾಯಿಕವಾಗಿ ವ್ಯಾಕರಣಗೊಂಡದ್ದು. ಸಂಸ್ಕೃತಿ ಹೇಗಿತ್ತು ಎಂಬುದಕ್ಕಿಂತ ಹೇಗೆ ಬಂದಿತು ಎಂಬ ವಿಚಾರ ಮುಖ್ಯ ೧೨ ಎಂದು ವ್ಯಾಖ್ಯಾನಿಸುತ್ತಾನೆ. ಈ ವ್ಯಾಖ್ಯಾನವು ಅದೆಷ್ಟು ಸಂಸ್ಕೃತಿಯ ವಿಶಾಲ ವ್ಯಾಪ್ತಿಗೆ ಚಾಚಿಕೊಂಡಿದೆ ಎನ್ನಬಹುದು.

‘ಸಂಸ್ಕೃತಿ’ ಅರ್ಥೈಸುವಿಕೆಯ ಚರ್ಚೆಗಳು ಹತ್ತೊಂಬತ್ತನೆಯ ಶತಮಾನದ ಮಧ್ಯದಿಂದ ಇಂದಿನವರೆಗೂ ನಡೆಯುತ್ತಲೇ ಇವೆ. ‘Culture’ನ ಅನ್ವಯಿಸುವಿಕೆಯು ಮಾನವಿಕ ವಿಜ್ಞಾನಗಳಿಗಷ್ಟೇ ಅಲ್ಲದೇ ಸಮಾಜ ವಿಜ್ಞಾನಗಳ ವ್ಯಾಪ್ತಿಯಲ್ಲಿ ಬರುವ ರಾಜಕೀಯಶಾಸ್ತ್ರ, ಅರ್ಥಶಾಸ್ತ್ರಗಳಂತಹ ಜ್ಞಾನಶಾಖೆಗಳಲ್ಲೂ ನಡೆದಿದೆ. ಹೀಗೆ ಅನ್ವಯಿಸುವಿಕೆಯ ಕಾರಣದಿಂದಾಗಿ ಸಂಸ್ಕೃತಿ ಪದದ ಅರ್ಥವು ಕೆಲವು ಕಡೆ ಸಂದಿಗ್ಧತೆಗೆ ಎಡೆಯಾಗುತ್ತಿದೆ. ‘Culture’ ಎಂಬ ಪದವು ಇಂಗ್ಲಿಷಿನಲ್ಲಿ ಎಷ್ಟರ ಮಟ್ಟಿನ ಬಳಕೆಯನ್ನು ಪಡೆದಿದೆಯೆಂದರೆ ಅದನ್ನು ತಪ್ಪು ತಪ್ಪಾಗಿ ಭಿನ್ನಾರ್ಥಗಳಲ್ಲಿ ಬಳಸಲಾಗುತ್ತಿದೆ ೧೩

ಟಿ. ಎಸ್. ಎಲಿಯಟ್ ‘ಸಂಸ್ಕೃತಿ’ ಪದದ ದ್ವಂದ್ವಾರ್ಥವನ್ನು ಮನಗಂಡು, ಸಮರ್ಪಕ ಎನ್ನುವಂತಹ ವಿವರಣೆಯನ್ನು ನೀಡುವ ಪ್ರಯತ್ನ ಮಾಡುತ್ತಾನೆ. ಆತ ಯೋಚಿಸಿದಂತೆ; ಸಂಸ್ಕೃತಿಯೆಂಬುದು ಒಬ್ಬ ವ್ಯಕ್ತಿಯಲ್ಲಿ ಕಂಡುಬರುವುದಕ್ಕಿಂತ ಹೆಚ್ಚಾಗಿ ಒಂದು ಸಮಾಜದ ಅಥವಾ ಗುಂಪಿನ ‘ಜೀವನ ವಿಧಾನ’ದಲ್ಲಿ ಕಂಡುಬರುತ್ತದೆ. ಸಂಸ್ಕೃತಿಯೆಂಬುದು ಒಂದು ಜನಾಂಗದ ಸಮಸ್ತ ಕ್ರಿಯೆಗಳನ್ನು, ಅಭಿರುಚಿಗಳನ್ನು ಒಳಗೊಳ್ಳುತ್ತದೆ. ವ್ಯಕ್ತಿಗಳು ಸವಿದ್ದರೂ ಈ ಸಂಸ್ಕೃತಿಯನ್ನು ಮುಂದಿನ ಜನಾಂಗಕ್ಕೆ ಹರಿಸುತ್ತಾರೆ. ಉತ್ತಮರಾದವರು ತಮ್ಮ ಚಟುವಟಿಕೆಗಳಿಂದ ಆ ಸಂಸ್ಕೃತಿಯ ಪ್ರಗತಿಗೆ ಕಾರಣರಾಗುತ್ತಾರೆ ೧೪. ಎಲಿಯಟ್ ಇದನ್ನು ಇನ್ನಷ್ಟು ಸ್ಪಷ್ಟವಾದ ವ್ಯಾಖ್ಯಾನಗಳಲ್ಲಿ ಹೀಗೆ ಹೇಳುತ್ತಾನೆ. ‘‘ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಜೀವನ ವಿಧಾನವೇ ಸಂಸ್ಕೃತಿ.

ಈ ಸಂಸ್ಕೃತಿಯು ಅವರ ಕಲೆಗಳಲ್ಲಿ , ಸಾಮಾಜಿಕ ವ್ಯವಸ್ಥೆಯಲ್ಲಿ, ಅವರ ವಿಚಾರ ವ್ಯವಹಾರಗಳಲ್ಲಿ, ಧರ್ಮದಲ್ಲಿ ವ್ಯಕ್ತವಾಗುತ್ತದೆ. ಆದರೆ ಇವೆಲ್ಲವನ್ನು ಒಟ್ಟಿಗೆ ಸೇರಿಸಿದರೂ ಅದು ಸಂಸ್ಕೃತಿಯಾಗಲಾರದು. ಮನುಷ್ಯನ ದೇಹವನ್ನು ಹೇಗೋ ಹಾಗೆ ಸಂಸ್ಕೃತಿಯನ್ನು ಈ ವಿಭಾಗಗಳಾಗಿ ವಿಭಜಿಸಬಹುದು. ದೇಹದ ಅಂಗಗಳ ಮೊತ್ತವೆ ಹೇಗೆ ಮನುಷ್ಯ ಅಲ್ಲವೋ ಹಾಗೆ ಆ ಜನಾಂಗಗಳ ಕಲೆಗಳ, ಸಂಪ್ರದಾಯಗಳ, ಧಾರ್ಮಿಕ ಕೃತ್ಯಗಳ ಮೊತ್ತವೇ ಸಂಸ್ಕೃತಿ ಆಗಲಾರದು. ಇವು ಒಂದರ ಮೇಲೊಂದು ಪ್ರಭಾವವನ್ನು ಬೀರುತ್ತವೆ. ಒಂದನ್ನು ಅರಿಯಲು ಎಲ್ಲವನ್ನೂ ಅರಿಯಬೇಕು. ಒಬ್ಬ ಕಲಾವಿದನ ಅಥವಾ ತತ್ವಜ್ಞನ ಸಂಸ್ಕೃತಿಯು ಒಬ್ಬ ಗಣಿ ಕೆಲಸದವನ ಅಥವಾ ರೈತನ ಸಂಸ್ಕೃತಿಯಿಂದ ಸ್ವಲ್ಪ ಭಿನ್ನ. ಆದರೆ ಒಂದು ಆರೋಗ್ಯಕರವಾದ ಸಮಾಜದಲ್ಲಿ ಇವೆಲ್ಲವೂ ಒಂದೇ ಸಂಸ್ಕೃತಿಯ ಅಂಗಗಳು. ಕಲಾವಿದ, ಕವಿ, ತತ್ವಜ್ಞಾನಿ, ರಾಜಕಾರಣಿ, ಶ್ರಮಜೀವಿ ಇವರೆಲ್ಲರಿಗೆ ಒಂದು ಸಮಾನವಾದ ಸಂಸ್ಕೃತಿ ಇರುತ್ತದೆ'' ೧೫. ಎಲಿಯಟನ ಈ ವಾದವು ಮುಖ್ಯವಾಗಿ ಕನ್ನಡ ನವೋದಯ ಸಂದರ್ಭದ ಸಂಸ್ಕೃತಿ ಚಿಂತಕರ ಯೋಚನೆಗೆ ಹತ್ತಿರವಾಗಿದೆ ಎನ್ನಬಹುದು. ಸಂಸ್ಕೃತಿಯನ್ನು ; ಮೇಲಿನವರ ಸಂಸ್ಕೃತಿ, ಕೆಳಗಿನವರ ಸಂಸ್ಕೃತಿ ಎಂದು ವಿಭಾಗಿಸುವುದನ್ನು ಅಲ್ಲಗಳೆಯುವ ದೃಷ್ಟಿಯು ಅವರ ಚಿಂತನೆಗಳಿಗೂ ಎಲಿಯಟನ ವಿಚಾರಗಳಿಗೂ ಸಾಮ್ಯತೆಯನ್ನು ಗುರುತಿಸಬಹುದು.

ಎಲಿಯಟನ ವಿಚಾರಗಳಿಗೆ ಸಮಾಜಶಾಸ್ತ್ರ, ಮಾನವಶಾಸ್ತ್ರಗಳ ಹಿನ್ನೆಲೆ ಇದೆ ಎನ್ನಬಹುದು. ಮನುಷ್ಯನು ವಂಶಾನುಗತವಾದ ಕೆಲವು ಲಕ್ಷಣಗಳೊಡನೆ, ಶಕ್ತಿಗಳೊಡನೆ ಹುಟ್ಟುತ್ತಾನೆ. ಇವುಗಳನ್ನು ಯಾರೂ ಅವನಿಗೆ ಕಲಿಸಿಕೊಡಬೇಕಾಗಿಲ್ಲ. ಆದರೆ ಇನ್ನೂ ಕೆಲವನ್ನು ಅವನಿಗೆ ಕಲಿಸಿಕೊಡಬೇಕಾಗುತ್ತದೆ. ಅಥವಾ ತನ್ನ ಪರಿಸರದಿಂದ ಅವನೇ ಕಲಿತುಕೊಳ್ಳುತ್ತಾನೆ. ಉದಾಹರಣೆಗೆ : ಭಾಷೆ, ಮನೆಕಟ್ಟುವುದು, ವಸ್ತ್ರಗಳ ಉಪಯೋಗ, ವ್ಯವಸಾಯ, ಸಂಪ್ರದಾಯಗಳು - ಇತ್ಯಾದಿ. ಇವು ಹುಟ್ಟಿನೊಡನೆ ವ್ಯಕ್ತಿಯಿಂದ ವ್ಯಕ್ತಿಗೆ ಹರಿಯುವುದಿಲ್ಲ. ಮನೆ ಕಟ್ಟುವುದನ್ನೆ ತೆಗೆದುಕೊಂಡರೆ ಪಕ್ಷಿಗಳಿಗೆ ಅದು ಹುಟ್ಟಿನೊಡನೆ ಸ್ವಭಾವ ಸಿದ್ಧವಾಗಿ ಬರುತ್ತದೆ. ಒಂದು ಸಾವಿರ ವರ್ಷಗಳ ಹಿಂದೆ ಪಕ್ಷಿಗಳು ಹೇಗೆ ಗೂಡುಕಟ್ಟುತ್ತಿದ್ದುವೋ ಹಾಗೆ ಈಗಲೂ ಗೂಡುಕಟ್ಟುತ್ತವೆ. ಮನುಷ್ಯನಲ್ಲಾದರೋ, ಅವನು

ಪರಿಸರದಿಂದ ಅದನ್ನು ಕಲಿತುಕೊಳ್ಳುತ್ತಾವೆ. ಹೀಗೆ ಹುಟ್ಟಿನಿಂದ ಬಾರದೆ, ಮನುಷ್ಯ ತನ್ನ ಪರಿಸರದಿಂದ ಕಲಿತುಕೊಳ್ಳುವ ಭಾಷೆ, ಉಪಕರಣಗಳ ತಯಾರಿಕೆ, ಕೈಗಾರಿಕೆ, ಕಲೆ, ವಿಜ್ಞಾನ, ಕಾನೂನು, ಆಡಳಿತ, ನೀತಿ ಮತ್ತು ಧರ್ಮ ಇವೆಲ್ಲವನ್ನು ಒಳಗೊಳ್ಳುತ್ತದೆ ಸಂಸ್ಕೃತಿ ೧೬. ಆದ್ದರಿಂದ ಸಂಸ್ಕೃತಿಯೆಂದರೆ ಒಂದು ಸಮಾಜದ ಜೀವನ ವಿಧಾನ, ಅದರ ಆಚಾರ ವ್ಯವಹಾರಗಳು, ಅದರ ಸಂಸ್ಥೆಗಳು, ಆಲೋಚನಾ ವಿಧಾನಗಳು. ಪ್ರತಿಯೊಬ್ಬ ವ್ಯಕ್ತಿಯೂ ಪ್ರಪಂಚವನ್ನು ಸ್ವತಂತ್ರವಾಗಿ ನೋಡಲಾರ. ಅವನ ಸಮಾಜದ ಆಲೋಚನಾ ವಿಧಾನಗಳೂ, ಆಚಾರ ವ್ಯವಹಾರಗಳೂ, ಸಂಪ್ರದಾಯಗಳೂ ಅವನ ದೃಷ್ಟಿಯನ್ನು ನಿಯಂತ್ರಿಸುತ್ತವೆ ೧೭. ಹೀಗೆ ವ್ಯಕ್ತಿ ಬಹುಮಟ್ಟಿಗೆ ತಾನು ಹುಟ್ಟಿ ಬೆಳೆದ ಸಂಸ್ಕೃತಿಯ ಶಿಶುವೆಂದು ಹೇಳಬಹುದು.

ಸಂಸ್ಕೃತಿ ಪದವು ವಿಶಾಲವ್ಯಾಪ್ತಿಯುಳ್ಳದ್ದು. ಈ ದೃಷ್ಟಿಯಿಂದ ಇದು ಒಳಗೊಳ್ಳುವ ಅಥವಾ ತನ್ನೊಂದಿಗೆ ಅನ್ವಯಿಸಿಕೊಳ್ಳುವ ಕ್ಷೇತ್ರಗಳು ಹಲವು. ಅದರಲ್ಲಿ 'ಧರ್ಮ'ವೂ ಒಂದು. ಸಂಸ್ಕೃತಿಯೊಂದಿಗೆ ಸಾಗಿರುವ ಪದ ಧರ್ಮ (Religion). ಭಾರತದಲ್ಲಿಯೂ ಧರ್ಮವೇ ಸಂಸ್ಕೃತಿಯೆನ್ನುವಷ್ಟರ ಮಟ್ಟಿಗೆ ಅವೆರಡರ ಮಧ್ಯ ಸಾಮ್ಯ ತಲೆದೋರಿದೆ. ಧರ್ಮದೊಂದಿಗೆ ಸಂಸ್ಕೃತಿ, ಸಂಸ್ಕೃತಿಯೊಂದಿಗೆ ಧರ್ಮ ತಂತಾನೆ ಉಗಮಗೊಳ್ಳುತ್ತದೆ ಎಂದು ಟಿ.ಎಸ್.ಎಲಿಯಟ್ ಹೇಳುತ್ತಾನೆ ೧೮. ಒಂದರ ಮೂಲ ಹಾಗೂ ಸಾಧಕ ಇನ್ನೊಂದಾಗಿದೆಯಾದರೂ ವ್ಯಾಪ್ತಿಯಲ್ಲಿ ಸಂಸ್ಕೃತಿ ಹಿರಿದಾಗಿದೆ. 'Religion must lead to Culture, Culture must embrace religion and end in it' ೧೯ ಎಂಬ ಹೇಳಿಕೆಯೂ ಇದೆ. ಇದರ ಪೂರ್ವಾರ್ಧವನ್ನು ಒಪ್ಪಿಕೊಳ್ಳಬಹುದಾದರೂ ಉತ್ತರಾರ್ಧದಲ್ಲಿ ಮಾತ್ರ ಸಂಕುಚಿತತೆ ತಲೆದೋರಿದೆಯೆಂದು ಹೇಳಬೇಕಾಗುತ್ತದೆ. ಒಟ್ಟಾರೆ ಧರ್ಮ ಸಂಸ್ಕೃತಿಗಳ ಸಂಬಂಧ ಅರ್ಥಪೂರ್ಣವೂ ಗಾಢವೂ ಆಗಿದೆಯಾದರೂ ಕೇವಲ ಧರ್ಮವೇ ಸಮಸ್ತ ಸಂಸ್ಕೃತಿಯೆನ್ನಲಿಕ್ಕಾಗದು.

ಮಾನವಶಾಸ್ತ್ರದಲ್ಲಿ ಸಂಸ್ಕೃತಿ ಎಂಬ ಪದವು ಮಾನವನ ಸಕಲ ಕಾರ್ಯಕಲಾಪಗಳನ್ನೊಳಗೊಂಡಿದೆ. ಅದು ಸಾಂಪ್ರದಾಯಿಕವಾಗಿ ಜನರು ಅಡಿಗೆ ಮಾಡುವ ರೀತಿ, ಅಥವಾ ಊಟ ಮಾಡುವ ಪದ್ಧತಿ, ಅವರು ಮನೆ ಕಟ್ಟಲು ಮಾಡುವ ರಚನಾಕ್ರಮ ಮತ್ತು ಕಟ್ಟಿಕೊಳ್ಳುವ ಪದ್ಧತಿ ಅಥವಾ ಮನೆಗಳನ್ನು ಕಟ್ಟುವ ಒಂದು ಅನುಕ್ರಮ ಮುಂತಾದ

ವಿಷಯಗಳಿಂದ ಹಿರಿಯ ಜನರು ಸಾಮಾನ್ಯವಾಗಿ ಅನುಸರಿಸುವ ಸಾಮಾಜಿಕ, ನೈತಿಕ ಮತ್ತು ಧಾರ್ಮಿಕ ಗುಣ ವೈಶಿಷ್ಟ್ಯಗಳನ್ನು ಮಾನವನ ಉನ್ನತ ಮನೋಧರ್ಮಗಳನ್ನು ತೃಪ್ತಿಗೊಳಿಸಲು ತನ್ನ ಅಭ್ಯಾಸ ಬಲದಿಂದ ಮಾಡುವ ಎಲ್ಲ ರೀತಿಯ ವಿಚಾರಗಳನ್ನು ಒಳಗೊಂಡಿದೆ ೨೦ ಎನ್ನಬಹುದು.

ಜಾಗತಿಕ ಮಟ್ಟದಲ್ಲಿ ಸಂಸ್ಕೃತಿಯ ಚಿಂತನೆ ಜಾನಪದ, ಸಮಾಜಶಾಸ್ತ್ರ, ಮಾನವ ಶಾಸ್ತ್ರ, ಇತಿಹಾಸ ಶಾಸ್ತ್ರ ಮುಂತಾದ ಕ್ಷೇತ್ರಗಳ ಹಿನ್ನೆಲೆಯಲ್ಲಿ ನಡೆದಿದೆ.

ವಸಾಹತು ಭಾರತದ ಆಧುನಿಕ ಕಾಲಘಟ್ಟದಲ್ಲಿ ದೇಶದ ಸಾಂಸ್ಕೃತಿಕ ಜೀವನದ ವಲಯದಲ್ಲಿ ಹಿಂದಿನ ಅನೇಕ ಪ್ರವೃತ್ತಿಗಳು ಮುಂದುವರಿದವು. ಹಾಗೆಯೇ ಹೊಸ ವಿದ್ಯಮಾನಗಳೂ ಕಾಣಿಸಿಕೊಂಡವು. ಇವು ಆಧುನಿಕ ಭಾರತೀಯ ಸಂಸ್ಕೃತಿಗೆ ಅಡಿಪಾಯ ಹಾಕಿಕೊಟ್ಟವು. ಈ ಸಂದರ್ಭದಲ್ಲಿ ಅಂದರೆ ಕ್ರಿ.ಶ.೧೯೨೦-೩೦ರ ದಶಕಗಳಲ್ಲಿ ದೇಶದಲ್ಲಿ ಜರುಗುತ್ತಿದ್ದ ರಾಷ್ಟ್ರೀಯ ವಿಮೋಚನಾ ಚಳುವಳಿಯು ಪ್ರಖರತೆ ಪಡೆಯುತ್ತಿತ್ತು. ೧೯೧೭ರ ರಷ್ಯಾದ ಸಮಾಜವಾದ ಮಹಾಕ್ರಾಂತಿ, ಪ್ರಾಚ್ಯ ಪ್ರಜಾಪ್ರಭುತ್ವದ ಅಸ್ತಿತ್ವದ ಕ್ರಾಂತಿಗಳು, ಒಟ್ಟಾರೆ ಜಗತ್ತಿನಲ್ಲಿ ಜರುಗುತ್ತಿದ್ದ ಗಹನ ಬದಲಾವಣೆಗಳು ಭಾರತದ ಸಾಂಸ್ಕೃತಿಕ ಬೆಳವಣಿಗೆಯ ಮೇಲೂ ನಿರ್ಧಾರಕ ಪ್ರಭಾವ ಬೀರಿದವು.

ಇಂತಹ ಪರಿವರ್ತನೆಗೆ ತುಡಿಯುತ್ತಿರುವ ಕಾಲದಲ್ಲಿ ಅನೇಕ ಭಾರತೀಯ ಸಂಸ್ಕೃತಿ ಚಿಂತಕರು ತಮ್ಮ ವಿಚಾರಗಳ ಮೂಲಕ ಸಂಸ್ಕೃತಿ ಚಿಂತನೆಯನ್ನು ಕಟ್ಟಲು ತೊಡಗಿದರು. ರವೀಂದ್ರನಾಥ ಟಾಗೋರ, ಆರ.ಜಿ.ಭಂಡಾರಕರ, ಪಿ.ಬಿ.ದೇಸಾಯಿ, ಎನ್.ಶ್ರೀಕಂಠಶಾಸ್ತ್ರಿ, ಡಿ.ಡಿ.ಕೋಸಂಬಿ, ಸುನೀತಿಕುಮಾರ ಚಟರ್ಜಿ, ಸರ್ದಾರ ಕೆ.ಎಂ.ಫಣಿಕರ, ಎಂ.ಎಚ್.ಕೃಷ್ಣ ಮುಂತಾದವರು ಈ ಕ್ಷೇತ್ರದಲ್ಲಿ ಚಿಂತನೆಗೆ ತೊಡಗಿದರು.

ರವೀಂದ್ರನಾಥ ಟಾಗೋರರು ಈ ಶತಮಾನದ ಆರಂಭದ ದಶಕಗಳಲ್ಲಿ ಸಂಸ್ಕೃತಿ ಕುರಿತು ಯೋಚಿಸಿದ್ದರು. ಅವರು 'ಸಂಸ್ಕೃತಿ' ಪದವನ್ನು ವಿಶೇಷವಾಗಿ ಚರ್ಚೆಗೊಳಪಡಿಸುತ್ತಾರೆ. ಟಾಗೋರರು ಸಂಸ್ಕೃತಿ ಪದವನ್ನು Civilization ಎಂಬ ಪದಕ್ಕೆ ಸಂವಾದಿಯಾಗಿಸುತ್ತಾರೆ. ಸಂಸ್ಕೃತಿಯೆಂಬುದು ಒಂದು ಆಕಾರವನ್ನು ತಳೆದು ನಿಂತ

ಆಕಸ್ಮಿಕ ಘಟನೆಗಳ ಮೊತ್ತವಲ್ಲ. ನಮ್ಮ ಪೂರ್ಣತೆಗಾಗಿ ರೂಪಿಸಿಕೊಂಡ ಯಾವುದೇ ದಿವ್ಯಾದರ್ಶದ ಅಭಿವ್ಯಕ್ತಿ. ಇದಕ್ಕೆ ಸಮಾನವಾದ ಭಾರತೀಯ ಪದ ಧರ್ಮ. ಮನುಷ್ಯ ನಿಜವಾಗಿ ಏನಾಗಿದ್ದಾನೆಯೋ ಅದರ ಅತ್ಯುತ್ತಮ ಅಭಿವ್ಯಕ್ತಿಯೇ ಧರ್ಮ. ಮನುಷ್ಯನ ಸಾಂಘಿಕ ಜೀವನದಲ್ಲಿ ಅಭಿವ್ಯಕ್ತಗೊಂಡ ಧರ್ಮವೇ ಸಂಸ್ಕೃತಿ. ಜೀವನಾದರ್ಶನಗಳನ್ನು, ಮೌಲ್ಯಗಳನ್ನು ನಮ್ಮ ಮುಂದಿಡುವುದು ಸಂಸ್ಕೃತಿಯ ಪ್ರಯೋಜನಗಳಲ್ಲೊಂದು. ಎಲ್ಲಿ ಸರಳವಾದ ರೂಪದಲ್ಲಿ ಆಧ್ಯಾತ್ಮವು ಅಭಿವ್ಯಕ್ತವಾಗುವದೋ ಅಲ್ಲಿ ಸಂಸ್ಕೃತಿಯು ಅತ್ಯುತ್ತಮ ರೂಪದಲ್ಲಿ ಮೈದಾಳುತ್ತದೆಂದು ಭಾವಿಸಬೇಕು'' [೨೧] ಎಂದು ಸಂಸ್ಕೃತಿಯ ಬಗೆಗಿನ ತಮ್ಮ ನಿಲುವನ್ನು ಪ್ರಕಟಿಸುತ್ತಾರೆ. ವಿಮೋಚನೆಯೆಡೆಗೆ ಸರಿಯುತ್ತಿದ್ದ ಭಾರತದ ಸ್ವಧರ್ಮ ಮತ್ತು ಸಂಸ್ಕೃತಿಗಳ ನಡುವಿನ ಅಂತರವನ್ನು ತೆಗೆದು ಹಾಕಿ, ತಮ್ಮ ಅಸ್ತಿತ್ವವನ್ನು ಈ ಮೂಲಕ ಟಾಗೋರರು ಎತ್ತಿಹಿಡಿದರು. ಇವರ ಧೋರಣೆ ಪೌರಾಣಿಕ ಕಥಾ ನಾಯಕರನ್ನು (ವಿಶ್ವಾಮಿತ್ರ, ನಚಿಕೇತ, ಯಾಜ್ಞವಲ್ಕ್ಯ) ಆದರಿಸಿ ಕೃತಿ ರಚಿಸಿದ ರೀತಿಯು ಅವರ ವಿಚಾರಕ್ಕೆ ಹತ್ತಿರವಾಗಿದೆ ಎನ್ನಬಹುದು. ೧೮೩೭-೧೯೨೫ ರ ಕಾಲದಲ್ಲಿ ಆರ್.ಜಿ.ಭಂಡಾರ್ಕರ್ ಅವರು ಭಾರತೀಯ ಸಂಸ್ಕೃತಿ ಕುರಿತು ಅಧ್ಯಯನ ಮಾಡಿದ್ದರು. 'ವೈಷ್ಣವಿಸಂ ಶೈವಿಸಂ ಅಂಡ್ ಮೈನರ್ ರಿಲಿಜಿಯಸ್ ಸಿಸ್ಟಂಸ್' ಪುಸ್ತಕದಲ್ಲಿ ಸಂಸ್ಕೃತಿ ಕುರಿತು ಬರೆಯುತ್ತಾರೆ. ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ವಸ್ತುನಿಷ್ಠವಾಗಿ ಯೋಚಿಸಿದ್ದರು. ದರ್ಶನ ಹಾಗೂ ಮತಧರ್ಮಶಾಸ್ತ್ರದಲ್ಲಿ ಪಾಂಡಿತ್ಯ ಪಡೆದಿದ್ದ ಭಂಡಾರ್ಕರರು ಆ ಕಾಲದಲ್ಲಿ ಪ್ರಚಲಿತವಿದ್ದ ಅನೇಕ ಸಾಂಪ್ರದಾಯಗಳು ಹಿಂದೂ ಧರ್ಮಕ್ಕೆ ಅಪರಿಚಿತವಾಗಿದ್ದವು ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ವೈಜ್ಞಾನಿಕ ರೀತಿಯಲ್ಲಿ ಸಾಮಾಜಿಕ ಬದಲಾವಣೆ ತರಬೇಕೆಂಬುದಾಗಿ ಬಯಸಿದ್ದರು. [೨೨] ಇದು ಜಾಗತಿಕ ಬದಲಾವಣೆಗಳಿಗೆ ಪ್ರತಿಸ್ಪಂದಿಸುವ ಜಿಜ್ಞಾಸೆಯ ವಿವೇಚನೆಯಾಗಿದೆ.

ದಾಮೋದರ ಧರ್ಮಾನಂದ ಕೋಸಂಬಿ (೧೯೦೭-೧೯೬೬) ಯವರು ಮಾರ್ಕ್ಸ್‌ವಾದದ ಜಿಜ್ಞಾಸೆಯಲ್ಲಿ ಸಂಸ್ಕೃತಿ ಶೋಧನೆಗೆ ಹೊರಟವರು. ಬುಡಕಟ್ಟು ಸಮಾಜಗಳ ಉಳಿಯುವಿಕೆಯ ಅಂಶ, ಲಿಖಿತ ದಾಖಲೆ, ಪ್ರಾಚೀನ ಶೋಧಶಾಸ್ತ್ರ, ಶಾಸನ, ನಾಣ್ಯಗಳು ಮಾತ್ರವಲ್ಲದೆ, ಭಾಷಾವಿಜ್ಞಾನ, ಮಾನವಶಾಸ್ತ್ರ, ಸಮಾಜ ವಿಜ್ಞಾನ ಮುಂತಾಗಿ

ಎಲ್ಲ ಸಂಬಂಧಿತ ವಿಜ್ಞಾನಗಳ ವಿಧಾನಗಳನ್ನು ಬಳಸಿ ಮಾನವ ಕುಲ ವರ್ಣನಾತ್ಮಕ ವಿವರಣೆಯ ಸಹಾಯದಿಂದ ಇತಿಹಾಸವನ್ನು ರಚಿಸಬೇಕು ೨೩ ಎನ್ನುವ ಮೂಲಕ ಸಂಸ್ಕೃತಿ ಅಧ್ಯಯನದ ಆಯಾಮಗಳನ್ನು ವಿಸ್ತರಿಸುತ್ತಾರೆ. ವೈಜ್ಞಾನಿಕ ಸಂಶೋಧನೆಯಲ್ಲಿ ಗಾಢಾಸಕ್ತಿಯನ್ನು ಬೆಳಸಿಕೊಂಡಿದ್ದ ಅವರು ಪ್ರಾಚೀನ ಭಾರತ ಇತಿಹಾಸ, ಹಾಗೂ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಬೇಕಾದರೆ ಈ ಎಲ್ಲ ಆಧಾರ, ಕ್ರಮಗಳನ್ನು ಬಳಸಬೇಕು ಎಂದು ಹೇಳಿದರು. ಈ ಮಾದರಿಯನ್ನು ಅವರ 'The culture and Civilization in Historical out' ಕೃತಿಯಲ್ಲಿ ಕಾಣಬಹುದು. ಮೂಲಾಧಾರಗಳ ವಾಸ್ತವಾಂಶಗಳನ್ನು ಪ್ರಾಚೀನ ಶೋಧನ ಶಾಸ್ತ್ರದ ಬೆಳಕಿನಲ್ಲಿ ತಾಳೆಹಾಕಿ ಅವುಗಳನ್ನು ಮಾನವಕುಲ, ವರ್ಣನಾತ್ಮಕ ವಿವರಣೆಗಳೊಂದಿಗೆ ಸೇರಿಸಿ ಬಹು ಎಚ್ಚರಿಕೆಯಿಂದ ಅರ್ಥನಿರೂಪಣೆಯನ್ನು ನೀಡುತ್ತಿದ್ದರು ಎನ್ನಬಹುದು. ಡಿ. ಡಿ. ಕೋಸಾಂಬಿಯವರ ಅಧ್ಯಯನ ಕ್ರಮದಲ್ಲಿಯೇ ದೇವಿಪ್ರಸಾದ ಚಟ್ಟೋಪಾಧ್ಯಾಯರವರು ಮುಂದುವರಿದು ಸಂಸ್ಕೃತಿ ಅಧ್ಯಯನಕ್ಕೆ ಹೊಸ ದಿಕ್ಕನ್ನು ತೋರಿಸಿಕೊಟ್ಟರು. ಹೀಗೆ ಇನ್ನೂ ಅನೇಕ ಸಂಶೋಧಕರು ಇತಿಹಾಸ ಸಂಸ್ಕೃತಿಯ ಸಂಶೋಧನೆಯ ಮೂಲಕ ಸಂಸ್ಕೃತಿಯ ಅಸ್ತಿತ್ವವನ್ನು ಪ್ರತಿಪಾದಿಸಿದರು.

ಭಾರತದಲ್ಲಿ ಈ ಶತಮಾನದ ಆರಂಭದ ದಶಕಗಳಲ್ಲಿ 'ಸಂಸ್ಕೃತಿ'ಯನ್ನು ಅರ್ಥೈಸುತ್ತಿದ್ದುದು ಮುಖ್ಯವಾಗಿ ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ. ಇಂದು ಇಪ್ಪತ್ತನೇ ಶತಮಾನದ ಅಂತ್ಯದಲ್ಲಿ ಮತೀಯ ಮತ್ತು ಜನಾಂಗಿಕ ಬದಲಿನ ಹಿನ್ನೆಲೆಯಲ್ಲಿ 'ಸಂಸ್ಕೃತಿ' ಪದವನ್ನು ಅರ್ಥೈಸಲಾಗುತ್ತಿದೆ. 'ಪ್ರತಿ ಸಂಸ್ಕೃತಿ', 'ಉಪಸಂಸ್ಕೃತಿ' 'ಪರ್ಯಾಯ ಸಂಸ್ಕೃತಿ' ಪದಗಳು ಈ ಅರ್ಥೈಸುವಿಕೆಯನ್ನೇ ಹೊಂದಿರುವಂಥವು. ಹೀಗೆ ಸಂಸ್ಕೃತಿಯನ್ನು ಕುರಿತ ಯೋಚನೆಗಳು ಕಾಲದಿಂದ ಕಾಲಕ್ಕೆ ಬದಲಾಗುವವು. ಈ ವಾಸ್ತವವನ್ನು ಅರಿಯದ ಅಧ್ಯಯನಗಳು ಎಲ್ಲ ಕಾಲಕ್ಕೂ, ಎಲ್ಲ ದೇಶಕ್ಕೂ ಒಂದೇ ರೀತಿಯ ವ್ಯಾಖ್ಯಾನವನ್ನು ಹೊಂದಿಸಲು ಹೋಗಿ ಗೊಂದಲಗಳನ್ನು ಸೃಷ್ಟಿಮಾಡುತ್ತವೆ. ಪಶ್ಚಿಮದಿಂದ ಎರವಲು ತಂದ 'ಸಂಸ್ಕೃತಿ ಪರಿಕಲ್ಪನೆ'ಯ ವ್ಯಾಖ್ಯಾನಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಸದಾ ಒಂದು ಎಚ್ಚರದಲ್ಲಿರಬೇಕು. ಅದೇನೆಂದರೆ ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಯುರೋಪಿನ ದೇಶಗಳಲ್ಲಾಗುತ್ತಿದ್ದ

ಎಲ್ಲ ಸಂಬಂಧಿತ ವಿಜ್ಞಾನಗಳ ವಿಧಾನಗಳನ್ನು ಬಳಸಿ ಮಾನವ ಕುಲ ವರ್ಣನಾತ್ಮಕ ವಿವರಣೆಯ ಸಹಾಯದಿಂದ ಇತಿಹಾಸವನ್ನು ರಚಿಸಬೇಕು ೨೩ ಎನ್ನುವ ಮೂಲಕ ಸಂಸ್ಕೃತಿ ಅಧ್ಯಯನದ ಆಯಾಮಗಳನ್ನು ವಿಸ್ತರಿಸುತ್ತಾರೆ. ವೈಜ್ಞಾನಿಕ ಸಂಶೋಧನೆಯಲ್ಲಿ ಗಾಢಾಸಕ್ತಿಯನ್ನು ಬೆಳೆಸಿಕೊಂಡಿದ್ದ ಅವರು ಪ್ರಾಚೀನ ಭಾರತ ಇತಿಹಾಸ, ಹಾಗೂ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಬೇಕಾದರೆ ಈ ಎಲ್ಲ ಆಧಾರ, ಕ್ರಮಗಳನ್ನು ಬಳಸಬೇಕು ಎಂದು ಹೇಳಿದರು. ಈ ಮಾದರಿಯನ್ನು ಅವರ 'The culture and Civilization in Historical out' ಕೃತಿಯಲ್ಲಿ ಕಾಣಬಹುದು. ಮೂಲಪಾಠಗಳ ಪಾಠಾಂತರಗಳನ್ನು ಪ್ರಾಚೀನ ಶೋಧನ ಶಾಸ್ತ್ರದ ಬೆಳಕಿನಲ್ಲಿ ತಾಳೆನೋಡಿ ಅವುಗಳನ್ನು ಮಾನವಕುಲ, ವರ್ಣನಾತ್ಮಕ ವಿವರಣೆಗಳೊಂದಿಗೆ ಸೇರಿಸಿ ಬಹು ಎಚ್ಚರಿಕೆಯಿಂದ ಅರ್ಥವಿವರಣೆಯನ್ನು ನೀಡುತ್ತಿದ್ದರು ಎನ್ನಬಹುದು. ಡಿ. ಡಿ. ಕೋಸಾಂಬಿಯವರ ಅಧ್ಯಯನ ಕ್ರಮದಲ್ಲಿಯೇ ದೇವಿಪ್ರಸಾದ ಚಟ್ಟೋಪಾಧ್ಯಾಯರಂತಹವರು ಮುಂದುವರಿದು ಸಂಸ್ಕೃತಿ ಅಧ್ಯಯನಕ್ಕೆ ಹೊಸ ದಿಕ್ಕನ್ನು ತೋರಿಸಿಕೊಟ್ಟರು. ಹೀಗೆ ಇನ್ನೂ ಅನೇಕ ಸಂಶೋಧಕರು ಇತಿಹಾಸ ಸಂಸ್ಕೃತಿಯ ಸಂಶೋಧನೆಯ ಮೂಲಕ ಸಂಸ್ಕೃತಿಯ ಅಸ್ತಿತ್ವವನ್ನು ಪ್ರತಿಪಾದಿಸಿದರು.

ಭಾರತದಲ್ಲಿ ಈ ಶತಮಾನದ ಆರಂಭದ ದಶಕಗಳಲ್ಲಿ 'ಸಂಸ್ಕೃತಿ'ಯನ್ನು ಅರ್ಥೈಸುತ್ತಿದ್ದುದು ಮುಖ್ಯವಾಗಿ ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ. ಇಂದು ಇಪ್ಪತ್ತನೇ ಶತಮಾನದ ಅಂತ್ಯದಲ್ಲಿ ಮತೀಯ ಮತ್ತು ಸಮುದಾಯಿಕ ಬೆರೆತಿನ ಹಿನ್ನೆಲೆಯಲ್ಲಿ 'ಸಂಸ್ಕೃತಿ' ಪದವನ್ನು ಅರ್ಥೈಸಲಾಗುತ್ತಿದೆ. 'ಪ್ರತಿ ಸಂಸ್ಕೃತಿ', 'ಉಪಸಂಸ್ಕೃತಿ' ' ಪರ್ಯಾಯ ಸಂಸ್ಕೃತಿ' ಪದಗಳು ಈ ಅರ್ಥೈಸುವಿಕೆಯನ್ನೆ ಹೊಂದಿರುವಂಥವು. ಹೀಗೆ ಸಂಸ್ಕೃತಿಯನ್ನು ಕುರಿತ ಯೋಚನೆಗಳು ಕಾಲದಿಂದ ಕಾಲಕ್ಕೆ ಬದಲಾಗುವವು. ಈ ವಾಸ್ತವವನ್ನು ಅರಿಯದ ಅಧ್ಯಯನಗಳು ಎಲ್ಲ ಕಾಲಕ್ಕೂ, ಎಲ್ಲ ದೇಶಕ್ಕೂ ಒಂದೇ ರೀತಿಯ ವ್ಯಾಖ್ಯಾನವನ್ನು ಹೊಂದಿಸಲು ಹೋಗಿ ಗೊಂದಲಗಳನ್ನು ಸೃಷ್ಟಿಮಾಡುತ್ತವೆ. ಪಶ್ಚಿಮದಿಂದ ಎರವಲು ತಂದ 'ಸಂಸ್ಕೃತಿ ಪರಿಕಲ್ಪನೆ'ಯ ವ್ಯಾಖ್ಯಾನಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಸದಾ ಒಂದು ಎಚ್ಚರದಲ್ಲಿರಬೇಕು. ಅದೇನೆಂದರೆ ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಯುರೋಪಿನ ದೇಶಗಳಲ್ಲಾಗುತ್ತಿದ್ದ

ರಾಜಕೀಯ, ನೈತಿಕ ತಲ್ಲಣಗಳ ಹಿನ್ನೆಲೆಯಲ್ಲಿ ಹುಟ್ಟಿದ ಈ ಪರಿಕಲ್ಪನೆ ಭಾರತದಂತಹ ದೇಶದ ಪರಿಸ್ಥಿತಿಗೆ ಎಷ್ಟು ಪ್ರಸ್ತುತ.

ಈ ಶತಮಾನದ ಆರಂಭಕಾಲದಿಂದ ಕನ್ನಡಿಗರು ಸಂಸ್ಕೃತಿ ಚಿಂತನೆಗೆ ತೊಡಗಿದರು. ಪಾಶ್ಚಾತ್ಯ ಹಿನ್ನೆಲೆಯ ಈ ಪರಿಕಲ್ಪನೆಯನ್ನು ನಮ್ಮಲ್ಲಿದ್ದ 'ಸಂಸ್ಕಾರ' ಪದಕ್ಕೆ ಸಂವಾದಿತ ಅರ್ಥದಲ್ಲಿ ಸಂಸ್ಕೃತಿಯ ವಿವೇಚನೆಯನ್ನು ಕೈಗೊಂಡರು. ಈ ಹಿಂದೆ ಸಂಸ್ಕೃತಿಯ ಚಿಂತನೆ ಇರಲಿಲ್ಲವೆಂದಲ್ಲ. ಅದು ಕನ್ನಡ ಸಾಹಿತ್ಯಾದಿ ಲಲಿತಕಲೆಗಳಲ್ಲಿ ಅಂತರ್ಗತಗೊಂಡಿತ್ತು. ಪಂಪ, ರನ್ನ, ವಚನಕಾರರು, ದಾಸರು ಮುಂತಾದವರು ಪ್ರತಿಪಾದಿಸಿದುದು ಸೃಜನಶೀಲ ಸಂಸ್ಕೃತಿಯನ್ನು. ಆದರೆ ನೇರವಾದ 'ಸಂಸ್ಕೃತಿ' ಪದದ ಅರ್ಥ, ವ್ಯಾಖ್ಯಾನಗಳ ಹಿನ್ನೆಲೆಯಿಂದ ಅಧ್ಯಯನಕ್ಕೆ ತೊಡಗಿದ್ದು ೧೯೨೦-೩೦ರ ಕಾಲದಲ್ಲಿಯೇ ಎನ್ನಬಹುದು.

ಆಗ ಮಾಸ್ತಿ, ದೇವುಡು, ಡಿ.ವಿ.ಜಿಯವರು ಸಂಸ್ಕೃತಿ ಚಿಂತಕರಲ್ಲಿ ಮೊದಲಿಗರು. ಸಂಸ್ಕೃತಿ ಎಂಬ ಸಂಕಥನವನ್ನು ರೂಪಿಸಿ, ವ್ಯಾಖ್ಯಾನಿಸುವಾಗ ಭಾರತೀಯ ಧರ್ಮಗ್ರಂಥಗಳಾದ ವೇದ, ಉಪನಿಷತ್, ಪುರಾಣ, ಮಹಾಕಾವ್ಯಗಳನ್ನು ಆಧಾರವಾಗಿಟ್ಟುಕೊಂಡರು. ಇವರಿಗೆ ಸಂಸ್ಕೃತಿಯ ಕುರಿತು ಚಿಂತನೆಗೆ ಕಾರಣವಾದ ಅಂಶಗಳು ಹಲವು. ಪಾಶ್ಚಾತ್ಯ ವಿದ್ಯಾಭ್ಯಾಸದೊಂದಿಗೆ ದೇಶೀಯ ಜ್ಞಾನವು ಸಹಜವಾಗಿಯೇ ವಿಸ್ತೃತವಾಗಿತ್ತು. ಇದರೊಂದಿಗೆ ರಾಷ್ಟ್ರೀಯ ಚಳುವಳಿಯಿಂದಾಗಿ ಭಾರತೀಯ ಜೀವನದ ವೈವಿಧ್ಯತೆಯ ಅರಿವು ಮನಸ್ಸಿಗೆ ತಟ್ಟಿತ್ತು. ಜೊತೆಗೆ ಭಾರತೀಯ ತತ್ವ ಶಾಸ್ತ್ರದ ಬಗ್ಗೆ ಇದ್ದ ಕೆಲವು ವಿದೇಶಿಯರ ಒಲವು ಸಹಜವಾಗಿಯೇ ಭಾರತೀಯ ಅಥವಾ ಕನ್ನಡಿಗರ ಮೇಲೆ ಪ್ರಭಾವ ಬೀರಿ ಸಂಸ್ಕೃತಿಯ ಚಿಂತನೆ ಬೆಳೆಯತೊಡಗಿತು. ಇದಿಷ್ಟು ಹಿನ್ನೆಲೆಯೊಂದಿಗೆ ಕನ್ನಡಿಗರ ಸಂಸ್ಕೃತಿ ಚಿಂತನೆಯು ಬೆಳೆದದ್ದನ್ನು ಗುರುತಿಸುತ್ತ ಹೋಗಬಹುದು ೨೪.

ಕನ್ನಡದ ಸಂದರ್ಭದಲ್ಲಿ ಸಂಸ್ಕೃತಿಯ ಅಧ್ಯಯನದ ತಾಂತ್ರಿಕ ನೆಲೆಗಳು ಗಂಭೀರವಾಗಿ ನಡೆದಿರುವುದು ಬಹಳ ಕಡಿಮೆ. ಚರಿತ್ರೆಯ ಗತಿತರ್ಕವನ್ನು ರೂಪಿಸುವ ಅಸಂಖ್ಯಾತ ಸೃಜನಾತ್ಮಕ ಪ್ರಭೇದಗಳನ್ನು ಗುಣವಾಗಿ

ಕಂಡದ್ದು ಇದಕ್ಕೆ ಮುಖ್ಯ ಕಾರಣವಾದರೆ, ಇದೇ ಕರ್ನಾಟಕ ಸಂಸ್ಕೃತಿಯನ್ನು ಇತಿಹಾಸದ, ವೈಭವೀಕರಿಸಿದ ಮೆರೆಸುವ ಮಾದರಿಯ ಸ್ವರೂಪದಲ್ಲಿ ವಿವರಿಸಿದ್ದು ಇನ್ನೊಂದು ಕಾರಣ. ಈ ಮಾತಿಗೆ ಹೊರತಾಗಿ ತಮ್ಮ ಚಿಂತನೆಗಳನ್ನು ರೂಪಿಸಿಕೊಂಡವರೆಂದರೆ ಶಂಬಾ ಜೋಷಿಯವರು ಒಬ್ಬರೇ. ದೇವುಡು, ಮಾಸ್ತಿ, ಡಿ.ವಿ.ಜಿ. ಯವರದು ಸಂಸ್ಕೃತಿ ಚಿಂತನೆಯ ಒಂದು ನೆಲೆಯಾದರೆ, ಶಂಬಾ ಅವರ ಚಿಂತನೆ ಇವರೆಲ್ಲರಿಗಿಂತ ಭಿನ್ನ ನೆಲೆಯದು. ಶಂಬಾ ಅವರನ್ನು ಬಿಟ್ಟರೆ ಎಲ್ಲರೂ 'ಸಮನ್ವಯ' ದ ಹೆಸರಿನಲ್ಲಿ ಸಂಸ್ಕೃತಿಯ ವೈಭವೀಕರಣವನ್ನು ಪ್ರತಿಪಾದಿಸುವವರೇ.

ಅಡಿಟಿಪ್ಪಣಿಗಳು:

೧.ರಾಮೇಗೌಡ : ಜಾನಪದ ಸಂಶೋಧನೆ : ಪುಟ -೧,೨ : ೧೯೮೧

೨.ಈ ಕುರಿತು ನಾಗಭೂಷಣ ಪಾಟೀಲ ಅವರ ಲೇಖನ: 'ಸಂಸ್ಕೃತಿ ಪರಿಕಲ್ಪನೆ ಕೆಲವು ವಿಚಾರಗಳು' ಸಂಕ್ರಮಣ:

ಮೇ-ಜೂನ (೨೯೭-೧೯೮)ರಲ್ಲಿ ಇನ್ನಷ್ಟು ವಿವರಗಳಿವೆ.

೩.ಚಿದಾನಂದಮೂರ್ತಿ.ಎಂ. : ಶಾಸನಗಳ ಸಾಂಸ್ಕೃತಿಕ ಅಧ್ಯಯನ : ೧೯೭೯

೪.ನರಸಿಂಹಶಾಸ್ತ್ರಿ ದೇವುಡು : ಕರ್ನಾಟಕ ಸಂಸ್ಕೃತಿ : ಪು ೧೯ : ೧೯೮೮

೫.ನಾರಾಯಣ ಕೆ.ವಿ. : ಶಂಬಾ ಅವರ ಸಂಸ್ಕೃತಿ ಚಿಂತನೆ : ಪುಟ-೫ :

೬. ವಸಂತ ಬನ್ನಾಡಿ : ಸಂಸ್ಕೃತಿ ಚಿಂತನೆ (ಅನುವಾದಿತ ಲೇಖನಗಳು) : ಪುಟ.೪೭ ' ೧೯೯೬

೭.Tylor E.B.: Primative Culture : P-10 : 1981

೮.Lowie : Primative Society: 1930

೯.Hersokvits Melville . J.: Cultural Anthropology : P-223 : 1960

೧೦.Arnald Mathew : Culture and Anarcky : P 22

೧೧.Kluckohn Dyde and Kelly : The Concept of Culture: P-78 : 1945

೧೨.Hammand Peter ; An Introduction to cultural and Social Anthropology: 1971

೧೩.ಈ ಬಗ್ಗೆ A.L.Krobes ಬರೆದ 'The Nature of Culture' ಕೃತಿಯನ್ನು ನೋಡಬಹುದು.

೧೪.Krober A.L. Anthropology : ೧೯೭೬

೧೫.Eliot T.S.," Notes towards the Definatian of Culture " P-13 ,

೧೬.ಅದೇ ಪು.-೧೧೯

೧೭.ಅದೇ ಪು.-೧೨೦

೧೮.Henry Pratt Fairchald : 'Dictionary of Sociology " P-80 C

೦೯.Ruth Benedict : Patterns of Culture : P-2 , 1952

೧೦.Eliot T.S.: Notes Towards the defianation of Culture : P-15 (No Culture has appeared or developed except together with a religion)

೧೧.ಯುಗಯಾತ್ರಿ ಭಾರತೀಯ ಸಂಸ್ಕೃತಿ :ಪುಟ ೨ : ೧೯೭೦

೧೨.Rabindranath Tagore " The Centre of Indian Culture " P-31 : 1921

೧೩ ಪಿ.ಎಂ.ವೆಂಕಟಾಚಲಪತಿ,ಎಂ.ಚಿದಮ್ಮ : ಇತಿಹಾಸ ಸಂಶೋಧನಾ ವಿಧಾನ ೧೯೯೦

೧೪.ಡಾಮೋದರ ಧರ್ಮಾನಂದ ಕೋಸಾಂಬಿ : On Marxist Approach to Indian History

೧೫.ಮ್ಯಾಥ್ಯು ಆರ್ನಾಲ್ಡ್‌ನ 'ಕಲ್ಚರ್ ಅಂಡ್ ಅನಾರ್ಕಿ ' ಕೃತಿಯಲ್ಲಿ ಈ ಪದಗಳ ವಿವರಣೆಗಳನ್ನು ನೋಡಬಹುದು

೧೬. ರೇಣುಕಾ ಪ್ರಸಾದ್ ಪಿ.ಆರ್ : ಕನ್ನಡ ಚಿಂತನೆಯಲ್ಲಿ ಸಂಸ್ಕೃತಿಯ ವ್ಯಾಖ್ಯಾನಗಳು (ಅಪ್ರಕಟಿತ ಪ್ರಬಂಧ) : ಪುಟ-೨೯ : ೧೯೯೨

೧೭.ಬಸವರಾಜ ಕಲ್ಗುಡಿ : ಬಿಡಿಗನ್ನಡ : ೧೯೯೨

ಅಧ್ಯಾಯ-೩

ದೇವುಡು ಅವರ ಸಂಸ್ಕೃತಿ ಚಿಂತನೆ

ಸಂಸ್ಕೃತಿ ಪರಿಕಲ್ಪನೆಯು ಅದು ಒಳಗೊಳ್ಳುವ ವಿಚಾರಗಳ ಕಾರಣದಿಂದಾಗಿ ಹೊಸ ಹೊಸ ರೂಪಗಳನ್ನು ಅರ್ಥಗಳನ್ನು ಪಡೆಯುತ್ತ ಸಾಗುತ್ತದೆ. ಅದು ಮನುಷ್ಯನ ಹುಟ್ಟಿನಿಂದ ಆರಂಭಿಸಿ, ಅವನ ಬದುಕು ಮತ್ತು ಅದಕ್ಕೆ ಹಿನ್ನೆಲೆಯಾಗಿದ್ದ ಜೀವನ ವಿಧಾನ ಹೀಗೆ ಹಲವಾರು ನೆಲೆಗಳನ್ನು ದಾಟಿ ವಿಶಾಲವ್ಯಾಪ್ತಿಗೆ ತೆರೆದುಕೊಂಡಿದೆ. ಅಂದರೆ ಅದು ಒಳಗೊಳ್ಳುವ ಹರವು ವಿಸ್ತಾರವಾದುದು. ಇದರಲ್ಲಿ ದೇವುಡು ನರಸಿಂಹಶಾಸ್ತ್ರಿಗಳ ವಿಚಾರಧಾರೆಯು ಒಂದಂಶ ಮಾತ್ರ. ದೇವುಡು ಅವರದ್ದಾದ ಸಂಸ್ಕೃತಿ ಚಿಂತನೆ ಇದೆಯೇ ? ಎಂದರೆ, ಇದರರ್ಥ ಈಗಾಗಲೇ ಇರುವ ಸಂಸ್ಕೃತಿ ಪರಿಕಲ್ಪನೆಗೆ, ಚಿಂತನೆಗೆ ಪುನರರ್ಥ ಹೊಂದಿಸುವ ಪ್ರಯತ್ನ ಎನ್ನಬಹುದು.

ದೇವುಡು ಅವರ ಸಂಸ್ಕೃತಿ ಚಿಂತನೆ ಸಮಷ್ಟಿ ಸ್ವರೂಪದ್ದು. ಒಂದು ನಾಡಿನ ಸಂಸ್ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸುವಾಗ ಪಂಡಿತ ಸಂಸ್ಕೃತಿ, ಪಾಮರ ಸಂಸ್ಕೃತಿ, ಮೇಲಿನವರ ಸಂಸ್ಕೃತಿ, ಕೆಳಗಿನವರ ಸಂಸ್ಕೃತಿ ಎಂದು ವಿಭಾಗ ಮಾಡುವುದನ್ನು ಅವರು ಅಲ್ಲಗಳೆಯುತ್ತಾರೆ. ಅವರೇ ಒಂದು ಕಡೆ ಕನ್ನಡ ಕುಲಕುಲಗಳ ವ್ಯಷ್ಟಿ -ಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ನೋಡುವುದು ಇಲ್ಲಿಯ ಕೆಲಸ. ೨ ಎಂದು ಹೇಳುತ್ತಾರೆ.

ಪರಿವರ್ತನಶೀಲ ಜನಪದವು ಪರಂಪರೆಯ ಪ್ರತಿಬಿಂಬ ಎಂಬ ಮಾತಿನಲ್ಲಿ ಎರಡು ಬಗೆಯಿಲ್ಲ. ಆದರೆ ಒಂದು ಕಾಲದಲ್ಲಿ ಶಿಷ್ಟಪದವೆಂದು ಬದುಕಿದ ಚಿಂತನೆಯನ್ನು ಕಡೆಗಣಿಸಿದ ಅದು ಸಾಗಿಬಂದಿರುವ ದಾರಿಯು ಅದಷ್ಟು ನಿತ್ಯದ

ತೆಲ್ಲುಗಳಾವುವು ಎಂಬುದನ್ನು ಗುರುತಿಸಬೇಕು. ಸಮಗ್ರತೆಯೆಡೆಗೆ ಮುಖಮಾಡಿದ ಅಧ್ಯಯನ ವಿಧಾನವು ಶಿಷ್ಟವರ -ಜಾನಪದರ ಎರಡಕ್ಕೂ ಸಮಾನವಾಗಿ ಬಳಸಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ದೇವುಡು ಅವರು ವೇದಗಳ ಕಾಲದ ಜನಪದರ ಬದುಕನ್ನು ಇಂದಿನ ಜನಪದರ ಬದುಕಿನೊಂದಿಗೆ ಸಮೀಕರಿಸುತ್ತಾರೆ. ಈ ಕ್ರಮವನ್ನು ಸೂಕ್ಷ್ಮಾಧ್ಯಯನಕ್ಕೆ ಒಳಪಡಿಸಿ ಅದರ ನೆಲೆಗಳನ್ನು ಕಂಡುಕೊಳ್ಳಬೇಕಿದೆ.

ದೇವುಡು ಪ್ರಾಚೀನ ಭಾರತೀಯ ಸಂಸ್ಕೃತಿಯನ್ನು ಅದರ ಶಿಷ್ಟ ಹಾಗೂ ಪ್ರಾದೇಶಿಕ ರೂಪಾಂತರಗಳೊಡನೆ ಆಳವಾಗಿ ಅಧ್ಯಯನ ಮಾಡಿದ್ದರು. ಅದನ್ನು ತಮ್ಮ ಜೀವನದಲ್ಲಿಯೂ ರೂಢಿಸಿಕೊಂಡಿದ್ದರು. ಅವರ ಚಿಂತನೆ ಪ್ರಗತಿಪರವಾದುದಾಗಿತ್ತು. ಶಿವಕುಮಾರ ಸ್ವಾಮಿಯವರು ಅಭಿಪ್ರಾಯಪಡುವಂತೆ 'ದೇವುಡು ಪ್ರಾಚೀನ ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆಯುಳ್ಳವರಾಗಿದ್ದರೂ ಒಣತರ್ಕದ ವಿತಂಡವಾದಿಯಾಗಿರಲಿಲ್ಲ. ಅವರ ಚಿಂತನೆಗಳು ಪುರಾತನ ಸಂಸ್ಕೃತಿಯ ಬೇರುಳ್ಳ ಆಧುನಿಕ ದೃಷ್ಟಿಯಿಂದ ಕೂಡಿದ್ದವು' ೭ ಈ ದೃಷ್ಟಿಯಿಂದ ದೇವುಡು ಅವರನ್ನು ಭಾರತೀಯ ಅಥವಾ ಕರ್ನಾಟಕ ಸಂಸ್ಕೃತಿಯ ವಕ್ತಾರರೆನ್ನಬಹುದು.

ಆಧುನಿಕ ತತ್ವವಾದಗಳನ್ನೆಲ್ಲ ಬದಿಗಿಟ್ಟು ಕನ್ನಡ ಚಿಂತಕರ ಬರಹವನ್ನು ಅವಲೋಕಿಸಿದರೆ ಅಲ್ಲಿ ಮಾನವೀಯತೆಯ ಅಂಶ ಎದ್ದು ಕಾಣುತ್ತದೆ. ದೇವುಡು ಅವರ ಬರಹಗಳಲ್ಲಿ ಇದು ಒಂದು ಪಾಲು ಹೆಚ್ಚು ಎನ್ನಬಹುದು. ಅವರ ಸಂಸ್ಕೃತಿ ಚಿಂತನೆಯನ್ನು ಈ ದಿಕ್ಕಿನಲ್ಲಿ ನೋಡಬೇಕಾದ ಅಗತ್ಯವಿದೆ.

ದೇವುಡು ಅವರಂತಹ ಸಮನ್ವಯ ಚಿಂತಕರು ಮಾರ್ಗ ಪ್ರವೃತ್ತಿಯ, ಸಾಂಸ್ಕೃತಿಕ ವಿಶ್ಲೇಷಕರು ಜೀವನ ವಿಧಾನಗಳಲ್ಲಾಗುವ ಪರಿವರ್ತನೆಗಳನ್ನು ಸುಧಾರಣೆಗಳನ್ನಾಗಿ ಸ್ವೀಕರಿಸುತ್ತಾರೆ. ಈ ವರ್ಗದವರಿಗೆ ರಾಜಸಂಸ್ಕೃತಿಯ ಪರವಾದ ಆಲೋಚನೆಯಷ್ಟೇ, ವಸಾಹತುಶಾಹೀ ಪ್ರಭಾವದ ಮತ್ತು ಪರವಾದ ಆಲೋಚನೆಗಳು ಅಷ್ಟೇ ಸ್ವಾಭಾವಿಕ ಹಾಗೂ ಸಹಜ . ಇವೆರಡೂ ಚಾರಿತ್ರಿಕ ಘಟನಾವಳಿಗಳಾಗಿ ಒಂದಕ್ಕೊಂದು ವಿರುದ್ಧವೆಂದು ತೋರಿದರೂ ತಮ್ಮನ್ನು ಪ್ರಬಲಗೊಳಿಸಿಕೊಂಡ ಗುಣಸ್ವಭಾವವು ಒಂದೇ ಆಗಿದೆ. ಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿ ಇರುವ ವಿಶೇಷತೆಯೆಂದರೆ

ಈ ಶಕ್ತಿಗಳು ಬೆಳೆಯಲು ಇಚ್ಛಿಸಿದ ಏಕಮುಖೀ ಆಕೃತಿಯ ಬದುಕನ್ನು ಇಲ್ಲಿಯ ಸಂಕೀರ್ಣ ದೇಶೀಮೂಲದ ಜಗತ್ತು ತನ್ನದೇ ಆದ ರೀತಿಯಲ್ಲಿ ಹೊಸ ಸಂವೇದನೆಗೆ ಅಳವಡಿಸಲು ಯತ್ನಿಸಿದೆ. ಈ ಸಂವೇದನೆಗಳ ಸ್ವರೂಪವನ್ನು ಅರಿಯುವುದೇ ಸಾಂಸ್ಕೃತಿಕ ಅಧ್ಯಯನದ ಮುಖ್ಯ ಗುರಿಯಾಗಬೇಕಿದೆ.

ದೇವುಡು ಅವರಿಗೆ ಸಾಹಿತ್ಯ, ಸಂಸ್ಕೃತಿ ಮತ್ತು ಧರ್ಮಶಾಸ್ತ್ರಗಳ ಆಳವಾದ ಜ್ಞಾನವಿತ್ತು. ಈ ಕಾರಣದಿಂದ ಅವರ ಬರವಣಿಗೆಗಳು ಗಟ್ಟಿಯಾದ ನೆಲೆಯೊಂದನ್ನು ಕಂಡುಕೊಳ್ಳುತ್ತವೆ. ಜಾನಪದ ಪ್ರಕಾರಗಳಾದ ಗೀತೆ, ಗಾದೆ, ಒಗಟುಗಳಲ್ಲಿ ಸಂಸ್ಕೃತಿಯನ್ನು ಹುಡುಕುವ ಇವರ ಅಧ್ಯಯನ ಶ್ರದ್ಧೆ ಮತ್ತು ಪಾಂಡಿತ್ಯಗಳಿಂದ ಕೂಡಿರುವುದನ್ನು ಗುರುತಿಸಬಹುದು. ಈ ಶತಮಾನದ ಮೂರು ಮತ್ತು ನಾಲ್ಕನೆ ದಶಕಗಳಲ್ಲಿ ರಾಜಕೀಯ, ಧಾರ್ಮಿಕ ಸ್ಥಿತಿ ಸಂದಿಗ್ಧತೆಯಲ್ಲಿತ್ತು. ಭಾರತೀಯರಿಗೆ ತಮ್ಮನ್ನು ತಾವೇ ವಿಮರ್ಶಿಸಿಕೊಳ್ಳುವ ಕಾಲ ಅದಾಗಿತ್ತು. ಪರಂಪರೆಯ ಮೌಲ್ಯಗಳನ್ನು ಅವುಗಳ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿಯೇ ಪುನರ್ ಪ್ರತಿಪಾದಿಸುವುದು ಅವಶ್ಯವಿತ್ತು. ಆ ಸಂದರ್ಭದಲ್ಲಿ ಕುವೆಂಪು, ಶಂಬಾ, ಶ್ರೀರಂಗರಂಥವರು ವಸಾಹತುಶಾಹಿಯ ಪ್ರಭಾವವನ್ನು ಅರಗಿಸಿಕೊಂಡು ಬರೆದರು. ಪುರುಷೋತ್ತಮ ಬಿಳಿಮಲೆಯವರು ಅಭಿಪ್ರಾಯಪಡುವಂತೆ, ''ವಸಾಹತುಶಾಹಿ ಸಂಸ್ಕೃತಿ ನಮ್ಮಲ್ಲಿ ಬೇರುಬಿಟ್ಟ ಬಗೆಯನ್ನು ನೋಡಿದರೆ ಅದರಿಂದ ನಮಗೆ ಬಿಡುಗಡೆ ದೊರೆಯುವಂತೆ ಕಾಣುವುದಿಲ್ಲ. ಹಾಗಾಗಿ ನಮ್ಮಲ್ಲಿ ಅತ್ಯುತ್ತಮ ಕಲಾಕೃತಿಗಳು ವಸಾಹತುಶಾಹಿ ಸಂಸ್ಕೃತಿಯ ನಿರಾಕರಣೆಯಲ್ಲಿ ಬಾರದೆ, ಅದನ್ನು ಸೃಜನಾತ್ಮಕವಾಗಿ ಒಳಗೊಳ್ಳುವುದರಲ್ಲಿಯೇ ಬರುತ್ತದೆಂದು ತೋರುತ್ತದೆ ೪.

ದೇವುಡು ಈ ಧೋರಣೆಯವರಿಗಿಂತ ಭಿನ್ನವಾಗಿ ಭಾರತೀಯತೆಯನ್ನು ಅಥವಾ ಕರ್ನಾಟಕತ್ವವನ್ನು ಕಂಡರು. ದೇಶೀಯ ಮಾದರಿಯಲ್ಲಿಯೇ ಇಲ್ಲಿಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಪ್ರಯತ್ನ ಮಾಡಿದರು. ಕನ್ನಡದಲ್ಲಿ ನಡೆದ ಸಂಸ್ಕೃತಿ ವಿಮರ್ಶೆಯ ಸಾಹಿತ್ಯ ಚಿಂತನೆಯನ್ನು ಗೌರೀಶ ಕಾಯ್ಕಿಣಿಯವರು ಎರಡು ಕವಲುಗಳನ್ನಾಗಿ ಗುರುತಿಸುತ್ತಾರೆ; ಒಂದು ಹಳೆಯದನ್ನು ಬಿಡದೆ ಹೊಸತನ್ನು ತರುವ ಸಮನ್ವಯವಾದಿಗಳದು. ಇನ್ನೊಂದು ಹಳೆಯದನ್ನು ಹೂಳಿ ಅದರ ಮೇಲೆ ಹೊಸತನ್ನು ನಿಲ್ಲಿಸಬೇಕೆನ್ನುವ ಪುರೋಗಾಮಿಗಳದು. ಮಾಸ್ತಿ, ದೇವುಡು, ಡಿವಿಜಿ.

ಒಂದನೆ ಪ್ರಕಾರದವರು. ಶಂಬಾ, ಶ್ರೀರಂಗ, ಅನಕೃ, ಮುಳಿಯವರು ಎರಡನೆ ಪ್ರಕಾರದವರು. ಈ ಸಾಂಸ್ಕೃತಿಕ ಅಧ್ಯಯನಕಾರನೊಬ್ಬನಿಗೆ ಈ ಎರಡೂ ಗುಂಪಿನವರ ಬರವಣಿಗೆಗಳ ಅಗತ್ಯವಿದೆ. ಅಂದರೆ ಈ ಶತಮಾನದ ಆರಂಭಿಕ ದಶಕಗಳಲ್ಲಿ ನಡೆದ ಸಂಸ್ಕೃತಿ ಚಿಂತನೆಯನ್ನು ಆ ಕಾಲದ ಬರಹಗಾರರ ಬರವಣಿಗೆಗಳ ಹಿನ್ನೆಲೆಯಲ್ಲಿಯೇ ಅಧ್ಯಯನಕ್ಕೊಳಪಡಿಸುತ್ತೇನೆ.

ದೇವುಡು ನರಸಿಂಹಶಾಸ್ತ್ರಿಗಳು ಸಂಸ್ಕೃತಿಯ ಬಗೆಗಿನ ಕಳಕಳಿಯನ್ನು ವ್ಯಕ್ತಪಡಿಸುತ್ತಾ, 'ನಮ್ಮ ಸಂಸ್ಕೃತಿಯು ದೇಶಾಂತರದ ಸಂಸ್ಕೃತಿಗಿಂತಲೂ ಹಿರಿದು ಎಂಬ ಬರಿಯ ನಂಬಿಕೆಯುಳ್ಳವರಲ್ಲಿ ನಾನೂ ಒಬ್ಬನು. ಹಾಗೆಯೇ ಉತ್ತಮ ಸಾಹಿತ್ಯವೆಂಬ ಶ್ರೇಷ್ಠ ರೀತಿಯು ಲಭಿಸಬೇಕಾದರೆ ಸ್ವಾತಂತ್ರ್ಯವೆಂಬ ಭಾಗ್ಯರಾಶಿಯಿರಬೇಕು ಎಂಬುದನ್ನು ಮರೆತವನೂ ಅಲ್ಲ. ಆದರೂ ಪ್ರಪಂಚದ ಶ್ರೇಷ್ಠ ಶ್ರೇಷ್ಠ ಸಾಹಿತಿಗಳ ಪರಿಚಯದಿಂದ ನಮ್ಮಲ್ಲಿಯೂ ಉತ್ತಮ ಸಾಹಿತ್ಯವು ಬೆಳೆಯಲಿ' ಎಂದರು. ಈ ದೃಷ್ಟಿಯಿಂದ ದೇವುಡು ಅವರಿಗೆ ಹೊರದೇಶಗಳ ಸಂಸ್ಕೃತಿಯ ಬಗೆಗೂ ಸಮಾನ ಗೌರವ ಇತ್ತು ಎನ್ನಬಹುದು.

ಹಳೆಯದನ್ನು ಹೊಸ ಮನ್ವಂತರಕ್ಕೆ ಒಗ್ಗಿಸಿಕೊಳ್ಳಲು ದೇವುಡು ಅವರಂತಹ ಲೇಖಕರಿಂದ ಸಾಧ್ಯವಾಗಲಿಲ್ಲವೆಂಬ ವಿಮರ್ಶಕರ ಅಭಿಪ್ರಾಯ ಅಸಮಂಜಸ ಎನ್ನಬಹುದು. ಅಂದಿನ ಭಾರತದ ಸಂದಿಗ್ಧ ಪರಿಸ್ಥಿತಿ ದೇವುಡು, ಮಾಸ್ತಿಯಂತಹವರಿಗೆ ಪರಂಪರೆಯತ್ತ ತಿರುಗಲು ಪ್ರೇರೇಪಿಸಿತ್ತು. ಈ ದೃಷ್ಟಿಯಿಂದ ದೇವುಡು ಅವರ ಮಹಾಕ್ಷತ್ರಿಯ, ಮಾಸ್ತಿಯವರ ಚಿಕವೀರ ರಾಜೇಂದ್ರ ಕೃತಿಗಳನ್ನು ನೋಡಬೇಕಾಗಿದೆ. ಮಹಾಕ್ಷತ್ರಿಯದಲ್ಲಿ ನಹುಷ ಚಕ್ರವರ್ತಿಯ ಉದಾತ್ತ ಗುಣಗಳನ್ನು ಕುರಿತು ಪೌರಾಣಿಕ ಕಥೆ ಹೆಣೆಯಲಾಗಿದೆ. ಚಿಕವೀರರಾಜೇಂದ್ರವು ಕನ್ನಡ ನಾಡಿನ ಪ್ರಾಂತ್ಯರಾಜ ಚಿಕವೀರರಾಜೇಂದ್ರನ ಉದಾತ್ತತೆಯನ್ನು ಎತ್ತಿ ಹೇಳಲಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದ ಆದರ್ಶವಾದಿ ದಿನಗಳಲ್ಲಿ ಸಂಪ್ರದಾಯಕ ಸಂಸ್ಕೃತ ವಿದ್ವತ್ತಿಗೂ ; ಪ್ರಗತಿಪರ ಆದರ್ಶಗಳಲ್ಲಿ ಪರಂಪರೆಯನ್ನು ಅರ್ಥೈಸುವ ಹಂಬಲವಿತ್ತು. ವಿಜ್ಞಾನ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ಬೆಳಕಿನಲ್ಲಿ ತೌಲನಿಕವಾಗಿ ಭಾರತೀಯ ಸಂಸ್ಕೃತಿಯನ್ನು ವಿಶ್ಲೇಷಿಸುವ ಕ್ರಮ ಆಗ ಬೆಳೆದಿತ್ತು. ವೇದಗಳಲ್ಲಿ ಎಲ್ಲವೂ ಇದೆ ಎಂಬ ಅಪ್ರಬುದ್ಧ ಉತ್ಸಾಹ ಒಂದು ಕಡೆಗೆ ಇನ್ನೊಂದು ಕಡೆಗೆ ವೈದಿಕ ಸಂಸ್ಕೃತಿ

ಮಾನವ ಸಂಸ್ಕೃತಿಯು ಶೈಶವಾವಸ್ಥೆಯದು ಎಂಬ ಅಭಿಪ್ರಾಯ. ಇನ್ನೊಂದೆಡೆಗೆ ಈ ಎರಡು ಅಲೆಗಳ ಮಧ್ಯ ಮಾನವ ಬದುಕಿನ ಮೂಲಭೂತ ಸತ್ಯಗಳನ್ನು ಕಾಣುವ ಒಂದು ವಿಶಿಷ್ಟ ಕ್ರಮವಾಗಿ ವೇದಾಧ್ಯಯನ ಮಾಡಿದ ವೇದ ಪಂಡಿತರ ಒಂದು ಪರಂಪರೆಯಿತ್ತು. [೬] ಆ ಪರಂಪರೆ ಕನ್ನಡದಲ್ಲಿ ಸಾಕಷ್ಟು ಸೃಜನಶೀಲವಾದ ಕೆಲಸ ಮಾಡಿತ್ತು. ಮಾಸ್ತಿ, ದೇವುಡು, ಡಿ.ವಿ.ಜಿ., ಆಲೂರ ವೆಂಕಟರಾಯರು ಮುಂತಾದ ಮಹಾನ ವಾರಿಗಳು. ಸೃಜನ- ಸೃಜನೇತರ ಎರಡರಲ್ಲೂ ಕೃತಿರಚನೆ ಮಾಡಿದರು. ಇವರಿಗೆ ದೇಶದ ಪರಂಪರೆಯು ತಿಳಿದಿದ್ದಷ್ಟೇ ಪಾಶ್ಚಾತ್ಯ ಸಂಸ್ಕೃತಿಗಳ ಜ್ಞಾನವೂ ಇತ್ತು ಎನ್ನುವುದು ಕೂಡ ಗಮನಾರ್ಹ. ಇಂತಹ ಪರಿಸರದಲ್ಲಿ ದೇವುಡು ಅವರ ಚಿಂತನೆಗಳು ರೂಪುಗೊಂಡಿದ್ದವು.

ನಮ್ಮ ಇರುವಿಕೆ ಮತ್ತು ಅರಿಯುವಿಕೆಯ ಕ್ರಮಗಳಲ್ಲಿ ನಾವು ನಮ್ಮ ಸಮುದಾಯಗಳ ಜೊತೆ ಸಾತತ್ಯವನ್ನು ಉಳಿಸಿಕೊಳ್ಳಲಾಗದಂತಹ ಅರಿಯುವಿಕೆಯ ಮಾದರಿಗಳನ್ನು (Epistemological Paradigms) ಒರಗಿಸುವುದು ಆಧುನಿಕತೆಯ ಅತಿ ದುಷ್ಫಲವಾಗಿದೆ. ಅದನ್ನು ಎದುರಿಸಿ ಸಮುದಾಯಗಳ ಜೊತೆ ಸಾತತ್ಯವನ್ನು ಪಡೆಯುವ ಕೆಲಸ ನಮ್ಮ ಇರುವಿಕೆಗೇ ಅತ್ಯಂತ ಜರೂರಿನದು ಎಂದು ಸಂಸ್ಕೃತಿ ಚಿಂತನೆ ತಿಳಿಸುತ್ತದೆ. [೭] ಈ ಧೋರಣೆ ಮುಖ್ಯವಾಗಿ ಕನ್ನಡದ ನವೋದಯ ಕಾಲದ ದೇವುಡು ಅವರಂತಹ ಸಂಸ್ಕೃತಿ ಚಿಂತಕರಿಗೆ ಅನ್ವಯಿಸುತ್ತದೆ. ಮನುಷ್ಯನ ನಡೆ-ನುಡಿಯ ಮೂಲಕ ಅವರ ಬದುಕಿನ ಸಂಸ್ಕೃತಿಯ ಕುರುಹುಗಳನ್ನು ಶೋಧಿಸಹೊರಟ ದೇವುಡು ಈ ವಿಚಾರವಾಗಿ ಮುಖ್ಯರಾಗುತ್ತಾರೆ.

ದೇವುಡು ಅವರು ಸಂಸ್ಕೃತಿಯ ಪ್ರಶ್ನೆಯನ್ನು ಸರಳವಾಗಿ ಬಿಡಿಸುತ್ತಾರೆ. 'ಸಂಸ್ಕೃತಿಯೆಂಬುದು ಮಾನವನಿಗೂ ಮೃಗಕ್ಕೂ ಇರುವ ಅಂತರವನ್ನು ತೋರಿಸುವ ಅಂತಸ್ಸತ್ವ [೮] ಎಂದು ಹೇಳುತ್ತಾರೆ. ಇದು ಮನುಷ್ಯನನ್ನು ಪ್ರಾಣಿವರ್ಗದಿಂದ ಬೇರ್ಪಡಿಸುವ ಮಾನವಶಾಸ್ತ್ರದ ಚಿನ್ನೆಯ ವ್ಯಾಖ್ಯಾನವೆನಿಸಿದರೂ ಸಾಮಾಜಿಕ, ಆಧ್ಯಾತ್ಮಿಕ ಚಿಂತನಪರ ಯೋಚನೆ ಈ ಹೇಳಿಕೆಯ ಹಿಂದಿದೆ. ಸಂಸ್ಕೃತಿಯಲ್ಲಿ ಹೊಂದಾಣಿಕೆ, ಸಹಿಷ್ಣುತೆ, ಹಿರಿಯತನ ಎಂದು ಮೂರು ಗುಣಗಳನ್ನು ಗುರುತಿಸುವ ದೇವುಡು ಬದುಕಿನ ವಾಸ್ತವ ಮಾರ್ಗದಲ್ಲಿ ತಮ್ಮ ಯೋಚನೆಗಳನ್ನು ಹರಿಸುತ್ತಾರೆ.

ಅಂತರಂಗ ಆತ್ಮಶುದ್ಧಿಯಂತಹ ವ್ಯಕ್ತಿಯ ಆಂತರಿಕ ಭಾವನೆಗಳ ಮೂಲದಿಂದ ಹೊರಟ ಆಧ್ಯಾತ್ಮಿಕ

ಚಿಂತಕರಂತೆ ದೇವುಡು ಅವರ ಸಂಸ್ಕೃತಿ ಚಿಂತನೆ ಕಾಣುತ್ತದೆ. ಆದರೆ ಅವರು ಜಾನಪದದಂತಹ ಬಹಿರಂಗದ ಬದುಕಿಗೆ ಈ ಚಿಂತನೆಯ ಎಳೆಗಳನ್ನು ಜೋಡಿಸುವ ಕ್ರಮ ಮಹತ್ವವಾದುದು. ಬಹಿರಂಗ -ಅಂತರಂಗಗಳ ದ್ವಂದ್ವಸಮಾನಾತ್ಮಕ ಪ್ರಕ್ರಿಯೆ ಸಂಸ್ಕೃತಿಯ ತಿರುಳು [೯] ಎಂಬ ಸಮನ್ವಯ ದೃಷ್ಟಿ ದೇವುಡು ಅವರದು.

'ಹೊರಗಿನ ವಿಷಯಾದಿಗಳ ಸೆಳೆತಕ್ಕೆ ಸಿಕ್ಕಿದ ಇಂದ್ರಿಯಗಳ ವೃತ್ತಿಗೆ ಅಧೀನವಾಗಿ ನಡೆಯುವುದು ಮನಃಪ್ರವೃತ್ತಿಯಿಂದಾಗಿ ಜೀವನದಲ್ಲಿ ಗುರಿಯೊಂದುಂಟು ಎಂದುಕೊಂಡು ಹೊರಗಿನ ಸೆಳೆತ ಸುಳಿತಗಳನ್ನೆಲ್ಲ ತಡೆದುಕೊಂಡು ಆ ಕಾರ್ಯಗಳನ್ನೆಲ್ಲ ಗುರಿಯ ಕಡೆಗೆ ತಿರುಗಿಸಿಕೊಂಡು, ಕಟ್ಟ ಕಡೆಗೂ ಆ ಗುರಿಯು ಬರಿ ಹುಸಿಯೇ ಎಂಬ ಉದ್ವೇಗದಿಂದ ಬದುಕುವುದು ಮಾನವ ಪ್ರವೃತ್ತಿಯಿಂದ ಬಿಡಿಸಿಕೊಂಡರೆ; ಆಗ ಆ ಮಾನವ ಕಾರ್ಯಪ್ರಪಂಚದಲ್ಲಿ ಕಾಣಬರುವ ಮನಸ್ಸಿನ ಬೆಳವಣಿಗೆಯನ್ನು ಅಥವಾ ಬೆಳೆದ ಮನಸ್ಸಿನ ವ್ಯಕ್ತಿಯನ್ನು ತೋರಿಸುವ ಭಾವವೇ ಸಂಸ್ಕೃತಿಯೆನ್ನಬಹುದು [೧೦] ಎನ್ನುವಲ್ಲಿ ಮನುಷ್ಯನ ಬಹಿರಂಗದ ಬದುಕಿಗಿಂತ ಆತನ ಅಂತರಂಗದ ಸಂಸ್ಕೃತಿಗೆ ಒತ್ತುಕೊಟ್ಟಿರುವುದನ್ನು ಕಾಣಬಹುದು. ಅಂತರಂಗದ ಭಾವ, ತುಮುಲಗಳು ಬಹಿರಂಗದ ಬದುಕನ್ನು ನಿಯಂತ್ರಿಸಬಲ್ಲವು ಎಂಬ ವಿಚಾರವನ್ನು ಅವರು ಪ್ರತಿಪಾದಿಸುತ್ತಾರೆ. 'ಮಾನವನ ಅಂತಃಕರಣದಲ್ಲಿದ್ದು ಚಿತ್ತವೃತ್ತಿಯನ್ನು ಬುದ್ಧಿ ವ್ಯಾಪಾರವನ್ನು ರೂಪುಗೊಳಿಸುವ ಅಂತಸ್ಸತ್ವ ಅದಲ್ಲವೇ ಅದು ಸಂಸ್ಕೃತಿ'' [೧೧] ಎನ್ನುವ ಮಾತು ಇದೇ [illegible].

ಸಂಸ್ಕೃತಿಯ ಬಗೆಗೆ ಇರುವ ಅನೇಕ ವ್ಯಾಖ್ಯೆಗಳಲ್ಲಿ ದೇವುಡು ಅವರು ಕೆಲವನ್ನು ಉದ್ಧರಿಸಿದ್ದಾರೆ. ಇಲ್ಲಿ ಧಾರ್ಮಿಕ ನೆಲೆಯ ಸಂಸ್ಕೃತಿಯ ವಿವರಣೆಯ ಕಡೆಗೆ ಅವರ ಲಕ್ಷ್ಯ ಹೆಚ್ಚು ಎಂಬುದನ್ನು ಕಂಡುಕೊಳ್ಳುವುದು ಕಷ್ಟವಲ್ಲ [೧೨]. ಧಾರ್ಮಿಕ ಮತ್ತು ನೈತಿಕ ವಿಶ್ವಕೋಶಗಳಿಂದ ಆ್ಯಂಥ್ರೊಪಾಲಜಿಯಿಂದ ಅವರು ಲಕ್ಷಣ ನಿರ್ದೇಶನ ಮಾಡಿದ್ದಾರೆ. ಹೀಗೆ ದೇವುಡು ಅವರು ಸಂಸ್ಕೃತಿಯ ವ್ಯಾಖ್ಯಾನ ಸಂದರ್ಭದಲ್ಲಿ ಬದುಕಿನ ಯಾವ ಕ್ಷೇತ್ರವನ್ನೂ ಅವಜ್ಞೆ ಮಾಡಿಲ್ಲ ಎನ್ನಬಹುದು.

ಇಂದು 'ಸಂಸ್ಕೃತಿ ಪರಿಕಲ್ಪನೆ'ಯನ್ನು ಅರ್ಥೈಸುವ ನಿಟ್ಟಿನಲ್ಲಿ ಕೇವಲ ಸಮಾಜಶಾಸ್ತ್ರ, ಮಾನವ ಶಾಸ್ತ್ರಗಳಂತಹ ಮಾನವಿಕ ಕ್ಷೇತ್ರಗಳನ್ನಷ್ಟೇ ಪರಿಗಣಿಸಬೇಕಿಲ್ಲ. ಬಹುರಾಷ್ಟ್ರೀಯ ಕಂಪನಿಗಳ ಸಂಪರ್ಕದಿಂದ ದೇಶಗಳು ಜಾಗತೀಕರಣಕ್ಕೊಳಗಾಗುತ್ತವೆ. ಈ ಶತಮಾನದ ಆರಂಭಕಾಲದಲ್ಲಿ ಸಂಸ್ಕೃತಿ ಮತ್ತು ಅರ್ಥಶಾಸ್ತ್ರಗಳಂತಹ ಸಮಾಜ ವಿಜ್ಞಾನ ಕ್ಷೇತ್ರಗಳಿಗೆ ಸಂಬಂಧವೇ ಇರಲಿಲ್ಲ ಅಥವಾ ಅವುಗಳ ನಡುವಿನ ಸಂಬಂಧ ಗಣನೆಗೆ ಬಾರದಾಗಿತ್ತು. ಆದರೆ ಇಂದು ಒಂದು ದೇಶದ ಸಾಂಸ್ಕೃತಿಕ ಬದುಕಿಗೆ ಆ ದೇಶದ ಆರ್ಥಿಕ, ರಾಜಕೀಯ ಅಂಶಗಳು ಪ್ರಭಾವಿಸುತ್ತವೆ. ಅಷ್ಟೇ ಅಲ್ಲ ಅಲ್ಲಿನ ಬದುಕನ್ನು ಈ ಅಂಶಗಳೇ ನಿಯಂತ್ರಿಸುತ್ತವೆ ಕೂಡ. ಇಂತಹ ಸಂದರ್ಭದಲ್ಲಿ ವೈಯಕ್ತಿಕ ಮಟ್ಟದಲ್ಲಿಯೋ ಸಾಧಿಸುತ್ತಿದ್ದ ರೊಮ್ಯಾಂಟಿಕ್ ಕಾಲದ 'ಭಾವನಾತ್ಮಕ ಸಂಸ್ಕೃತಿ'ಯ ವಿಚಾರಗಳು ಅಪ್ರಸ್ತುತವೇ. ಆದರೂ ಕ್ಲಿಷ್ಟವಾಗುತ್ತಿರುವ ಮಾನವೀಯ ಸಂಬಂಧಗಳ ದೃಷ್ಟಿಯಿಂದ ಮತ್ತು ನಶಿಸುತ್ತಿರುವ ನೈತಿಕ ಮೌಲ್ಯಗಳ ದೃಷ್ಟಿಯಿಂದ, ಆದರ್ಶವನ್ನೇ ತನ್ನ ಜೀವನ ಧ್ಯೇಯವನ್ನಾಗಿಸಿಕೊಂಡಿದ್ದ ದೇಶವು ಅವರಂತಹ ಚಿಂತಕರ ಚಿಂತನೆಗಳನ್ನು ಪುನರ್ ಅವಲೋಕನ ಮಾಡಬೇಕಿದೆ.

ಅಡಿಟಿಪ್ಪಣಿಗಳು:

---

೧. ದೇವುಡು: ಕರ್ನಾಟಕ ಸಂಸ್ಕೃತಿ: ಪುಟ -೧೯.

೨. ದೇವುಡು: ಕರ್ನಾಟಕ ಸಂಸ್ಕೃತಿ: ಪುಟ-೧೭.

೩. ಶಿವಕುಮಾರ ಸ್ವಾಮಿ ಪಿ.ಎಸ್: ದೇವುಡು ದರ್ಶನ: ಪುಟ-೭೧.

೪. ಪುರುಷೋತ್ತಮ ಬಿಳಿಮಲೆ: ಶಿಷ್ಟಪರಿಶಿಷ್ಟ: ಪುಟ -೨೦೩.

೫. ಗೌರೀಶ ಕಾಯ್ಕಿಣಿ (ಸಂ): ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ: ಪುಟ-೨೧.

೬. ನಾಗರಾಜ ಡಿ.ಆರ್: ಧರ್ಮಚಕ್ರ: ಪುಟ-೧೧೩.

೭. ಪಟ್ಟಾಭಿರಾಮ ಸೋಮಯಾಜಿ ಎಚ್: ಕಾರಂತ ಮಂಥನ: ಪುಟ-೧೨೦.

೮. ದೇವುಡು: ಕರ್ನಾಟಕ ಸಂಸ್ಕೃತಿ: ಪುಟ-೨೭.

೯. ಹಿರೇಮಠ ಎಸ್.ಎಸ್: ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ-೧(ಹಬ್ಬಗಳು): ಪುಟ-೧೫೦

೧೦. ದೇವುಡು: ಕರ್ನಾಟಕ ಸಂಸ್ಕೃತಿ: ಪುಟ-೨೮.

೧೧ ಅದೇ " : ಪುಟ-೨೯.

೧೨. ಅ.ರಾ.ಮಿತ್ರ: ದೇವುಡು ದರ್ಶನ: ಪುಟ-೨೨೯.

ಅಧ್ಯಾಯ-೪

ಸಮಕಾಲೀನ ಸಂಸ್ಕೃತಿ ಚಿಂತಕರು ಹಾಗೂ ದೇವುಡು

ದೇವುಡು ಅವರು ಬದುಕಿದ್ದ ಕಾಲ ಆಧುನಿಕ ಕನ್ನಡವು ಸಮೃದ್ಧತೆಯನ್ನು ಪಡೆಯಲು ಹಾತೊರೆಯುತ್ತಿದ್ದ ಕಾಲ. ಇದು ಕೇವಲ ಭಾಷಿಕ ದೃಷ್ಟಿಯ ಮಾತಲ್ಲ. ಸಾಹಿತ್ಯ ಸಂಸ್ಕೃತಿ ಹಾಗೂ ಒಟ್ಟು ಬದುಕಿನ ಸ್ಥಿತಿಯೇ ಪರಿವರ್ತನೆಗೆ ತುಡಿಯುತ್ತಿದ್ದ ಸಂದರ್ಭ. ಇಂತಹ ತುಡಿತವನ್ನೇ ತಮ್ಮ ಚಿಂತನೆಯ ಮುಖ್ಯ ವಿಷಯವನ್ನಾಗಿಸಿಕೊಂಡು ಸಾಹಿತ್ಯದ ಮೂಲಕ ವಿಚಾರಗಳನ್ನು ಅಭಿವ್ಯಕ್ತಿಸಿದರು ಕನ್ನಡದ ನವೋದಯ ಘಟ್ಟದ ಸಾಹಿತಿಗಳು. ಈ ಘಟ್ಟದ ಚಿಂತಕರ ಅಭಿವ್ಯಕ್ತಿಯ ಕ್ರಮಗಳೂ ವಿಭಿನ್ನವೇ ಎನ್ನಬಹುದು. ಶಂಬಾ ಜೋಶಿ, ಆಲೂರ ವೆಂಕಟರಾಯರು, ಮುಳಿಯ ತಿಮ್ಮಪ್ಪಯ್ಯ ಮುಂತಾದವರು ತಮ್ಮ ಚಿಂತನೆಯನ್ನು ಸೃಜನೇತರ ವೈಚಾರಿಕ ಕೃತಿಗಳಲ್ಲಿ ಅಭಿವ್ಯಕ್ತಿಸಿದರು. ಅದರಂತೆ ಸೃಜನ ಮತ್ತು ಸೃಜನೇತರ ಬರವಣಿಗೆಯ ಮೂಲಕ ಮಾಸ್ತಿ, ದೇವುಡು, ಡಿ.ವಿ.ಜಿ, ಕುವೆಂಪು ಮುಂತಾದವರು 'ಸಂಸ್ಕೃತಿ' ಕುರಿತಾದ ವಿಚಾರಗಳನ್ನು ವ್ಯಕ್ತಪಡಿಸಿದರು. ರಾಷ್ಟ್ರಮಟ್ಟದಲ್ಲಿಯೂ ಸ್ವಾತಂತ್ರ್ಯಕ್ಕಾಗಿ ಜನರು ಹಂಬಲಿಸುವ ಕಾಲ ಅದಾಗಿತ್ತು. ಎಲ್ಲೆಡೆ ಗಾಂಧೀಜಿಯ ಪ್ರಭಾವ ಅಧಿಕವಾಗಿತ್ತು. ಜನರು ಸತ್ಯ, ಆದರ್ಶದಂತಹ ಮೌಲ್ಯಗಳಿಗಾಗಿ ಸ್ಪಂದಿಸುವ ವಾತಾವರಣ ಮೂಡಿತ್ತು. ಬಂಗಾಳಿ, ಹಿಂದಿ, ಮರಾಠಿ ಸಾಹಿತ್ಯ ಕೃತಿಗಳು ಇಂತಹ ರಾಷ್ಟ್ರೀಯ ಸ್ಥಿತಿಗೆ ಮುಖವಾಣಿಯಾಗಿ ರಚನೆಗೊಂಡವು. ಕನ್ನಡ ಲೇಖಕರೂ ಆ ಕಾಲದ ಸ್ಥಿತಿಗೆ ಪ್ರತಿಕ್ರಿಯಿಸಿದರು.

ದೇವುಡು ಅವರ ಸಮಕಾಲೀನರು ಒಬ್ಬೊಬ್ಬರೂ ತಿಳಿವಿನ ಶಕ್ತಿಯಾಗಿದ್ದರು. ದೇವುಡು ಇವರೆಲ್ಲರ ಸತುವ ಪಡೆದವರು. ಹಾಗೆ ಪಡೆದರೂ ಬೇರೆ ಯಾರಿಗೂ ಲಭ್ಯವಾಗದ ವಿಶಿಷ್ಟ ಸಾಧನೆಗಳನ್ನು ಅವರು ಕೈಗೊಂಡರು. ಧರ್ಮದ ಋಜು ದರ್ಶನವನ್ನು ಕಂಡವರು. ೧ ಅಷ್ಟೇ ಅಲ್ಲ ಜಾನಪದ, ಶಾಸ್ತ್ರ, ಪುರಾಣ, ಮಕ್ಕಳ ಸಾಹಿತ್ಯ, ಕಾದಂಬರಿ ಸಾಹಿತ್ಯ, ನಾಟಕ, ವಿವಿಧ ಮುಂತಾದ ಕ್ಷೇತ್ರಗಳಲ್ಲಿ ಸಾಧನೆಗೈದರು. ಒಟ್ಟಾರೆ ದೇವುಡು ಅವರ ಸಾಧನೆಗಳ ಉಲ್ಲೇಖನದ ಉದ್ದೇಶವೇನೆಂದರೆ ಸಮಕಾಲೀನರಲ್ಲಿ ಅವರ ಸ್ಥಾನವನ್ನು ಗುರುತಿಸಲು ಪ್ರಯತ್ನಿಸುವುದಾಗಿದೆ.

ದೇವುಡು ಹಾಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ :

ಮಾಸ್ತಿಯವರು ದೇವುಡು ಅವರ ಸಮಕಾಲೀನರಲ್ಲಿ ಒಬ್ಬರು. ಮಾಸ್ತಿ ವೆಂಕಟೇಶ ಅಯ್ಯಂಗಾರರು ೧೯೩೧ರಲ್ಲಿ ಪ್ರಕಟಗೊಂಡ ''ಜನತೆಯ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ಈ ಕೃತಿಯಲ್ಲಿ ಸಂಸ್ಕೃತಿಯ ವಿಚಾರಗಳನ್ನು ಹೇಳಿದ್ದಾರೆ. ಅಲ್ಲಿ ಅವರು ಕೇಳಿಕೊಳ್ಳುವ ಮೊದಲ ಪ್ರಶ್ನೆ ಸಂಸ್ಕೃತಿಯ ಅಧ್ಯಯನ ಯಾತಕ್ಕಾಗಿ? ಎಂದು. ಅವರೇ ನೀಡಿರುವ ಉತ್ತರ; ಹೊಸ ಜೀವನ ಬರತೊಡಗಿದೆ, ಕೆಲವರು ನಮ್ಮ ಸಂಸ್ಕೃತಿಯನ್ನು ನಿಂದಿಸಲು ತೊಡಗಿದ್ದಾರೆ. ಇದರಿಂದ ಬಹಳ ಮಂದಿಗೆ ಅತೃಪ್ತಿ ಇದೆ. ಅಪಕಾರಣ ನಿಂದಿಸುವ ಜನರಿಗೆ ನಮ್ಮ ಸಂಸ್ಕೃತಿಯಲ್ಲಿ ದೋಷಗಳಂತೆ ಗುಣಗಳು ಇವೆ ಎಂಬುದನ್ನು ತೋರಿಸಲು ಸಂಸ್ಕೃತಿಯ ಅಧ್ಯಯನ ಅವಶ್ಯಕ. ಜೊತೆಗೆ ರಾಜ್ಯದ ಆಡಳಿತದಲ್ಲಿ ಜನಾಂಗದ ದಿನದಿನದ ಆಡಳಿತದಲ್ಲಿ ಜನಸಂಸ್ಕೃತಿಯ ಜ್ಞಾನವು ಅವಶ್ಯಕತೆಯಾಗಿದೆ. ೨ ಈ ಧೋರಣೆಯ ಕಾರಣವಾಗಿ ಮಾಸ್ತಿ-ದೇವುಡು ಒಂದೇ ನೆಲೆಗಳಲ್ಲಿ ಗುರುತಿಸಲ್ಪಡುತ್ತಾರೆ. ಜನಪದ ಬದುಕಿನ ಮೂಲಕ ಸಂಸ್ಕೃತಿಯ ಶೋಧನೆಗೆ ತೊಡಗಿದ್ದು ಆ ಕಾಲದ ಇವರ ಮಹತ್ವದ ಸಾಧನೆ ಎನ್ನಬಹುದು.

ಸಂಸ್ಕೃತಿ ಎನ್ನುವುದು ಜನರ ಒಟ್ಟು ಅನುಭವಗಳಿಂದ ಅವರ ಮನಸ್ಸಿನಲ್ಲಿ ಉಂಟಾಗಿರುವ ಪರಿಣಾಮ.

ಪುರಾಣ, ಶ್ರವಣ, ಹರಿಕಥೆಗಳನ್ನು ಆಗಾಗ್ಗೆ ಜನ ಕೇಳುತ್ತಿರುವುದರ ಪರಿಣಾಮವಾಗಿ ಅವರ ಜೀವನ, ನಡತೆಯಲ್ಲಿ ಸಾಮರಸ್ಯ ಬಂದಿದೆ. ಊರದೇವಾಲಯದಲ್ಲಿ ಉತ್ಸವ ಕಾಲದಲ್ಲಿ ಆಯುಧ ಪೂಜೆ, ಬಿತ್ತುವಾಗ ಭೂಮಿಪೂಜೆ, ಹೊಲಗದ್ದೆಗಳ ಕೆಲಸಗಳಲ್ಲಿ ಒಬ್ಬರಿಗೊಬ್ಬರು ನೆರವು, ಅನೇಕ ರೀತಿಯ ಹಬ್ಬ ಹರಿದಿನಗಳು, ಆಟಗಳು ಇಂತಹ ವೈವಿಧ್ಯ ಜೀವನದಲ್ಲಿ ಊರ ಜನರ ಆಸಕ್ತಿಯನ್ನು ಕಾಣಬಹುದಾಗಿದೆ. ವಿವಿಧ ಮತಗಳ ಮತ್ತು ಸರ್ವಧರ್ಮಗಳ ಸಮನ್ವಯದಿಂದ ಸಾಮರಸ್ಯದ ಪರಿಪೂರ್ಣ ಜೀವನವನ್ನು ಕಾಣಲು ಸಾಧ್ಯವಾಗಿದೆ, ಎಂದು ಮಾಸ್ತಿ ಅಭಿಪ್ರಾಯಪಡುತ್ತಾರೆ. ದೇವುಡು ಅವರು ಸಂಸ್ಕೃತ ಅಧ್ಯಯನದ ಸಂದರ್ಭದಲ್ಲಿ ಪಂಡಿತ-ಪಾಮರರ ನಡುವೆ, ಮೇಲಿನವರ-ಕೆಳಗಿನವರ ನಡುವೆ ಅಂತರವನ್ನು ಪರಿಗಣಿಸದೆ ಸಮಾನ ನೋಟದಿಂದ ನೋಡಬೇಕೆಂಬ ಯೋಚನೆಯನ್ನು ಮಾಸ್ತಿಯವರ ಚಿಂತನೆಗಳಲ್ಲಿಯೂ ಕಾಣಬಹುದಾಗಿದೆ.

ಮಾಸ್ತಿಯವರು ಪಾಶ್ಚಾತ್ಯ ಶಿಕ್ಷಣದ ಜ್ಞಾನವನ್ನು ಪಡೆದಿದ್ದರಿಂದ ಅವರಿಗೆ ಅಲ್ಲಿಯ ಅನೇಕ ವಾದ-ವಿವಾದಗಳ ಪರಿಚಯವಿತ್ತು. ಈ ಕಾರಣದಿಂದ ಅವರ ಯೋಚನೆಯು ಪರಂಪರೆಯನ್ನು ಮೆಚ್ಚಿಯೂ ಆಧುನಿಕತೆಯೆಡೆಗೆ ಸ್ಪಂದಿಸುವುದಾಗಿತ್ತು. ಅವರೇ ಹೇಳುವಂತೆ ''ನಮ್ಮ ಪರಂಪರೆಯ ವಿಚಾರಗಳು ಚಳುವಳಿಗಳು, ಮೌಲ್ಯಗಳು, ಜನಗೆ ಮಾದರಿಯಾಗಬೇಕಾಗಿದೆ ಎಂದು, ಅವೇ ನಮ್ಮ ಸಂಸ್ಕೃತಿಯ ಆಧಾರಗಳು ಎಂದೂ ವಿವರಿಸುತ್ತಾರೆ. ಜನಪದ ಹಾಡು, ಒಗಟು, ಗಾದೆ, ಕಥೆಗಳನ್ನು ಉಲ್ಲೇಖಿಸಿ ಅಲ್ಲಿ ವ್ಯಕ್ತಗೊಂಡಿರುವ ಸಂಸ್ಕೃತಿಯನ್ನು ತೋರಿಸುತ್ತಾರೆ. ದೇವುಡು ಅವರ ಸಮಕಾಲೀನರಲ್ಲಿ ಒಬ್ಬರಾದ ಮಾಸ್ತಿಯವರು ೧೯೩೦ ರ ಸಂದರ್ಭದಲ್ಲಿಯೇ ಜನಪದ ಬದುಕಿನ ಮೂಲದಿಂದ ಸಂಸ್ಕೃತಿ ಚಿಂತನೆಗೆ ತೊಡಗುತ್ತಾರೆ. ಈ ಕಾರಣದಿಂದ ದೇವುಡು-ಮಾಸ್ತಿ ಸಮಾನ ಆಲೋಚನೆ ಉಳ್ಳವರಾಗಿದ್ದರು ಎನ್ನಬಹುದು.

ದೇವುಡು ಹಾಗೂ ಶಂಬಾ ಜೋಶಿ:

ದೇವುಡು ಅವರ ಸಮಕಾಲೀನ ಸಂಸ್ಕೃತಿ ಚಿಂತಕರಲ್ಲಿ ಶಂಬಾ ಜೋಶಿಯವರು ಒಬ್ಬರು. ಶಂಬಾ ಜೋಶಿಯವರು ತಮ್ಮ ಸ್ವತಂತ್ರ ವೈಚಾರಿಕ ಬರಹಗಳ ಮೂಲಕ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಗುರುತಿಸಿಕೊಂಡಿದ್ದಾರೆ.

ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ ಭಾಗ ೧ ಮತ್ತು ಭಾಗ ೨, ಶಿವನ ಹುಟ್ಟು, ವೈವಸ್ವತ ಮನುಪ್ರಣೀತ ಮಾನವಧರ್ಮದ ಆಕೃತಿ, ಬುದ್ಧನ ಜಾತಕ, ಋಗ್ವೇದದಲ್ಲಿ ನಾಗಪ್ರತಿಮಾ ವಿಚಾರ, ಮುಂತಾದ ಕೃತಿಗಳ ಮೂಲಕ ಕನ್ನಡದ ವಿಚಾರ ಕ್ರಮವನ್ನೇ ಬದಲಿಸಿದರು. ಶಂಬಾ ಜೋಶಿಯವರು ದೇವುಡು ಶಾಸ್ತ್ರಿ, ಡಿ.ವಿ.ಜಿ.ಯವರ ಸಮಕಾಲೀನರಂತೆ ಕಂಡರೂ ಇವರೆಲ್ಲರಿಗಿಂತ ಭಿನ್ನರಾಗಿ ತಮ್ಮ ಯೋಚನೆಗಳನ್ನು ಅಭಿವ್ಯಕ್ತಿಸಿದರು. ಶತಶತಮಾನಗಳಿಂದ ಕಟ್ಟಿಕೊಂಡುಬಂದಿದ್ದ, ಒಪ್ಪಿಕೊಂಡು ಬಂದಿದ್ದ ಅನೇಕ ವಿಚಾರಗಳನ್ನು ಶಂಬಾ ಪ್ರಶ್ನಿಸಿದರು. ವೇದಗಳ ಬಗ್ಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊದಲಿನವರಾಗಿ ಪ್ರಶ್ನಿಸಿದರು. ವೇದ ಉಪನಿಷತ್ತುಗಳನ್ನು ಕೇವಲ ಬೀಜಕವೆ ಅಸ್ತ್ರಗಳು ಒಂದು ವರ್ಗದ ಜನರಿಗೆ ಶೋಷಣೆಯ ಅಸ್ತ್ರಗಳಾಗಿ ಹೇಗೆ ಕೆಲಸ ಮಾಡುತ್ತಿದ್ದವು ಎಂಬುದನ್ನು ತೋರಿಸುತ್ತಾರೆ. ಅಷ್ಟೇ ಅಲ್ಲ ವೇದಗಳಲ್ಲಿ ಅಂತರ್ಗತಗೊಂಡ ಕೆಲವು ಉತ್ತಮಾಂಶಗಳನ್ನು ಎತ್ತಿ ಹಿಡಿಯುತ್ತಾರೆ.

ಶಂಬಾ ಅವರು, ದೇವುಡು ಅವರಂತೆ ಅಂತರಂಗದ ಅಭೀಪ್ಸೆಗಳನ್ನು ಇಟ್ಟುಕೊಂಡು ಚಿಂತನೆ ತೊಡಗುವುದಿಲ್ಲ. ಅವರ ಸಂಸ್ಕೃತಿ ಚಿಂತನೆ ಮಾನವನ ಬಹಿರಂಗದ ಕ್ರಿಯಾತ್ಮಕ ಬದುಕಿನ ಹಿನ್ನೆಲೆಯಲ್ಲಿ ರೂಪುಗೊಂಡದ್ದು. ಅವರ ಚಿಂತನೆ ಎರಡು ಆಯಾಮಗಳಲ್ಲಿ ನಡೆದಿದೆ. ಒಂದು ಕರ್ನಾಟಕ ಅಥವಾ ಕನ್ನಡ ಸಂಸ್ಕೃತಿಯನ್ನು ಹುಡುಕುವಂತಹದು. ಇನ್ನೊಂದು ಭಾರತೀಯ ಸಂಸ್ಕೃತಿಯ ವಿಚಾರಧಾರೆಗಳ ಮೂಲಕ ಸಮಗ್ರ ಸಂಸ್ಕೃತಿಯೊಂದನ್ನು ಗುರುತಿಸುವಂತಹದು. ಒಟ್ಟಾರೆ ಇವುಗಳ ಹಿಂದಿರುವ ಕಳಕಳಿ ಮಾನವನ ಬದುಕಿನ ಗೊಂದಲಗಳನ್ನು ಕಂಡುಕೊಳ್ಳುವುದು.

ಮಲ್ಲೇಪುರಂ ಜಿ. ವೆಂಕಟೇಶ ಅವರು ಗುರುತಿಸಿರುವಂತೆ ಶಂಬಾ ಅವರ ಒಟ್ಟು ಚಿಂತನೆಗಳನ್ನು ಮೂರು ವರ್ಗಗಳಲ್ಲಿ ವಿಂಗಡಿಸಬಹುದು. ಒಂದು ಕನ್ನಡ ಸಂಸ್ಕೃತಿಯನ್ನು ಹುಡುಕುವ ಅಧ್ಯಯನ, ಎರಡು ಮಾನವ ಸಂಸ್ಕೃತಿಯನ್ನು ಕಂಡುಕೊಳ್ಳುವ ಅಧ್ಯಯನ. ಮೂರು ಮಾನವ ಸಂಸ್ಕೃತಿಯ ಹಿನ್ನೆಲೆಯಲ್ಲಿ ಭಾರತೀಯ ಸಂಸ್ಕೃತಿಯ ವಾಸ್ತವಿಕತೆಗಳ ಶೋಧನೆಯ ಕಾರ್ಯ. ೩ ಈ ಕವಲುಗಳಲ್ಲಿ ಅವರ ಚಿಂತನೆ ಹರಿದಿದೆ. ಆದರೂ ಒಂದೊಂದು ಕಡೆ ಇವುಗಳ ನಡುವೆ ಸಂಯೋಜನೆ ಕಂಡುಬರುತ್ತದೆ.

ಶಂಬಾ ಅವರ ಸಂಸ್ಕೃತಿ ಚಿಂತನೆ ಬಹುಮುಖೀ ನೆಲೆಗಳಿಂದ ರೂಪಗೊಂಡದ್ದು. ಜನಾಂಗದ ಭಾಷೆ, ಬದುಕಿನ ಮೂಲಗಳಿಂದ ಅವರು ಕನ್ನಡ ಪ್ರದೇಶದ, ಭಾಷೆಯ ಸಂಸ್ಕೃತಿಯನ್ನು ಶೋಧಿಸಲು ತೊಡಗುತ್ತಾರೆ. ಈ ಕಾರಣದಿಂದ ಶಂಬಾ ದೇವುಡು ಅವರ ಸಮಕಾಲೀನರಾದರೂ ವಿಚಾರಕ್ರಮದ ಕಾರಣದಿಂದ ಭಿನ್ನರಾಗಿ ಕಾಣುತ್ತಾರೆ. 'ಸಂಸ್ಕೃತಿಯ ಭಾವುಕ ಆಕೃತಿಗಳಿಗಿಂತ ವೈಚಾರಿಕ ಆಕೃತಿಗಳಿಗೇ ಮಹತ್ವಕೊಡುವ ಶಂಬಾ ಅವರ ಅಧ್ಯಯನ ಪ್ರಚಲಿತ ಶೈಕ್ಷಣಿಕ ಶಿಸ್ತಿನ ಮಿತಿಗಳನ್ನು ಮೀರಿದ್ದು. ೪ ಕನ್ನಡ ಸಂಸ್ಕೃತಿಯ ಅಧ್ಯಯನದಲ್ಲಿ ಅನುಸರಿಸಿದ್ದ ಮಾದರಿಯ ಅಧ್ಯಯನದ ಸರಳೀಕರಣವನ್ನು ಸಮರ್ಥವಾಗಿ ನಿವಾರಿಸಿದವರು ಶಂಬಾ. ೫ ಶಂಬಾ ಸಂಸ್ಕೃತಿಯನ್ನು 'ಗತಿ'ಯ ನೆಲೆಯಲ್ಲಿ ಗ್ರಹಿಸುತ್ತಾರೆ; ಉಳಿದವರು 'ಸ್ಥಿತಿ'ಯ ನೆಲೆಯಲ್ಲಿ ಮಾತ್ರ ತಿಳಿಯುತ್ತಾರೆ. ಶಂಬಾ ಅಂಥವರಲ್ಲಿ ಸಂಸ್ಕೃತಿ ಕುರಿತಾದ ಚಿಂತನೆ ಹಾಸು-ಹೊಕ್ಕುಗಳಾಗಿದ್ದರೆ; ಉಳಿದ ಚಿಂತಕರಲ್ಲಿ ಕೇವಲ ಹಾಸೋ ಅಥವಾ ಹೊಕ್ಕೋ ಆಗಿರುತ್ತದೆ. ಸ್ಥಗಿತಗೊಂಡ ಚರಿತ್ರೆಯ ನೆಲೆ ಮತ್ತು ಹಿನ್ನೆಲೆಗಳನ್ನು ಕುರಿತು ಚಿಂತಿಸಲು ತೊಡಗುತ್ತಾರೆ. 'ಚಿತ್ತಪ್ಪನ ಬೆಳಕೋ' ಗ್ರಂಥದ ಉದ್ದಕ್ಕೂ ಇದು ಮುಖ್ಯವಾಗಿ ನಮಗೆ ಎದ್ದು ಕಾಣುವ ಸಂಗತಿ ೬. ಹೀಗೆ ಶಂಬಾ ತಮ್ಮ ಆಲೋಚನಾಕ್ರಮದ ಭಿನ್ನತೆಯಿಂದ ಸಮಕಾಲೀನ ಸಂಸ್ಕೃತಿ ಚಿಂತಕರಿಗಿಂತ ಭಿನ್ನ ನೆಲೆಯಲ್ಲಿ ನಿಲ್ಲುತ್ತಾರೆ.

ದೇವುಡು ಹಾಗೂ ಆಲೂರು ವೆಂಕಟರಾಯರು:

ದೇವುಡು ಅವರ ಸಮಕಾಲೀನರಲ್ಲಿ ಆಲೂರು ವೆಂಕಟರಾಯರು ಒಬ್ಬರು. ಇಂದು ನಾವು ಎದುರಿಸುತ್ತಿರುವ ಸಂಸ್ಕೃತಿಯ ಬಗೆಗಿನ ಸಂಕೀರ್ಣತೆಯನ್ನು ಇಪ್ಪತ್ತನೆ ಶತಮಾನದ ಎರಡು-ಮೂರನೆ ದಶಕಗಳಲ್ಲಿ ಕಾಣುವುದಿಲ್ಲ. ಇಂದು ಕಂಡುಕೊಂಡ ಸಂಸ್ಕೃತಿಯ ವೈವಿಧ್ಯತೆಗಳ ಪ್ರಜ್ಞೆ ಆಗ ಇರಲಿಲ್ಲ. 'ಏಕೆಂದರೆ ಇದೀ ಭಾರತೀಯ ಸಂಸ್ಕೃತಿಯೇ ಬ್ರಾಹ್ಮಣೀಕರಣಗೊಂಡಿದ್ದ ಕಾಲ ಆದಾಗಿತ್ತು'. ೭ ಈ ಕಾಲದ ಒತ್ತಡದಲ್ಲಿ ಅಂದಿನ ಚಿಂತನೆಗಳು ರೂಪುಗೊಳ್ಳುತ್ತಿದ್ದವು. ವೈದಿಕ ಸಂಸ್ಕೃತಿಯನ್ನು ಸಮರ್ಥಿಸುವ ದಿಕ್ಕಿನಲ್ಲಿ ದೇವುಡು ಮತ್ತು ಆಲೂರರ

ಯೋಚನೆಗಳು ಒಂದೇ ನೆಲೆಯಲ್ಲಿ ನಿಲ್ಲುತ್ತವೆ. ಆದರೆ ಶಿಷ್ಟವನ್ನು ಒಪ್ಪಿಕೊಂಡೂ, ಜಾನಪದ (ಪರಿಶಿಷ್ಟ)ವನ್ನು ಕಡೆಗಣಿಸಿದ ದೇವುಡು ಅವರ ಚಿಂತನೆಗಳಿಗಿಂತ ಆಲೂರರ ಚಿಂತನೆಗಳು ಭಿನ್ನವಾಗುತ್ತವೆ. ಅಂದರೆ 'ಶಿಷ್ಟ' ರೀತಿಯಲ್ಲಿ ಭಾರತೀಯ ಸಂಸ್ಕೃತಿಗಳನ್ನು ಅರ್ಥೈಸುವ ಆಲೂರರ ಚಿಂತನೆ ಪುರೋಹಿತ ಶಾಹಿಗೆ ಒತ್ತುಕೊಡುವುದು ಸ್ಪಷ್ಟವಾಗುತ್ತದೆ. ೮ ವೇದ, ಉಪನಿಷತ್ತುಗಳು, ಗೀತೆಯನ್ನು ಒಪ್ಪಿಕೊಂಡವರು ಮಾತ್ರ ಸುಸಂಸ್ಕೃತರು ಎಂದು ದೇವುಡು ಪ್ರತಿಪಾದಿಸುತ್ತಿದ್ದರು. ಆಲೂರು ಅವರ ವಿಚಾರಗಳೂ ಇದೆ ಧಾಟಿಯವು. ವೇದಗಳಲ್ಲಿಯ ಸಾಂಸ್ಕೃತಿಕ ಅಂಶಗಳನ್ನು ರೂಢಿಸಿಕೊಂಡವನು ಭಾರತೀಯನಾಗಬಲ್ಲ ಮತ್ತು ಕನ್ನಡಿಗನಾಗಬಲ್ಲ ಎಂದು ಹೇಳುತ್ತಿದ್ದರು.

ಕರ್ನಾಟಕತ್ವದ ಪರಕೀಯತೆಯ ದೃಷ್ಟಿಯಿಂದ ಆಲೂರರು ಹೀನವಾದ ವಾದಕ್ಕೆ ಇಳಿಯುತ್ತಾರೆ. ಅವರು ಕನ್ನಡ ಸಂಸ್ಕೃತಿಯ ಅನನ್ಯತೆಯನ್ನು ಪರಕೀಯರಿಂದ ಉಳಿಸಿಕೊಳ್ಳುವುದು ಸಾಧ್ಯ ಎಂದು ಅರಿತಿದ್ದರು. ಅನನ್ಯತೆಯ ಉಳಿವಿನ ವಿಚಾರ ಭಾವನಾತ್ಮಕವಾದ ವಿಚಾರವಾಗಿ ಆಲೂರರ ಚಿಂತನೆಯಿಂದ ವ್ಯಕ್ತವಾಗಿದೆ. ಆದರೆ ಅದು ಕೇವಲ ಭಾವನಾತ್ಮಕವಾದದ್ದೇ ಅಲ್ಲ, ಭೌಮಾತ್ಮಕವೂ ಹೌದು. ೯ ಈ ಹಿನ್ನೆಲೆಯಲ್ಲಿ ದೇವುಡು ಅವರ ಕರ್ನಾಟಕ ಸಂಸ್ಕೃತಿ ಕುರಿತ ಯೋಚನೆ ಭಾವನಾತ್ಮಕ ಹಾಗೂ ಭೌಮಾತ್ಮಕ ಎರಡನ್ನು ನಿರಾಕರಿಸಿದ್ದು. ದೇವುಡು ಅವರು ಆಲೂರರಂತೆ ಕನ್ನಡ ಸಂಸ್ಕೃತಿಯ ವೈಭವೀಕರಣದ ಆಚೆಗೆ ಇಳಿಯದೇ ಅದರ ಅನನ್ಯತೆಯ ವಾಸ್ತವ ಸಂಸ್ಕೃತಿಯನ್ನು ಜನಪದ ಬದುಕಿನ ಮೂಲಕ ತೋರಿಸುವ ಪ್ರಯತ್ನ ಮಾಡುತ್ತಾರೆ.

ದೇವುಡು ಮತ್ತು ಆಲೂರರ ವಿಚಾರಗಳನ್ನು ಹೀಗೆ ಸಮೀಕರಿಸಬಹುದು; ದೇವುಡು ಅವರು ವೇದ-ಉಪನಿಷತ್ತುಗಳ ಆಧಾರದಿಂದ ಕರ್ನಾಟಕ ಸಂಸ್ಕೃತಿಯನ್ನು ಭಾರತೀಯ ಸಂಸ್ಕೃತಿಯ ಎತ್ತರಕ್ಕೆ ಏರಿಸಿದರೆ, ಆಲೂರರು ಭಾರತೀಯ ಸಂಸ್ಕೃತಿಯ ಎತ್ತರದಿಂದ ಕರ್ನಾಟಕತ್ವವನ್ನು ಅದೇ ವೇದ ಉಪನಿಷತ್ತುಗಳನ್ನು ಆಧರಿಸಿ ಪ್ರತ್ಯೇಕಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಇವರ ಚಿಂತನೆಗಳು ಇಷ್ಟಕ್ಕೆ ನಿಲ್ಲುವುದಿಲ್ಲ. 'ಕರ್ನಾಟಕ ಗತವೈಭವ'ದ ಮೂಲಕ ಇಡೀ ಒಂದು ಪ್ರದೇಶದ ಜನರ ಮನಸ್ಸನ್ನೇ ಒಂದುಗೂಡಿಸುವ ಪ್ರಯತ್ನ ಮಾಡುತ್ತಾರೆ. ಭಾರತವೆಂಬುದು ಅಖಂಡ ಸಂಸ್ಕೃತಿಯೆಂದು ಒಪ್ಪಬಹುದಾದರೂ ಭೌಗೋಳಿಕ ದೃಷ್ಟಿಯಿಂದ ವಿಭಿನ್ನ ಪ್ರದೇಶಗಳಲ್ಲಿ

ಸಾವಿರಾರು ವರ್ಷಗಳಿಂದ ಬದುಕನ್ನು ಸಾಗಿಸಿದ ಪ್ರತ್ಯೇಕ ಜನಸಮುದಾಯಗಳಿವೆ. ಈ ಜನಸಮುದಾಯಗಳು ಒಂದೇ ಸೂತ್ರದಡಿ ಸೇರಬೇಕಾದದ್ದು ಅನಿವಾರ್ಯ. ಅದು ರಾಜಕೀಯ ಅವಶ್ಯಕತೆಗಿಂತ ಮುಖ್ಯವಾಗಿ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಬಹಳ ತುರ್ತಿನದು. ಈ ಸಂಘರ್ಷಗಳನ್ನು ಕಟ್ಟಿಕೊಂಡೇ ಕರ್ನಾಟಕ ಏಕೀಕರಣ ಚಳುವಳಿ ನಡೆದದ್ದು. ಈ ಚಳುವಳಿಯ ಮುಂಚೂಣಿ ಆಲೂರು ವೆಂಕಟರಾಯರು. ದೇವುಡು ಏಕೀಕರಣ ಚಳುವಳಿಯಲ್ಲಿ ನೇರವಾಗಿ ಭಾಗವಹಿಸದೇ ಇದ್ದರೂ ಕರ್ನಾಟಕವೆಂಬುದನ್ನು ಅಖಂಡ ಭಾರತೀಯತೆಯ ಹಿನ್ನೆಲೆಯಲ್ಲಿ ನೋಡುತ್ತಾರೆ. ಭಾರತವನ್ನು ಹೊರತುಪಡಿಸಿದ ಕರ್ನಾಟಕ ಎಂಬುದು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ಹೊಂದಿದ್ದರು.

ದೇವುಡು ಹಾಗೂ ಡಿ.ವಿ.ಗುಂಡಪ್ಪ:

ಡಿ.ವಿ.ಜಿ.ಯವರು ದೇವುಡು ಅವರ ಸಮಕಾಲೀನರು. ಡಿ.ವಿ.ಜಿ ಅವರ ಸಂಸ್ಕೃತಿ ಚಿಂತನೆಯು ಮುಖ್ಯವಾಗಿ ಆಧ್ಯಾತ್ಮಿಕ ಹಿನ್ನೆಲೆಯಿಂದ ರೂಪಗೊಂಡದ್ದು. ಅವರು ಸಂಸ್ಕೃತಿಯ ಅರ್ಥೈಸುವಿಕೆಯ ಸಂದರ್ಭದಲ್ಲಿ ಅದರ ವಿಶಾಲತೆಯನ್ನು ಹೇಳಿದರೂ, ಇನ್ನೊಂದೆಡೆ ಅದನ್ನು ವೈಯುಕ್ತಿಕ ನೆಲೆಗೆ ಇಳಿಸುತ್ತಾರೆ. ಸುಸಂಸ್ಕೃತನ ಗುಣಸಂಪತ್ತು 'ಸಂಸ್ಕೃತಿ' ೧೦. ಸಂಸ್ಕೃತಿಯೆಂಬುದು ಒಂದು ಬಗೆಯ ಆತ್ಮಶಿಕ್ಷಣ. ೧೧ ಎನ್ನುವಲ್ಲಿ ಅವರ ಸಂಸ್ಕೃತಿ ಕುರಿತಾದ ಯೋಚನೆ ವ್ಯಕ್ತಿಯೊಬ್ಬನ ಜೀವನಕ್ಕೆ ಸಂಬಂಧಿಸಿದೆ. ಸಾಮಾಜಿಕ ಬದುಕಿನ ಹಿನ್ನೆಲೆಯಲ್ಲಿ ಅವರ ಬಹಿರಂಗದ ಬದುಕನ್ನು ಗುರುತಿಸಲು ಪ್ರಯತ್ನಿಸುವ ದೇವುಡು ಅವರಿಗಿಂತ ಭಿನ್ನವಾಗಿ ಕಂಡುಬರುತ್ತದೆ. ಭಾರತೀಯ ತತ್ವಜ್ಞಾನ, ಆಧ್ಯಾತ್ಮಿಕ ಚಿಂತನೆ, ಮತ್ತು ದಾರ್ಶನಿಕ ಚೇತನಗಳ ಪ್ರಭಾವ ಡಿವಿಜಿಯವರ ಮೇಲಿತ್ತು. ಆ ಕಾರಣದಿಂದ ಅವರ ಯೋಚನೆಗಳು ವ್ಯಕ್ತಿಯ-ವ್ಯಕ್ತಿತ್ವ ವಿಕಾಸದಂತಹ ಅಂತರಂಗದ ತಾಕಲಾಟಗಳಿಗೆ ಪ್ರಾಧಾನ್ಯತೆಕೊಟ್ಟರು. ಅಧ್ಯಾತ್ಮದ ಜೊತೆಗೆ ಧಾರ್ಮಿಕ ಸಾಮಾಜಿಕ ಬದುಕಿನ ಜೊತೆ ದೇವುಡು ಸಂಪರ್ಕ ಹೊಂದಿದ್ದರು. ಈ ನೆಲೆಗಳಿಂದಲೇ ಇವರ ಚಿಂತನೆಗಳ ಭಿನ್ನತೆಯನ್ನು ಗುರುತಿಸಬಹುದು.

'ಸಂಸ್ಕೃತಿಯೆಂಬುದು ಬರಿಯ ವಿದ್ಯೆಯಲ್ಲ. ಅದು ವಿದ್ಯಾಕುಸುಮದ ಪರಾಗ, ಅದು ಸಾಹಿತ್ಯ ಪರಾಮರ್ಶೆಯ ಮತ್ತು ಲೋಕಾನುಭವ ವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಸಕಲ ಸಮಾಧಾನಕರವಾದ ಶೀಲಸೌಭಾಗ್ಯ.

ಅದು ಜೀವನದ ನಾನಾ ವಿಷಯಗಳ ನಾನಾ ಅರ್ಥಗಳ ನಾನಾ ತತ್ವಗಳ, ನಾನಾ ಧರ್ಮಗಳ ವೈಶಿಷ್ಟ್ಯ ತಾರತಮ್ಯದಿಂದಾದ ಸಮನ್ವಯ ಸಾಮರಸ್ಯ. ಅದೇ ನಯ, ವಿನಯ, ಮರ್ಯಾದೆ, ಒಳ್ಳೆಯದನ್ನು ಕಂಡುಕೊಳ್ಳುವ ಪ್ರಯತ್ನ ಸಂಸ್ಕೃತಿ ಆಗಿರುತ್ತದೆ. ೧೨ ನಮ್ಮವರಲ್ಲಿ ದೇವುಡು ಮತ್ತು ಡಿವಿಜಿ ಯವರು ಸಮಾನ ಮನೋಭಾವದವರು. ದೇವುಡು ಹಾಗೂ ದ.ರಾ. ಬೇಂದ್ರೆ; ಅರವಿಂದರ ವಿಚಾರಗಳ ಪ್ರಭಾವದಿಂದ ಚಿಂತನೆಗೆ ತೊಡಗುವ ಬೇಂದ್ರೆಯವರದು ಮುಖ್ಯವಾಗಿ ಆಧ್ಯಾತ್ಮಿಕ ಮೂಲದ ಸಂಸ್ಕೃತಿ ಚಿಂತನೆ, ಅವರು ಮನುಷ್ಯನ ಶಿಕ್ಷಣದಿಂದ ಸಂಸ್ಕೃತಿ ಬೆಳಸಬಹುದೆನ್ನುತ್ತಾರೆ. ಬಾಳು ಚಿರಿಬಿರಿಯಾಗಿದ್ದು ಅದು ಇತಿಯಾದ ಬದುಕು ಆಗಬೇಕಾದರೆ ಸಂಸ್ಕೃತಿ ಅವಶ್ಯಕ ಎಂದು ಅಭಿಪ್ರಾಯಪಡುತ್ತಾರೆ. ಮಾನವನ 'ಬದುಕು' ಮತ್ತು 'ಬಾಳು'ಗಳ ನಡುವಿನ ಸಮನ್ವಯತೆಯನ್ನು ಹೇಳಿ ಮಾನವ ಬದುಕಲು ಶಿಕ್ಷಣ ಬೇಕಾದ್ರೆ, ಬಾಳಲು ಸಂಸ್ಕೃತಿ ಬೇಕು ಎಂದು ಹೇಳುತ್ತಾರೆ. ೧೩ 'ಸಂಸ್ಕೃತಿಯೆಂಬುದು ಜೀವನ ಪ್ರಜ್ಞೆಯ ಅಭಿವ್ಯಕ್ತಿಯಾಗಿದೆ. ಈ ಪ್ರಜ್ಞೆಗೆ ಉನ್ನತ ಆದರ್ಶವನ್ನು ತೋರಿಸುವುದು ಶಿಕ್ಷಣ. ೧೪ ಎಂದು ಹೇಳುವ ಮೂಲಕ ಸಂಸ್ಕೃತಿಯು ರೂಪಿಸಿಕೊಳ್ಳುವ ಪ್ರಕ್ರಿಯೆ ಎಂದು ಸಮರ್ಥಿಸುತ್ತಾರೆ. ಇದು ಡಿವಿಜಿಯವರ 'ಆತ್ಮಶಿಕ್ಷಣ' ಎಂಬ ಮಾತನ್ನೇ ಹೋಲುತ್ತದೆ. ಬೇಂದ್ರೆಯವರ ವಿಚಾರಧಾರೆಯು ಅವರ ಸೃಜನಶೀಲ ಸಾಹಿತ್ಯದಲ್ಲಿ ಅಂತರ್ಗತವಾಗಿದೆ. ನಾಕುತಂತಿ, ಗರಿ, ಸಖೀಗೀತ ಮುಂತಾದ ಕಾವ್ಯ ಕೃತಿಗಳು ಅವರ ಆಧ್ಯಾತ್ಮಿಕ ಸಂಸ್ಕೃತಿ ಚಿಂತನೆಯ ಪ್ರತಿರೂಪಗಳು ಎನ್ನಬಹುದು. ಇವರ ಕಾವ್ಯ ವ್ಯಕ್ತವಾಗುವಿಕೆಯ ಇನ್ನೊಂದು ವಿಶೇಷವೆಂದರೆ ಜನಪದ ಸಂಸ್ಕೃತಿಯು ಒಡಲೊಳಗಿಂದ ಮೂಡುವಂಥದು. ಅವರ ಒಟ್ಟು ಸಾಹಿತ್ಯ ಕ್ರಿಯೆಯು ಅವರನ್ನು ಜನಪದ ಸಂಸ್ಕೃತಿಯ ವಕ್ತಾರರನ್ನಾಗಿಸಿದೆ. ಬೇಂದ್ರೆಯವರನ್ನು ದೇವುಡು ಅವರ ಸಮಕಾಲೀನರನ್ನಾಗಿ ಗುರುತಿಸಬೇಕಾದ್ದು ಈ ನೆಲೆಯಲ್ಲಿಯೇ.

ಇಂದು ಸಂಸ್ಕೃತಿಯ ಅಧ್ಯಯನದ ಆಯಾಮಗಳು ವಿಸ್ತರಿಸಿವೆ. ಸಮುದಾಯಿಕ, ಜನಾಂಗಿಕ ಅಧ್ಯಯನಗಳ ಹಿನ್ನೆಲೆಯಲ್ಲಿ ಅದರ ಅನ್ವೇಷಣೆಯ ಸಾಧ್ಯತೆಗಳು ಹೆಚ್ಚಾಗುತ್ತವೆ. ಈ ಪರಿಕಲ್ಪನೆಯ ಆರಂಭದಲ್ಲಿ 'ಸಂಸ್ಕೃತಿ' ಏಕಮುಖ ವ್ಯಾಪ್ತಿಯ ಹಿನ್ನೆಲೆಯಲ್ಲಿ ವಿವರಿಸಲಾಗಿದ್ದರೆ, ಈಚೆಗೆ 'ಮಾನವಶಾಸ್ತ್ರ', 'ಜಾನಪದ', 'ಪಳೆಯುಳಿಕೆ ಶಾಸ್ತ್ರ' ಮುಂತಾದ ಜ್ಞಾನಶಾಖೆಗಳ ಆಧಾರದಿಂದ 'ಸಂಸ್ಕೃತಿಗಳು' ಎಂಬ ಬಹುಮುಖೀ ನೆಲೆಯಲ್ಲಿ ಅನ್ವೇಷಿಸಲಾಗುತ್ತಿದೆ.

ದೇವುಡು ಮತ್ತು ಅವರ ಸಮಕಾಲೀನ ಚಿಂತಕರು 'ಏಕಮುಖೀ ಸಂಸ್ಕೃತಿ 'ಪರಿಕಲ್ಪನೆ'ಯ ಸಮರ್ಥಕರಾಗಿದ್ದರು. (ಶಂಬಾ ಜೋಶಿಯವರೊಬ್ಬರು ಈ ಮಾತಿಗೆ ಹೊರತಾಗಿದ್ದರು) ಸಂಸ್ಕೃತಿಯನ್ನು ಏಕಮುಖವಾಗಿ ನೋಡಿದ್ದು ಅವರ ಜ್ಞಾನದ ಮಿತಿಯಿಂದೇನೂ ಅಲ್ಲ. ಆಗಿನ್ನೂ ಕನ್ನಡದಲ್ಲಿ 'ಜಾನಪದ' ಮತ್ತು 'ಸಂಸ್ಕೃತಿ' ಪದಗಳು ಸ್ಪಷ್ಟರೂಪವನ್ನು ಪಡೆದಿರಲಿಲ್ಲ. 'ಧರ್ಮ ಮತ್ತು ಸಂಸ್ಕೃತಿಪದಗಳ ನಡುವೆ ಗೊಂದಲಮಯ ಅರ್ಥಗಳಿದ್ದವು. 'ಸಂಸ್ಕೃತಿ 'ಪದವು ಆಗ ಧಾರ್ಮಿಕ ಹಿನ್ನೆಲೆಯಲ್ಲಿಯೇ ತನ್ನ ಸ್ವರೂಪವನ್ನು ಕಂಡುಕೊಳ್ಳುತ್ತಿತ್ತು. ವೈದಿಕ ಸಂಸ್ಕೃತಿ ಶೈವ ಸಂಸ್ಕೃತಿ, ಜೈನ ಸಂಸ್ಕೃತಿ, ಬೌದ್ಧ ಸಂಸ್ಕೃತಿ ಹೀಗೆ ಧರ್ಮಗಳೇ ಸಂಸ್ಕೃತಿಯ ವಿಶ್ಲೇಷಣೆಗೆ ಆಧಾರವಾಗುತ್ತಿದ್ದವು. ಇಂತಹ ಸಂದಿಗ್ಧಕಾಲದಲ್ಲಿ ಕನ್ನಡ ಸಂಸ್ಕೃತಿ ಚಿಂತಕರು ತಮ್ಮ ವಿಚಾರಗಳ ಮೂಲಕ ಈ ಪರಿಕಲ್ಪನೆಯನ್ನು ಅರ್ಥೈಸಿದರು.

ಅಡಿಟಿಪ್ಪಣಿಗಳು:
----

೧. (ಅ): ಮಲ್ಲೇಪುರ ಜಿ.ವೆಂಕಟೇಶ: ದೇವರು ಸಂಸ್ಕೃತಿ ಚಿಂತನೆ ಒಂದು ನೋಟ: ದೇವರು ದರ್ಶನ: ಪುಟ-೨೯೭

೨. ಮೂರ್ತಿ: ಕರ್ನಾಟಕ ಜನತೆಯ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ: ಪುಟ -೧

೩. ಮಲ್ಲೇಪುರಂ ಜಿ.ವೆಂಕಟೇಶ: ಸಂಸ್ಕೃತಿ ಮತ್ತು ಕಲೆ: ಪುಟ-೧೮.

೪. ಜೆ.ಶ್ರೀನಿವಾಸಮೂರ್ತಿ: ಸಂಸ್ಕೃತಿ ಮತ್ತು ಕಲೆ (ಬೆನ್ನುಡಿ).

೫. ಮಲ್ಲೇಪುರಂ ಜಿ.ವೆಂಕಟೇಶ: ಸಂಸ್ಕೃತಿ ಮತ್ತು ಕಲೆ.

೬. ಬಸವರಾಜ ಕಲ್ಗುಡಿ: ಪಿರಿಗನ್ನಡ-೧ ಪುಟ-೧೮

೭. ಗೋವಿಂದರಾಜ್ ಎ.ಆರ್: ಕನ್ನಡ-ಕರ್ನಾಟಕತ್ವವನ್ನು ಕುರಿತ ಆಲೂರರ ಚಿಂತನೆಗಳ ವಿಶ್ಲೇಷಣೆ: ಪುಟ-೧೩.

೮. ಅದೇ " " " : ಪುಟ-೧೪.

೯. ನಾಗರಾಜ ಡಿ.ಆರ್: ಪಿರಿಗನ್ನಡ: ಪುಟ-೧೯೫.

೧೦. ಡಿ.ವಿ.ಜಿ. ಸಂಸ್ಕೃತಿ : ಪುಟ-೧೧.

೧೧. ಅದೇ " " : ಪುಟ-೫.

೧೨. ಅದೇ " " : ಪುಟ-೭.

೧೩. ಬೇಂದ್ರೆ ದ.ರಾ: ಸಾಹಿತ್ಯದ ವಿರಾಟ್ ಸ್ವರೂಪ:

ಅಧ್ಯಾಯ ೫

ಕರ್ನಾಟಕ ಸಂಸ್ಕೃತಿ ಮತ್ತು ದೇವುಡು

ಫ್ಲೀಟ್ ಜನಪದ ಲಾವಣಿಯ ಸಂಗ್ರಹದ ನಂತರ ಯಾರೂ ಜನಪದ ಸಾಹಿತ್ಯ ಸಂಸ್ಕೃತಿಯೆಡೆಗೆ ಕಣ್ಣು ಹಾಯಿಸಿದಂತೆ ಕಾಣುವುದಿಲ್ಲ. ೧೯೨೦ರ ನಂತರ ಕನ್ನಡ ವಿದ್ವಾಂಸರಲ್ಲಿ ಕೆಲವರು ತಮಗಿದ್ದ ಆಂಗ್ಲ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಪರಿಚಯದ ಮುಖಾಂತರ ನಮ್ಮ ಜನಪದ ಸಾಹಿತ್ಯದ ಹೊಸ ಮುಖಗಳನ್ನು ಗುರುತಿಸಿ ಲೇಖನಗಳನ್ನು ಬರೆದರು. ಇದು ಜನಪದ ಸಾಹಿತ್ಯ ಹಾಗೂ ಸಂಸ್ಕೃತಿಗಳ ಪುನರುಜ್ಜೀವನ ಕಾರ್ಯದಲ್ಲಿ ತೊಡಗಿದ್ದರ ಶುಭಸೂಚನೆ. ೧ ಈ ಕಾಲದಲ್ಲಿಯೇ ಕಿಟೆಲ್ ಜನಪದ ಗಾದೆಗಳ ಸಂಗ್ರಹಕ್ಕೆ ಕೈಹಾಕಿದ್ದು. ಮುಂದೆ ೧೯೩೦ರಲ್ಲಿ ಮಾಸ್ತಿಯವರ 'ಕರ್ನಾಟಕ ಜನತೆಯ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ' ಎಂಬ ಕೃತಿ ಜನಪದರ ಜೀವನ, ಸಂಸ್ಕೃತಿಯನ್ನು ಗೀತೆ, ಗಾದೆ, ಕಥೆಗಳ ಮೂಲಕ ವಿಶ್ಲೇಷಿಸಲು ಪ್ರಯತ್ನಿಸಿದರು. ಅಲ್ಲದೇ ಹಾಮಾನ ಅವರು ಜಾನಪದ ಸ್ವರೂಪ ಕೃತಿಯ ಮೂಲಕ ಕನ್ನಡದಲ್ಲಿ ಜಾನಪದವನ್ನು ಅರ್ಥೈಸಿದರು. ಮುಂದೆ ೧೯೩೩ರಲ್ಲಿ ದೇವುಡು ನರಸಿಂಹಶಾಸ್ತ್ರಿಗಳು 'ಕರ್ನಾಟಕ ಸಂಸ್ಕೃತಿ' ಕುರಿತು ಉಪನ್ಯಾಸಗಳ ಮಾಲಿಕೆ ಈ ದಿಕ್ಕಿನಲ್ಲಿ ಇನ್ನೊಂದು ಮಹತ್ವದ ಹೆಜ್ಜೆ. ಮಾಸ್ತಿ ಮತ್ತು ದೇವುಡು ಅವರು ಜಾನಪದ ಪ್ರಕಾರಗಳಾದ ಗೀತೆ, ಕಥೆ, ಗಾದೆಗಳ ಮೂಲಕ ಸಂಸ್ಕೃತಿ ಶೋಧನೆಗೆ ಹೊರಟರು.

ಯಾವುದೇ ಸಮಾಜದ ಯಾವುದೇ ವ್ಯಕ್ತಿ ತನ್ನ ಬಹುಕಾಲದ ಜೀವನವನ್ನು ಜಾನಪದದಲ್ಲಿ ಕಳೆದಿರುತ್ತಾನೆ. ತನ್ನ ಅಭಿವ್ಯಕ್ತಿಗಳನ್ನು ಅದರಿಂದ ಪಡೆದು ಅದರ ಹಲವಾರು ಸಾಮಗ್ರಿಗಳಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುತ್ತಾನೆ.

ಮನುಷ್ಯ ಜಗತ್ತಿನ ಸಾಮಾನ್ಯ ಸದಸ್ಯನಾಗಿರುವಂತೆಯೇ ವಿಶೇಷ ಗುಂಪೊಂದರ ಸದಸ್ಯನೂ ಆಗಿರುತ್ತಾನೆ. ಈ ವಿಶೇಷ ಗುಂಪು ಒಂದು 'ಸಾಂಸ್ಕೃತಿಕ ಸಮೂಹ'ವಾಗಿದ್ದು ಒಂದಲ್ಲ ಒಂದು ವಿಧದಲ್ಲಿ ನಾವು ಇಂಥದೊಂದಕ್ಕೆ ಸೇರಿರುತ್ತೇವೆ. ಪ್ರತಿಯೊಂದು ಸಾಂಸ್ಕೃತಿಕ ಸಮೂಹವು ತನ್ನದೇ ಆದ ಜಾನಪದವನ್ನು ಹೊಂದಿದ್ದು, ಅದರ ಜ್ಞಾನವೆಲ್ಲ ಕೇಳಿ ನೆನಪಿರಿಸಿ, ನೋಡಿ ಅನುಸರಿಸುವುದರ ಮೂಲಕ ಸಾಗುತ್ತಿರುತ್ತದೆ. ೨ ಆದರೆ ಆಧುನಿಕ ನಾಗರಿಕತೆಯೊಡನೆ ನಡೆದಂತೆ ಬದುಕು ಸಂಕೀರ್ಣತೆಯೆಡೆಗೆ ಸಾಗುತ್ತದೆ. ಕೇವಲ ಕೇಳಿ, ಅನುಕರಿಸುವುದರ ಮೂಲಕ ತೃಪ್ತ ಜೀವನ ನಡೆಸುತ್ತಿದ್ದ ಮನುಷ್ಯನಿಗೆ ಆಧುನಿಕ ಅನುಕೂಲತೆಗಳು ಯಾವುವೂ ಅವನಿಗೆ ಪೂರಕವಾಗಿ ಕಾಣುತ್ತಿಲ್ಲ. ಕಾರಣ ಮತ್ತೆ ಅವನು ಈಗೀಗ ತನ್ನ ಜಾನಪದ ಮೂಲ ಬದುಕಿನೆಡೆಗೆ ತುಡಿಯುತ್ತಿದ್ದಾನೆ. ಈ ತುಡಿತಕ್ಕೆ ತಮ್ಮ ಅಭಿವ್ಯಕ್ತಿಯ ಧ್ವನಿ ಸೇರಿಸಿದವರು ಬೇಂದ್ರೆ, ಮಾಸ್ತಿಯಂಥಹ ಕನ್ನಡದ ನವೋದಯದ ಸಾಹಿತಿಗಳು.

ಈ ಸಂದರ್ಭದಲ್ಲಿ ಜಾನಪದ ಪ್ರಕಾರಗಳ ಮೂಲಕ ಕರ್ನಾಟಕ ಸಂಸ್ಕೃತಿ ಶೋಧನೆಗೆ ಹೊರಟ ದೇವೃತು ಅವರು ಅಭಿಪ್ರಾಯಿಸಿದರು. ಮನುಷ್ಯ ಅಧ್ಯಯನ ಮಾಡುವುದು ಮಾನವ ಮತ್ತು ಅವನ ಕೃತಿಗಳನ್ನು ಕುರಿತೇ. ಅದರಲ್ಲಿ ಮನುಷ್ಯ ತನ್ನನ್ನು ಕಾಣುವನು ಮತ್ತು ಅರ್ಥಮಾಡಿಕೊಳ್ಳುವನು. ವರ್ತಮಾನ ಮತ್ತು ಭೂತಕಾಲಗಳೆರಡೂ ಅವನ ಅಧ್ಯಯನದ ವ್ಯಾಪ್ತಿಗೆ ಬರುವವು. ಗತಕಾಲದ ಸಮಾಚಾರ ದೃಷ್ಟಿಯಿಲ್ಲದೆ ವರ್ತಮಾನ ಅರ್ಥಪೂರ್ಣ ಅರ್ಥವಾಗಲಾರದು. ಜಾನಪದದ ವಿವಿಧ ವಿಷಯಗಳನ್ನು (ಗೀತೆ, ನಂಬಿಕೆ, ಕಥೆ, ಆಚರಣೆ) ಅಭ್ಯಾಸ ಮಾಡಿದಾಗ ನಮಗೆ ಇಂಥದೇ ಅನುಭವವಾಗುವುದು. ಆದ್ದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಜಾನಪದದ ಪಾತ್ರ ಅತ್ಯಂತ ಮಹತ್ವದ್ದಾಗಿ ಪರಿಗಣಿತವಾಗುತ್ತದೆ. ೩ ಇಂತಹ ಪ್ರಜ್ಞೆಯಿಂದ ದೇವೃತು ಅವರ ಸಂಸ್ಕೃತಿ ಚಿಂತನೆ ಹೊರಡುತ್ತದೆ.

ದೇವೃತು ಅವರು ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸಂಸ್ಕೃತಿಯ ವಿಶಿಷ್ಟತೆಗಳನ್ನು ಗುರುತಿಸುವ ಪ್ರಯತ್ನ ಮಾಡುತ್ತಾರೆ. 'ಸಂಸ್ಕೃತಿಯು ಒಂದು ಜನಾಂಗದ ಸಮಸ್ತ ಜೀವನ ವಿಧಾನ ಎನ್ನುವಲ್ಲಿ ಯಾವುದೇ ದೇಶ ಇಂಥ ಹಲವಾರು ಜನಾಂಗಗಳ ಸಂಯುಕ್ತ ರೂಪವೇ ಆಗಿರುತ್ತದೆ. ಒಂದು ದೇಶದ ಸಂಸ್ಕೃತಿಯನ್ನು ರೂಪಿಸುವಲ್ಲಿ ಒಂದು ಜನಾಂಗದ ಸಂಸ್ಕೃತಿಯೂ ಕಾರಣವಾಗಿರುವಂತೆ ಇನ್ನೊಂದು ದಿಟ್ಟಿನಿಂದ ನೋಡಿದರೆ, ಒಂದು

ಜನಾಂಗದ ಸಂಸ್ಕೃತಿಯನ್ನು ರೂಪಿಸುವಲ್ಲಿ ಒಂದು ದೇಶದ ಸಂಸ್ಕೃತಿಯೂ ಕಾರಣವಾಗಿರುತ್ತದೆ ಎಂಬುದನ್ನು ನಾವು ಒಪ್ಪಬೇಕಾಗುತ್ತದೆ. ಈ ಮಾತು ಭಾರತೀಯ ಮತ್ತು ಕರ್ನಾಟಕ ಸಂಸ್ಕೃತಿಗಳಿಗೂ ಸರಿಹೊಂದುತ್ತದೆ. ಇವುಗಳಲ್ಲಿ ಒಂದನ್ನು ರೂಪಿಸುವಲ್ಲಿ ಇನ್ನೊಂದರ ಪಾತ್ರ ಇದ್ದೇ ಇದೆ. ೪ ಈ ದಾರಿಯಲ್ಲಿಯೇ ಆಧುನಿಕ ಸಮಾಜಶಾಸ್ತ್ರಜ್ಞರ ಮಾನವಶಾಸ್ತ್ರಜ್ಞರ ಅಧ್ಯಯನಗಳು ನಡೆಯುತ್ತಿವೆ.

ಸಂಸ್ಕೃತಿಯ ಬಹುಮುಖತೆಯನ್ನು ಒಪ್ಪಿಯೂ ಅವುಗಳ ಆಳದಲ್ಲಿರುವ ಏಕತೆಯನ್ನು ದೇವುಡು ಗುರುತಿಸುತ್ತಾರೆ. ಮದುವೆ ಸಂಪ್ರದಾಯಗಳು ೫, ವ್ಯವಸಾಯದ ಸಂದರ್ಭದ ಆಚರಣೆಗಳು ೬, ವೈದ್ಯಕೀಯ ನಂಬಿಕೆಗಳು, ೭ ಆಟ ಪಂಥಗಳು ೮, ಮುಂತಾದ ಜಾನಪದ ಬದುಕಿನ ಕ್ರಿಯಾತ್ಮಕ ಆಧಾರದೊಂದಿಗೆ ಸಮನ್ವಯ ಸಂಸ್ಕೃತಿಯ ಪ್ರತಿಪಾದನೆಗೆ ತೊಡಗುತ್ತಾರೆ. ದೇವುಡು ಅಭಿಪ್ರಾಯಪಡುವಂತೆ; ಭಾರತದ ಸಂಸ್ಕೃತಿಯು ಬಾಯಿಮಾತು ಮತ್ತು ಅನುಷ್ಠಾನಗಳಿಗೆ ಅಂತರ ಬಹಳ ಎನ್ನುತ್ತದೆ. ಬಾಯಿ ಮಾತಿನಲ್ಲಿ ಎಲ್ಲರೂ ಒಂದೇ ಎಂದು ತತ್ವವನ್ನು ಸಾರಿ, ಹೆಚ್ಚು ಹೆಚ್ಚಿಗೂ ಅದಕ್ಕೆ ಮನ್ನಣೆ ಕೊಡುತ್ತಿರುವ ಈಗಿನ ಸಂಸ್ಕೃತಿ, ಎಲ್ಲರೂ ಸೇರಿರುವ ಸಮಾಜ ಒಂದು, ಕುಟುಂಬದಲ್ಲಿರುವ ಜನರು ಬೇರೆ ಬೇರೆಯಾದರೂ ಕುಟುಂಬವೆಲ್ಲ ಒಂದೇ ಎಂಬಂತೆ, ಜಾತಿ ಜಾತಿಯೂ ಅನುಷ್ಠಾನದಿಂದ ಬೇರೆ ಬೇರೆಯಾದರೂ, ವಿಚಾರದಲ್ಲಿ ಭಿನ್ನವಿದ್ದರೂ, ಉದ್ದೇಶದಲ್ಲಿ ಒಂದೇ ಎಂದಿತು. ಶ್ರೇಯಸ್ಸು ಪ್ರೇಯಸ್ಸು ಎಂದು ಜೀವನ ವ್ಯಾಪಾರವನ್ನು ಎರಡು ಭಾಗಮಾಡಿ, ಪ್ರೇಯಸ್ಸಿನಲ್ಲಿ ಭೇದವಿಟ್ಟಿತು. ಶ್ರೇಯಸ್ಸಿನಲ್ಲಿ ಭೇದ ಉಳಿಯುವುದಿಲ್ಲ ಎಂಬ ಘನ ಸಿದ್ಧಾಂತವನ್ನು ಪ್ರತಿಪಾದಿಸಿತು. ವೇದವನ್ನು ಕೇಳಿದ ಶೂದ್ರನ ಕಿವಿಗೆ ಸೀಸ ಕಾಯಿಸಿ ಹೊಯ್ಯಿ ಎಂದಿದ್ದವೇ ಎನ್ನುವವರು, ವೇದಗಳಲ್ಲಿಯೇ ಬರುವ ಶೂದ್ರರ್ಷಿಗಳ ಕಥೆಗಳನ್ನೇಕೆ ಮರೆತಿದ್ದಾರೆ? ೯ ಎಂದು ದೇವುಡು ಪ್ರಶ್ನಿಸುತ್ತಾರೆ.

ವೈದಿಕ ಸಂಸ್ಕೃತಿಯ ಪ್ರತಿಬಿಂಬವೇ ವೈದಿಕವಲ್ಲದ ಸಂಸ್ಕೃತಿಯಲ್ಲಿದೆ ಎಂದು ದೇವುಡು ಅಭಿಪ್ರಾಯಪಡುತ್ತಾರೆ. ಆದರೆ ನಮ್ಮ ನಡುವೆ ಇರುವ ವೈದಿಕ ಸಂಸ್ಕೃತಿ; ಇದು ವೈದಿಕ ಸಂಸ್ಕೃತಿಯ ಮೂಲ ಇದಲ್ಲ ೧೦ ಇದು ಪ್ರತಿರೂಪವಷ್ಟೆ ಎನ್ನುತ್ತಾರೆ. ಇದು 'ವೈದಿಕ ಧರ್ಮ'ದ ತತ್ವಗಳನ್ನು ತಿರುಚಿದ 'ವೈದಿಕರ' ಬಗೆಗಿನ ಕಟುವಾದ

ಆರೋಪವೂ ಎನ್ನಬಹುದು. ವೈದಿಕ ಧರ್ಮವು ಭಾರತದ ಅನೇಕ ಪ್ರಾಚೀನ ಧರ್ಮಗಳಲ್ಲಿ ಒಂದು. ಆದರೆ ವೈದಿಕ ಮೂಲಭೂತವಾದಿಗಳು ಅದರ ಪರಂಪರೆಯನ್ನು ತಪ್ಪಾಗಿ ಅರ್ಥೈಸುವ ಮೂಲಕ ಹಿಂದೂಗಳ ಮೂಲಧರ್ಮ ಇದೇ ಎಂದು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ''ಪರಂಪರೆಯ ಸಂರಕ್ಷಣೆಯೆಂದರೆ, ಪರಂಪರೆಗೆ ಅಂಟಿಕೊಳ್ಳಬೇಕೆಂದು ಅರ್ಥವಲ್ಲ '' ಎಂಬ ವಾಸ್ತವಿಕತೆಯನ್ನು ವೈದಿಕರು ಮನಗಾಣಬೇಕಿದೆ.

ದೇವುಡು ಅವರ ಚಿಂತನೆಯು ಭಾರತೀಯ ಸಂಸ್ಕೃತಿಯನ್ನು ಅರ್ಥೈಸುವ ಪರಿಯಿಂದ ಪ್ರಾರಂಭವಾಗಿ ಅದೇ ನೆಲೆಯಿಂದ ಒಟ್ಟು ಸಂಸ್ಕೃತಿಯನ್ನು ಮತ್ತು ಕರ್ನಾಟಕದ ಸಂಸ್ಕೃತಿಯನ್ನು ಕಂಡುಕೊಳ್ಳುವಲ್ಲಿಗೆ ಸಾಗುತ್ತದೆ. ಅವರು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯತೆಯನ್ನು ಎತ್ತಿ ತೋರಿಸುತ್ತಾ ಅಶಾಂತಿಯಿಂದ ತುಂಬಿ ತುಳುಕುತ್ತಿರುವ ಈ ವಿಶ್ವಕ್ಕೆ ಭಾರತ ದೇಶದಿಂದ ಮಾತ್ರ ಮಾರ್ಗದರ್ಶನ ಅಲ್ಲದಾಗಿ, ಇದೇ ವಿಶ್ವಕ್ಕೆ ಭಾರತದಿಂದ ಶಾಂತಿ, ಸಹನೆ, ಸ್ವಾನುಭೂತಿ, ಸಹಕಾರ ಕಲಿಕೆಯು ಸಾಧ್ಯ ಎಂಬುದನ್ನು ಅವರ ವಿಚಾರ ಚಿಂತನೆ ತಿಳಿಸುತ್ತದೆ.

ವಿಶ್ವ ಪರಂಪರೆಗೆ ತೆರೆದುಕೊಂಡ ಆಧುನಿಕ ಬದುಕಿನ ಸಂಕೀರ್ಣತೆಯಲ್ಲಿ ಸಂಸ್ಕೃತಿ ಶೋಧನೆಯ ಆಯಾಮಗಳು ವಿಸ್ತರಿಸುತ್ತವೆ. ಇಂತಹ ಸಂಸ್ಕೃತಿಯ ಅಧ್ಯಯನದ ಸಂದರ್ಭದಲ್ಲಿ ಸಂಸ್ಕೃತಿ ಎಂಬುದು ಒಂದೇ ಹಲವೇ ಎಂದು ನಾವು ಮತ್ತೆ ಮತ್ತೆ ಕೇಳಿಕೊಳ್ಳಬೇಕಾಗಿದೆ. ಈ ಗೊಂದಲದ ಕಾರಣದಿಂದಾಗಿ ಸಂಸ್ಕೃತಿ ಪರಿಕಲ್ಪನೆ ಕುರಿತು ಚರ್ಚೆಗೆ ಅವಕಾಶವಾಗಿದೆ. ಇನ್ನೊಂದು ದೇಶದ ಸಂಸ್ಕೃತಿ ಇಲ್ಲಿಗೆ ಪ್ರವೇಶಿಸುವ ಸಂದರ್ಭದಲ್ಲಿ ಸ್ಥಳೀಯವಾದೊಂದು ಸಂಸ್ಕೃತಿಯ ಸ್ವರೂಪವನ್ನು ತಿಳಿಯಬೇಕಿದೆ. ಭಾರತೀಯ ಸಂಸ್ಕೃತಿಯ ಸರಳ ರಚನೆಯನ್ನು ದೇವುಡು ಮನವರಿಕೆ ಮಾಡಿಕೊಂಡಿದ್ದರು. ಅವರು ಭಾರತೀಯ ಸಂಸ್ಕೃತಿಯಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಪರಮಪುರುಷಾರ್ಥ-ವನ್ನು ಎತ್ತಿಹೇಳುತ್ತಾರೆ. ಜೀವನ ಮೋಕ್ಷವನ್ನು ಕಂಡುಕೊಳ್ಳಬೇಕಾದರೆ ಈ ನಾಲ್ಕು ಪುರುಷಾರ್ಥಗಳು ಅವಶ್ಯವೆಂದು ಅವರ ಚಿಂತನೆಗಳ ಒಟ್ಟು ಸಾರದಿಂದ ತಿಳಿಬಹುದಾಗಿದೆ.

ಕರ್ನಾಟಕ ಸಂಸ್ಕೃತಿಯೆಂಬುದು ಭಾರತೀಯ ಸಂಸ್ಕೃತಿಯೆಂದು ನಾವು ಒಟ್ಟಾರೆ ಕರೆಯುವ ಸಂಸ್ಕೃತಿ ಪ್ರವಾಹಕ್ಕಿಂತ ಯಾವ ರೀತಿಯಲ್ಲಿ ಭಿನ್ನ ಎಂದು ತೋರಿಸುವುದು ತುಂಬ ಕಷ್ಟದ ಕೆಲಸ. ಆದರೂ ದೇವುಡು ಅವರು 'ಕನ್ನಡ

ಸಂಸ್ಕೃತಿಯು ಅಗ್ನಿಪೂಜೆಯನ್ನು ತೊರೆದಿರುವ ವೈದಿಕ ಸಂಸ್ಕೃತಿ ' ಎಂಬ ನಿಲುವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಈವಾದ ಸಮರ್ಥನೆಗೆ ಕರ್ನಾಟಕ ಜನಪದರ ಮೂಲಕ ವ್ಯಕ್ತವಾಗುವ ಜನಾಂಗಿಕ ಚೇತನ, ಸಂಗೀತ, ವೇಷ ಭೂಷಣಗಳು ಆಹಾರಪದ್ಧತಿ, ಕರ್ಮಾಚರಣೆಗಳು, ಹಬ್ಬ ಹರಿದಿನಗಳು, ಕೃಷಿ ಪದ್ಧತಿಗಳು, ಲಾವಣಿಗಳಲ್ಲಿ ಜನಪದ ಗೀತಗಳಲ್ಲಿ, ಕಥೆಗಳಲ್ಲಿ ಬರುವ ವಿಶಿಷ್ಟ ಲೋಕಸಂಗತಿಗಳು ಇವುಗಳನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ಮತ್ತು ಅವುಗಳ ಆಳದಲ್ಲಿರುವ ಮನಸ್ಸಿನ ನೆಲೆಯನ್ನು ವ್ಯಾಖ್ಯಾನಿಸಿದ್ದಾರೆ. ೧೨ ಶಾಸನ, ಸ್ಥಳ ಪುರಾಣಗಳನ್ನು ಇಲ್ಲಿ ಬಳಸಿ-ಕೊಂಡಿದ್ದಾರೆ. ಜನಪದ ಸಂಚಿಕೆಗಳನ್ನೂ ವಿಪುಲವಾದ ಸ್ವಾರಸ್ಯಕರ ಕಥಾ ಪ್ರಸಂಗಗಳಿಂದ ವ್ಯಾಖ್ಯಾನಿಸಿದ್ದಾರೆ.

ನಮ್ಮ ಜನರಲ್ಲಿ ವೇದಾಂತ ಹಾಸುಹೊಕ್ಕಾಗಿ ಬೆರೆತು ಹೋಗಿದೆ. ಲಾವಣಿಗಳು, ಪದ್ಯಗಳು, ಹಾಡುಗಳು, ಗಾದೆಗಳು, ಸ್ಥಳ ಪುರಾಣಗಳು, ರಾಮಾಯಣ, ಭಾರತ, ಭಾಗವತಗಳು ಎಲ್ಲವೂ ನಮ್ಮ ಜನರ ಮನಸ್ಸನ್ನು ಹದಗೊಳಿಸಿವೆ. ಅಲ್ಲಿ ಏಕ್ನಬಿತ್ತಿ ಸಿದ್ಧವಾಗಿದೆ. ಬುದ್ಧಿವಂತರಿಂದ ವೇದಾಂತಶಾಸ್ತ್ರವನ್ನು, ಅದರ ಮೇಲಿರುವ ಕರ್ಕಶ ಶಾಸ್ತ್ರದ ಗಂಟನ್ನು ಬಿಟ್ಟು, ಜನ ಸಾಮಾನ್ಯಕ್ಕೆ ಸುಲಭವಾಗಿ ದೊರೆಯುವಂತೆ ಮಾಡಬೇಕು. ಆಗ ಜನರ ಮನಸ್ಸು ಕಬ್ಬಿಣವು ಉಕ್ಕಾದಂತೆ ಆಗುತ್ತದೆ. ವೇದಾಂತ ಎಂದು ತಿಳಿಯದೆ ವೇದಾಂತದ ಮಾತುಗಳನ್ನು ಆಡಿ ನಂಬಿರುವ ಜನ, ತಾವು ಆಡುತ್ತಿರುವುದು ವೇದಾಂತ ಎಂದು ತಿಳಿದು ಆಡುವಂತೆ ಆಗಬೇಕು ೧೩ ಎನ್ನುವ ಮೂಲಕ ದೇವುಡು ವೇದ ಕಾಲದ ಬದುಕನ್ನು ಇಂದಿನ ಬದುಕಿನೊಂದಿಗೆ ಹೋಲಿಸುವ ಪ್ರಯತ್ನ ಮಾಡುತ್ತಾರೆ.

ಇಪ್ಪತ್ತೊಂದನೇ ಶತಮಾನದಲ್ಲಿ ನಿಂತು ಕನ್ನಡಿಗರದೇ ಸಂಸ್ಕೃತಿ, ಅದರಲ್ಲೂ ಒಂದೊಂದು ಸಮುದಾಯಗಳೂ ತಮ್ಮ ಸಂಸ್ಕೃತಿಯ ಅಸ್ತಿತ್ವವನ್ನು ಪ್ರಕಟಪಡಿಸುತ್ತಿರುವ ಇಂತಹ ಸಂದರ್ಭದಲ್ಲಿ ದೇವುಡು ಅವರ ಕರ್ನಾಟಕ ಸಂಸ್ಕೃತಿ ಕುರಿತಾದ ವಿಚಾರಗಳು ಅವಾಸ್ತವಿಕವಾಗಿ ಕಾಣಬಹುದು. ಅವರವು ವೈದಿಕ ಧರ್ಮದ ವಿಚಾರಗಳನ್ನು ಸಾರ್ವತ್ರೀಕರಿಸುವ ಯೋಜನೆಗಳಾಗಿರಬಹುದು, ವೇದಗಳ ಕಾಲದ ಬದುಕನ್ನು ಆಧುನಿಕ ಬದುಕಿನ ಜೊತೆ ಸಮೀಕರಿಸುವ ವಿಚಾರಗಳು ಬಾಲಿಶವಾಗಿ ಕಾಣಬಹುದು. ಆದರೆ ಈ ಶತಮಾನದ ಆರಂಭದ ಸಂದರ್ಭದ ದೃಷ್ಟಿಯಿಂದ ಅವು ಯೋಗ್ಯವಾಗಿದ್ದವು.

ಶಂಬಾ ಜೋಶಿ, ಬೆಟಗೇರಿ ಕೃಷ್ಣಶರ್ಮ, ಮರಿಯಪ್ಪ ಭಟ್ಟರು ಕರ್ನಾಟಕ ಸಂಸ್ಕೃತಿ ಕುರಿತು ವಿಚಾರ ವಿಮರ್ಶೆ ನಡೆಸಿದ್ದಾರೆ. ಇವರು ಯಾರೂ ವೇದಕಾಲಕ್ಕೂ-ಕರ್ನಾಟಕ ಸಂಸ್ಕೃತಿಯ ಬದುಕಿಗೂ ಸಂಬಂಧ ಗುರುತಿಸಲಿಲ್ಲ. ಆ ಕೆಲಸವನ್ನು ದೇವುಡು ತಮ್ಮ ಕರ್ನಾಟಕ ಸಂಸ್ಕೃತಿ ಕೃತಿಯಲ್ಲಿ ಮಾಡಿದರು.

ಕರ್ನಾಟಕ ಸಂಸ್ಕೃತಿ ದ್ರಾವಿಡ ಸಂಸ್ಕೃತಿಯ ಭಾಗವಾಗಿದ್ದು ಆರ್ಯ ಸಂಸ್ಕೃತಿಯಿಂದ ಬೇರೆಯಾದ ಅನನ್ಯತೆಯನ್ನು ಹೇಗೆ ರೂಪಿಸಿಕೊಂಡಿದೆ ಎಂಬುದು ಮುಖ್ಯವಾಗುತ್ತದೆ. ಅಲ್ಲದೇ ಇತರ ಪ್ರದೇಶಗಳಿಗಿಂತಲೂ ಹೇಗೆ ಭಿನ್ನವಾಗಿದೆ ಎಂಬುದೂ ಗಮನಿಸಬೇಕಾದ ಸಂಗತಿಯಾಗಿದೆ. ಹಾಗೆ ನೋಡಿದಾಗ ಕರ್ನಾಟಕ ಸಂಸ್ಕೃತಿ ಕೆಲವು ಶಬ್ದಗಳಲ್ಲಿ ತೋರಿರುವ ಪ್ರತಿಭಟನೆ ಮತ್ತೆ ಮಾಡಿಕೊಳ್ಳುವ ರಾಜಿ ಇವು ಇತಿಹಾಸದ ಕೆಲವು ಶಬ್ದಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಪ್ರತಿಭಟನೆ ಚಳುವಳಿಯ ಸ್ವರೂಪವನ್ನು ಆಗಬಹುದು. ಇಲ್ಲವೆ ಪ್ರಧಾನ ಸಂಸ್ಕೃತಿಯ ಸ್ವರೂಪವನ್ನು ಸ್ವೀಕರಿಸಿಯೂ ಅಲ್ಲಿ ತನ್ನ ವೈಶಿಷ್ಟ್ಯವನ್ನು ರೂಪಿಸಿಕೊಳ್ಳುವ ರೀತಿಯದೂ ಆಗಬಹುದು. ಕೆಲವು ಕ್ಷೇತ್ರಗಳಲ್ಲಿ ಪ್ರಧಾನ ಸಂಸ್ಕೃತಿಯ ಸ್ವರೂಪವನ್ನು ಸ್ವೀಕರಿಸಿಯೂ ಅಲ್ಲಿ ತನ್ನ ವೈಶಿಷ್ಟ್ಯವನ್ನು ರೂಪಿಸಿಕೊಳ್ಳುವ ಸ್ವರೂಪವನ್ನು [illegible]. ಧರ್ಮ, ಕಲೆ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಇದು ಸ್ಪಷ್ಟವಾಗಿ ಗೋಚರವಾಗುತ್ತದೆ.

ದೇವುಡು ಅವರ ಕರ್ನಾಟಕ ಸಂಸ್ಕೃತಿ ಪರಿಕಲ್ಪನೆಯು ಈ ದ್ವಂದ್ವಗಳಿಂದ ಮುಕ್ತವಾದುದು. ಮಾನವ ಬದುಕಿನ ಕಲ್ಯಾಣವನ್ನೇ ದೃಷ್ಟಿಯಲ್ಲಿಟ್ಟುಕೊಂಡಿದ್ದ ದೇವುಡು ಅವರಂತಹ ನವೋದಯದ ಚಿಂತನಕಾರರು ಆದರ್ಶತೆಗೆ ಒತ್ತು ಕೊಟ್ಟಿದ್ದಾರೆ. ಈ ಕಾರಣದಿಂದಾಗಿ ದೇವುಡು, ಡಿ.ವಿ.ಜಿ. ಮಾಸ್ತಿಯವರಂತಹ ಚಿಂತಕರಿಗೆ ಪ್ರಧಾನ-ಅಧೀನ, ಮೂಲಸಂಸ್ಕೃತಿ- ಉಪಸಂಸ್ಕೃತಿ ಯಂತಹ ಸಂಸ್ಕೃತಿಯ ಆಯಾಮಗಳ ಕಡೆ ಅವರ ದೃಷ್ಟಿ ಹರಿಯಲಿಲ್ಲ.

ಅಡಿಟಿಪ್ಪಣಿಗಳು:

---

೧. ತಪಸ್ವೀಕುಮಾರ ಮು: ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ: ಪುಟ-೩೪.

೨. ರಾಮೇಗೌಡ: ಜನಪದ ಸಂಶೋಧನೆ: ಪುಟ-೧,೨.

೩. ರಾಮೇಗೌಡ " " : ಪುಟ-೨.

೪. ಶಾಂತಿನಾಥ ದಿಬ್ಬದ: ಪಂಪಭಾರತ ಒಂದು ಸಾಂಸ್ಕೃತಿಕ ಅಧ್ಯಯನ: ಪುಟ-೫೩.

೫. ದೇವುಡು: ಕರ್ನಾಟಕ ಸಂಸ್ಕೃತಿ: ಪುಟ-೧೫.

೬. ದೇವುಡು: ಕರ್ನಾಟಕ ಸಂಸ್ಕೃತಿ: ಪುಟ-೧೮೭.

೭. ಅದೇ " " : ಪುಟ-೧೯೨.

೮. ಅದೇ " " : ಪುಟ-೧೮೯.

೯. ದೇವುಡು (ಲೇ): ವೇದಗಳು: ಸಮೀಕ್ಷೆ: ಪುಟ-೨೯೦.

೧೦. ದೇವುಡು: ಕರ್ನಾಟಕ ಸಂಸ್ಕೃತಿ: ಪುಟ-೨೭.

೧೧. Lenin V.I: On Culture and Cultural Revelution:Volume-2.

೧೨. ಅ.ರಾ.ಮಿತ್ರ: ದೇವುಡು ದರ್ಶನ: ಪುಟ-೨೨೮.

೧೩. ದೇವುಡು: ನಮ್ಮ ಪುಸ್ತಕ: ಪುಟ-೩೫.

ಸಮಾರೋಪ

ಮನುಷ್ಯನ ಬದುಕನ್ನು ತನ್ನ ವ್ಯಾಪಕವಾದ ವ್ಯಾಪ್ತಿಯನ್ನಾಗಿಸಿಕೊಂಡ ಸಂಸ್ಕೃತಿಯು ಅವನ ಎಲ್ಲ ಚಟುವಟಿಕೆಗಳಲ್ಲಿ ಅಭಿವ್ಯಕ್ತಗೊಂಡಿದೆ. ಇದು ಅವನ ಕ್ರಿಯಾತ್ಮಕ ಬದುಕನ್ನು ಎಷ್ಟು ಆವರಿಸಿದೆಯೆಂದರೆ ವ್ಯಕ್ತಿಯೊಬ್ಬನ ಬದುಕು ಮತ್ತು ಸಂಸ್ಕೃತಿಯನ್ನು ಬೇರೆ ಬೇರೆ ಮಾಡಿ ನೋಡಲು ಸಾಧ್ಯವೇ ಇಲ್ಲ. ಈ ಬದುಕು ಮತ್ತು ಸಂಸ್ಕೃತಿಗಳ ನಡುವಿನ ಸಂಬಂಧ ಸಂಬಂಧ ಹೀಗೆ ಅನಾವರಣಗೊಳ್ಳುತ್ತಿದ್ದು, ಅದರ ಅರ್ಥವಿವರಣೆ ಸ್ಪಷ್ಟವಾಗುತ್ತದೆ.

ಭಾರತದ ಬೇರೆ ಬೇರೆ ಕಡೆಗಳಲ್ಲಿ ಮೇಲು ಮಧ್ಯಮ ವರ್ಗದವರ ಜೀವನಮೌಲ್ಯದಲ್ಲಿ ಸುಧಾರಣೆಯಾಗಿದೆ. ಇವರೇ ಪುಸ್ತಕಗಳನ್ನು ಬರೆಯುವ ಜನ ಅಲ್ಲದೆ ಸಿದ್ಧಾಂತಗಳನ್ನು, ಪರಿಕಲ್ಪನೆಗಳನ್ನು ಹುಟ್ಟುಹಾಕುವ ಜನ. ಇವರು ಸಿದ್ಧಾಂತಗಳನ್ನು ತಮ್ಮ ವರ್ಗದ ಹಿತಾಸಕ್ತಿಯನ್ನಾಗಿ ಪರಿವರ್ತಿಸಿಕೊಳ್ಳುತ್ತಿದ್ದಾರೆ. ಈ ಸಿದ್ಧಾಂತಗಳನ್ನು ಶೋಧಿಸುವ ಮೂಲಕ ಅದರ ವಾಸ್ತವಿಕತೆಯನ್ನು ಅನಾವರಣಗೊಳಿಸಬೇಕಾಗಿದೆ. ಶೋಧನೆಯನ್ನೇ ಮುಖ್ಯ ಆಶಯವಾಗುಳ್ಳ ಅಧ್ಯಯನಗಳು ಸಂಸ್ಕೃತಿಯಂತಹ ಪರಿಕಲ್ಪನೆಯನ್ನು ಅದರ ವ್ಯಾಪ್ತಿ ಬೆಳವಣಿಗೆ ಇತ್ಯಾದಿಗಳ ಹಿನ್ನೆಲೆಯಿಂದ ನೋಡಬೇಕಾಗಿದೆ. 'ದೇವುಡು ಅವರ ಸಂಸ್ಕೃತಿ ಚಿಂತನೆ'ಯನ್ನು ಇಂತಹ ಅಧ್ಯಯನಕ್ಕೊಳಪಡಿಸುವ ಅವಶ್ಯಕತೆಯಿದೆ. ಈ ದೃಷ್ಟಿಯಿಂದ ದೇವುಡು ಅವರ ಚಿಂತನೆಯನ್ನು ಕುರಿತು ಇಲ್ಲಿ ಶೋಧಿಸುವ ಕೆಲಸಮಾಡಿದೆ. ಒಂದು ದೃಷ್ಟಿಯಿಂದ ದೇವುಡು ಅವರ ಸಂಸ್ಕೃತಿ ಚಿಂತನೆಯು ವೈದಿಕ ಮುಖಿಯಾಗಿಯೇ ಸಾಗುತ್ತದೆ. ಅವರು ಎಷ್ಟೇ ಜನಪರವಾದ ವೈವಿಧ್ಯತೆಗೆ ಸ್ಪಂದಿಸುವವರೆನಿಸಿದರೂ, ಅಂತರ್ಯದಲ್ಲಿ ಸದಾ ವೈದಿಕತನ ಅವರಿಗೆ ಬಿಡದಂತಾಗುತ್ತದೆ.

ದೇವೃತು ಅವರೊಬ್ಬ ವೈದಿಕರು, ಅವರ ಚಿಂತನೆಗಳು ವೇದಮೂಲವನ್ನೇ ಆಶ್ರಯಿಸಿದವು ಎಂಬಂತಹ ಅವರ ಬಗೆಗಿನ ಅನುಮಾನಗಳನ್ನು ಬದಿಗಿಟ್ಟು ನೋಡಿದರೂ, ದೇವೃತು ಮಾನವತೆಯ ಪ್ರತೀಕವಾಗಿ ಕಂಡುಬರುತ್ತಾರೆ ಇಪ್ಪತ್ತನೆಯ ಶತಮಾನದ ಅಂತ್ಯದಲ್ಲಿ ನಿಂತು ನೋಡುವ ಪ್ರಸ್ತುತ ಅಧ್ಯಯನವು ಇದೇ ಶತಮಾನದ ಆರಂಭದ ದಶಕಗಳಲ್ಲಿ ದೇಶದಲ್ಲಿ ನಡೆಯುತ್ತಿದ್ದ ತಲ್ಲಣಗಳನ್ನು ಸಹನೆಯಿಂದ ತಿಳಿಯಬೇಕಾಗಿದೆ. ಪುರೋಹಿತಶಾಹಿ ವ್ಯವಸ್ಥೆಯೊಂದಿಗೆ ಪ್ರತಿಸ್ಪರ್ಧೆಯನ್ನು ಮೆರೆಯಬೇಕೆನ್ನುವ ಆ ಕಾಲದ ಚಿಂತನೆಗಳು ಇಂದಿಗೆ ಪ್ರಸ್ತುತವೇ ಎನ್ನಬಹುದು.

ಸಂಸ್ಕೃತಿಯೆಂಬುದು ಸದಾ ವೈವಿಧ್ಯತೆಯನ್ನೇ ಪ್ರದರ್ಶಿಸುವಂಥದು . ಈ ವಾಸ್ತವಿಕತೆಯನ್ನು ಅರಿಯದ ನಮ್ಮ ಏಕೀಕೃತ ಅಧ್ಯಯನಗಳು ಅದನ್ನು ವಿಭಜಿಸಲು ಹೋಗಿ ಗೊಂದಲಗಳಿಗೆ ಒಳಗಾಗುತ್ತವೆ. ಈ ಗೊಂದಲಗಳು ದೇವೃತು , ಮಾಸ್ತಿ , ಶಿವಜಯಂತವರಿಗೂ ಇದ್ದವು. ಆದರೆ ಸಂಸ್ಕೃತಿಯ ವ್ಯಾಪಕತೆಯ ಅರಿವಿರುವ ಆಧುನಿಕ ಚಿಂತಕರ ಚಿಂತನೆಗಳೂ ಈ ಗೊಂದಲಗಳಿಂದ ಮುಕ್ತವಾಗಿಲ್ಲ. ಈಗಲೂ ಕೆಲವು ಮೂಲಭೂತವಾದಿಗಳು 'ಭಾರತೀಯ ಸಂಸ್ಕೃತಿ' ಎಂಬ ಪ್ರತಿಗಾಮಿ ಮಂತ್ರವನ್ನುಚ್ಚರಿಸುತ್ತ 'ಬದುಕಿನ ಸಿದ್ಧಾಂತ'ದಿಂದ ಹೊರತಾದ ಹೊಸ ಸಿದ್ಧಾಂತಗಳ ಮೂಲಕ 'ವೈದಿಕರ ಸಂಸ್ಕೃತಿ' ಯನ್ನು ಪುನರ್ ಪ್ರತಿಪಾದಿಸುತ್ತಿದ್ದಾರೆ. ಸಂಸ್ಕೃತಿ ಎಲ್ಲೂ, ಯಾವ ಕಾಲದಲ್ಲೂ ಒಂದಾಗಿರಲಾರದು. ಅದು ಪ್ರತಿ ಮನುಷ್ಯರಗಳಷ್ಟೇ ವಿಭಿನ್ನ. ಬಗೆಗಿನ ಮಾರ್ಕ್ಸ್‌ವಾದಿ ವಿಲ್ಲಿಯಮ್ಸನಂತೆ 'ಒಂದು ಸಂಸ್ಕೃತಿ ತನ್ನನ್ನು ತಾನು ಪ್ರತಿಕ್ಷಣವೂ ಮರುಹುಟ್ಟು ಪಡೆದುಕೊಳ್ಳುವ ಮತ್ತು ಮುಂದುವರೆಸಿಕೊಂಡು ಹೋಗುವ ಚಲನಶೀಲತೆಯಲ್ಲಿ ನಾವು ಅದರ ವಿಶ್ಲೇಷಣೆ ಮಾಡಬೇಕು. ಈ ಚಲನಶೀಲತೆ ಆರ್ಥಿಕ ಉತ್ಪಾದನೆಯ ಆಯಾಮಗಳ-ನ್ನೊಳಗೊಂಡಿರುವಂತೆಯೇ ಒಂದು ಸಂಸ್ಕೃತಿಯ ಜನ ತಮ್ಮನ್ನು ತಾವು ಹೇಗೆ ತಿಳಿದುಕೊಳ್ಳುತ್ತಾರೆ ಮತ್ತು ತಮ್ಮನ್ನು ತಾವು ವಾಙ್ಮಯ ಪ್ರಪಂಚದಲ್ಲಿ ಹೇಗೆ ಅಭಿವ್ಯಕ್ತಗೊಳಿಸಿಕೊಳ್ಳುತ್ತಾರೆ ಎನ್ನುವುದನ್ನು ಒಳಗೊಂಡಿರುತ್ತದೆ. ಈ ಅರ್ಥದಲ್ಲಿ ಸಂಸ್ಕೃತಿಯನ್ನು ಗ್ರಹಿಸಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದೆಂದರೆ, ಯಾವುದೇ ಸಂಸ್ಕೃತಿ ಏಕರೂಪಿಯಾಗಿರುವುದಿಲ್ಲ. ಸಂಸ್ಕೃತಿಯ ಸಂರಚನೆಯ ಒಳಗೇ ಯಾವಾಗಲೂ ವಿಭಿನ್ನತೆ, ಸಂಘರ್ಷ, ಸಂವಾದ ಮುಂತಾದುವುಗಳೆಲ್ಲ ಒಟ್ಟೊಟ್ಟಿಗೇ ಇರುತ್ತವೆ. ಇವುಗಳನ್ನು ಹಾಗೆಯೇ ಗ್ರಹಿಸುವುದು ಕಷ್ಟದ ಕೆಲಸವೇ? ಹೀಗೆ

ಸಂಸ್ಕೃತಿಯ ಅಧ್ಯಯನಕಾರನಿಗೆ ಕಾಲ-ದೇಶಗಳ ಪ್ರಜ್ಞೆ ಅವಶ್ಯ ಎನ್ನಬಹುದು.

ಸಂಸ್ಕೃತಿಯ ತಾತ್ವಿಕ ವಿಶ್ಲೇಷಣೆ, ವಿವರಣಾತ್ಮಕ ವಿಶ್ಲೇಷಣೆಗಳ ಜೊತೆ ಜೊತೆಯಲ್ಲೇ ಪ್ರಾಚೀನರ 'ಬದುಕಿನ ಮೂಲದ ಸಂಸ್ಕೃತಿ' ಯ ಅಧ್ಯಯನ ಕೂಡ ನಡೆಯಬೇಕಾಗಿದೆ. ಹಾಗೆಂದು ಪರಂಪರೆಯನ್ನು ಕಣ್ಮುಚ್ಚಿ ಒಪ್ಪಿಕೊಳ್ಳಬೇಕೆಂದಲ್ಲ. ಇನ್ನೂ ನಮ್ಮ ದೇಶವು ಇಂಡಿಯಾದ ಹಾಗೆ ಪ್ರಾಚೀನ ಭಾವಸಮುದಾಯಗಳಲ್ಲಿ, ಸ್ಮೃತಿಗಳಲ್ಲಿ ಹಾಗೂ ವಿಶಿಷ್ಟ್ಯಗಳಲ್ಲಿ ಬದುಕುತ್ತಿಲ್ಲ. ಅವಾಸ್ತವಿಕ ಘಟನೆಗಳಿಗೆ ಭಾರತೀಯರು ಬಹುಬೇಗನೆ ಸ್ಪಂದಿಸುತ್ತಾರೆ, ಕಣ್ಣೀರುಗರೆಯುತ್ತಾರೆ, ಪುಳಕಿತರಾಗುತ್ತಾರೆ. ಇಂತಹ ದೌರ್ಬಲ್ಯವನ್ನು ಮೂಲಭೂತವಾದಿಗಳು ಬಳಸಿಕೊಳ್ಳುತ್ತಾರೆ. ಪರಂಪರೆಯನ್ನು ವಾಸ್ತವಿಕ ಸತ್ಯದಿಂದ ಗುರುತಿಸುವಂತಹ ಅಧ್ಯಯನಗಳು ನಡೆಯಬೇಕಾಗಿದೆ. ಪ್ರಾಚೀನ ಮತ್ತು ಆಧುನಿಕತೆಗಳನ್ನು ಬೆಸೆಯುವಂತಹ ಮೌಲಿಕ ಅಧ್ಯಯನಗಳ ಅವಶ್ಯಕತೆ ಇದೆ. ಇದು ಕನ್ನಡ ವಿಶ್ವವಿದ್ಯಾಲಯದ ಧೋರಣೆಯೂ ಆಗಿದೆ. ಈ ಎಲ್ಲ ಅರಿವಿನೊಂದಿಗೆ ಪ್ರಸ್ತುತ ಪ್ರಬಂಧವನ್ನು ಗಮನಿಸಬೇಕು.

ಅಡಿಟಿಪ್ಪಣಿಗಳು:

----

೧. (ಡಾ ಲೋಹಿಯಾ: ರಾಜಕೀಯದ ಮಧ್ಯ ಬಿಡುವು:(ಇಂಡಿಯಾದ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ): ಪುಟ೧೨೯.

೨. ವಸಂತ ಬಷ್ಪತಿ: ಸಂಸ್ಕೃತಿ ಚಿಂತನ:(ಬೆಮ್ಮದಿ).

ಅನುಬಂಧ-೧

ಬಳಸಿಕೊಂಡ ಕನ್ನಡ ಕೃತಿಗಳು:

೧. ಅನಂತಮೂರ್ತಿ ಯು.ಆರ್. ೧೯೯೦ ಪೂರ್ವಾಪರ.
ಅಕ್ಷರ ಪ್ರಕಾಶನ, ಹೆಗ್ಗೋಡು.

೨. ಕೃಷ್ಣರಾವ್ ಕಠಟಾಳ ೧೯೬೦ ಕರ್ನಾಟಕ ಸಂಸ್ಕೃತಿಯ ಸಂಶೋಧನೆ
ಪ್ರ: ಉಷಾ ಸಾಹಿತ್ಯ ಪರಿಷತ್
ಮೈಸೂರು

೩. ಗಂಗಾಧರ ದೇವೃತು (ಸಂ) ೧೯೯೬ ದೇವೃತು ದರ್ಶನ
ಪ್ರ: ದೇವೃತು ಪ್ರತಿಷ್ಠಾನ
ಜೆ.ಪಿ.ನಗರ,
ಬೆಂಗಳೂರು

೪. ಗುಂಡಪ್ಪ ಡಿ.ವಿ. ೧೯೫೩ ಸಂಸ್ಕೃತಿ
ಪ್ರ: ಕಾವ್ಯಾಲಯ ಪ್ರಕಾಶನ
ಮೈಸೂರು

೫. ಗೋವಿಂದರಾಜ ವಿ.ಆರ್. ೧೯೯೬ ಕನ್ನಡ ಮತ್ತು ಕರ್ನಾಟಕತ್ವ ಅಲೂರರ ಚಿಂತನೆಗಳ
ವಿಶ್ಲೇಷಣೆ: ಪ್ರ: ಕನ್ನಡ ವಿಶ್ವವಿದ್ಯಾಲಯ , ಹಂಪಿ.

೬. ಗೌರೀಶ ಕಾಯ್ಕಿಣಿ (ಸಂ) ೧೯೮೩ ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ,
ಪ್ರ: ಕನ್ನಡ ಸಾಹಿತ್ಯ ಪರಿಷತ್
ಬೆಂಗಳೂರು

೭. ಚಂದ್ರಶೇಖರ ಕಂಬಾರ ೧೯೯೩ ನೆಲದ ಮರೆಯ ನಿಧಾನ
ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ಚಿದಾನಂದ ಮೂರ್ತಿ ಎಂ. ೧೯೬೬ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
ಪ್ರ: ಪ್ರಸಾರಾಂಗ, ವಿಶ್ವವಿದ್ಯಾಲಯ, ಮೈಸೂರು

೯. ಜೋಶಿ ಶಂ.ಬಾ. ೧೯೬೬ ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ ಭಾಗ-೧
ಪ್ರ: ಸಮಾಜ ಪುಸ್ತಕಾಲಯ
ಧಾರವಾಡ

೧೦.ತಪಸ್ವಿಕುಮಾರ ಪಿ. ೧೯೯೨ (ಅ)ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ
ಪ್ರ: ಪ್ರಸಾರಾಂಗ, ಮೈಸೂರುವಿಶ್ವವಿದ್ಯಾಲಯ,
ಮೈಸೂರು
(ಆ)ಸಂಸ್ಕೃತಿಯ ಅಧ್ಯಯನ
ಪ್ರ: ಚಾಮುಂಡಿ ಎಂಟರ್ ಪ್ರೈಸಸ್
ಮೈಸೂರು

೧೧.ತಿಮ್ಮಪ್ಪಯ್ಯ ಮುಳಿಯ ೧೯೮೧ ಸಂಸ್ಕೃತಿ : ಪ್ರ: ಕರ್ನಾಟಕ ಸಂಘ , ಪುತ್ತೂರು

೧೨.ತಿಪ್ಪೇರುದ್ರಸ್ವಾಮಿ ಎಚ್. ೧೯೭೮ ಕರ್ನಾಟಕ ಸಂಸ್ಕೃತಿ ಸಮೀಕ್ಷೆ
ಪ್ರ : ಡಿ.ವಿ.ಕೆ. ಮೂರ್ತಿ
ಮೈಸೂರು

೧೩.ನರಸಿಂಹಶಾಸ್ತ್ರಿ ದೇವುಡು ೧೯೮೮ ಕರ್ನಾಟಕ ಸಂಸ್ಕೃತಿ
ಪ್ರ: (ಮೈಸೂರು ಸರಕಾರ)
ಶಾರದಾ ಪ್ರಕಾಶನ
ಮೈಸೂರು

೧೪.ನಾಗರಾಜ ತಿ.ಆರ್ (ಸಂ) ೧೯೯೩ ಧರ್ಮಚಕ್ರ
ಪ್ರ: ಅಕ್ಷರ ಪ್ರಕಾಶನ ಹೆಗ್ಗೋಡು.

೧೫.ನಾರಾಯಣಸ್ವಾಮಿ ಎ.ಹೊ. ೧೯೮೮ ವೇದ ಕುರಾನ ಆಚೆಗೆ :
ಮಾನವ ಪ್ರಕಾಶನ, ಹಾಸನ.

೧೬.ಪಾಂಡುರಂಗ ಬಿ.ಆರ್ ೧೯೯೦ ದಕ್ಷಿಣ ಕನ್ನಡ ಜಿಲ್ಲೆಯ ಭೈರರು
ಒಂದು ಸಾಂಸ್ಕೃತಿಕ ಅಧ್ಯಯನ
ಪ್ರ: ಗೋವಿಂದ ಪೈ. ಸಾಂಸ್ಕೃತಿಕ ಕೇಂದ್ರ
ಉಡುಪಿ

೧೭.ಪುಟ್ಟಪ್ಪ ಕೆ.ವಿ. (ಸಂ) ೧೯೭೦ ಅ)ಯುಗಯಾತ್ರಿ ಭಾರತೀಯ ಸಂಸ್ಕೃತಿ
ಪ್ರ: ಪ್ರಸಾರಾಂಗ , ಮೈಸೂರು ವಿಶ್ವವಿದ್ಯಾಲಯ
ಮೈಸೂರು
೧೯೮೭ ಆ)ವಿಚಾರ ಕ್ರಾಂತಿಗೆ ಆಹ್ವಾನ
ಪ್ರ: ಕನ್ನಡ ಸಾಹಿತ್ಯ ಪರಿಷತ
ಬೆಂಗಳೂರು.

೧೮.ಪುರುಷೋತ್ತಮ ಬಿಳಿಮಲೆ ೧೯೯೨ ಶಿಷ್ಟ ಪರಿಶಿಷ್ಟ
ಪ್ರ: ಮುಡಿಪು ಪ್ರಕಾಶನ
ಮಂಗಳೂರು

೧೯.ಬೇಂದ್ರೆ ದ.ರಾ.	೧೯೭೪	ಸಾಹಿತ್ಯದ ವಿರಾಟ್ ಸ್ವರೂಪ : ಸಮಾಜ ಪುಸ್ತಕಾಲಯ ಧಾರವಾಡ.
೨೦.ಮಲ್ಲೇಪುರಂ ಜಿ.ವೆಂಕಟೇಶ	೧೯೯೨	ಅ)ಸಂಸ್ಕೃತಿ ಮತ್ತು ಕಲಾ ಪ್ರ: ಸಂಸ್ಕೃತಿ ವಿಕಾಸ ಮಾಲೆ ಹೊಸಪೇಟೆ
	೧೯೯೮	ತಿಳಿವ ತೇಜದ ಮುಂದೆ. ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ.
೨೧.ಮಾಸ್ತಿ ವೆಂಕಟೇಶ ಅಯ್ಯಂಗಾರ್	೧೯೭೮	ಜನತೆಯು ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ಪ್ರ: ಜೀವನ ಕಾರ್ಯಾಲಯ ಬೆಂಗಳೂರು
೨೨.ರಹಮತ್ ತರೀಕೆರೆ	೧೯೯೨	ಪ್ರತಿ ಸಂಸ್ಕೃತಿ : ಪ್ರ: ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.
೨೩.ರಾಮಚಂದ್ರಪ್ಪ ಬರಗೂರು	೧೯೯೪	ಸಂಸ್ಕೃತಿ ಉಪಸಂಸ್ಕೃತಿ ಪ್ರ: ಭೂಮಿ ಬಳಗ, ಮೈಸೂರು
೨೪. ರಾಮಕೃಷ್ಣ ಆರ್	೧೯೯೨	ಮಾನವ ಶಾಸ್ತ್ರ, ಪ್ರ: ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು
೨೫.ರಾಮೇಗೌಡ	೧೯೮೦	ಜಾನಪದ ಸಂಶೋಧನೆ, ಪ್ರ: ಚಿತ್ರಕೂಟ ಪ್ರಕಾಶನ ಮೈಸೂರು
೨೬.ರೇಣುಕಾ ಪ್ರಸಾದ್ ಪಿ.ಆರ್	೧೯೯೪	ಕನ್ನಡ ಚಿಂತನೆಯಲ್ಲಿ ಸಂಸ್ಕೃತಿಯ ವ್ಯಾಖ್ಯಾನಗಳು (ಅಪ್ರಕಟಿತ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ , ಹಂಪಿ
೨೭.ಲಕ್ಷ್ಮಣ್ ತೆಲಗಾವಿ (ಸಂ)	೧೯೯೪	ಸಂಶೋಧನೆ ಪ್ರ: ಬೆ.ಮೂ.ಅಧ್ಯಯನ ಸಮಿತಿ ಬೆಂಗಳೂರು

೨೮.ವಸುಧ ಬನ್ನೂರಿ (ಅನು)	೧೯೯೬	ಸಂಸ್ಕೃತಿ ಚಿಂತನ ಪ್ರ: ಅರಿವು ಬರಹ ಪ್ರಕಾಶನ
೨೯.ವೆಂಕಟರಾಯ ಆಲೂರು		೧) ಬಿಡಿ ಮುಡಿ ಸಂಚಯ ಸಮಾಜ ಪುಸ್ತಕಾಲಯ, ಧಾರವಾಡ.
	೧೯೬೮	೨) ಕರ್ನಾಟಕ ಗತವೈಭವ (೧೦ನೇ ಆವೃತ್ತಿ)ಸಮಾಜ ಪುಸ್ತಕಾಲಯ,ಧಾರವಾಡ
೩೦.ವೆಂಕಟರತ್ನ ಎಂ.ವಿ.	೧೯೯೦	ಇತಿಹಾಸ ಸಂಶೋಧನಾ ಮಾರ್ಗ , ಪ್ರ: ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ, ಬೆಂಗಳೂರು
೩೧.ಶಂಕರನಾರಾಯಣರಾವ್ ಎಚ್.ಪಿ.(ಅನು)	೧೯೯೦	ಸಂಸ್ಕೃತಿ ರೂಪಕಗಳು ಪ್ರ:ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
೩೨.ಶಿವಲಿಂಗಯ್ಯ ಬಿ.ಎಂ.	೧೯೯೩	ಆನಂದ ಮತ್ತು ಅರಿವು , ಪ್ರ: ಮುರುಘ ರಾಜೇಂದ್ರ ಪ್ರಕಾಶನ ಮುತ್ತೂರು
೩೩.ಶ್ರೀನಿವಾಸ ರಿತ್ತಿ	೧೯೯೪	ಪಂಪ ಭಾರತ ಒಂದು ಸಾಂಸ್ಕೃತಿಕ ಅಧ್ಯಯನ ಪ್ರ: ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು
೩೪.ಶಿವರುದ್ರಪ್ಪ ಜಿ.ಎಸ್.	೧೯೯೪	ದೇವುಡು ಸಾಹಿತ್ಯ ವಾಚಿಕೆ ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು
೩೫.ಶ್ರೀಕಂಠಶಾಸ್ತ್ರಿ ಎಸ್.	೧೯೫೪	ಭಾರತೀಯ ಸಂಸ್ಕೃತಿ ಪ್ರ: ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ. ಮೈಸೂರು.
೩೬. ಸುಬ್ಬಣ್ಣ ಕೆ.ವಿ. (ಅನು)	೧೯೮೯	ರಾಜಕೀಯದ ಮಧ್ಯೆ ಬಿಡುವು ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು.
೩೭.ಹಿರೇಮಠ ಎಸ್.ಎಸ್.	೧೯೯೩	ಕರ್ನಾಟಕ ಸಂಸ್ಕೃತಿ ಪರಂಪರೆ(ಪ್ರಬಂಧಗಳು) ಪ್ರ: ಸಮತಾ ಪ್ರಕಾಶನ , ಕರಪನಹಳ್ಳಿ

ಇಂಗ್ಲೀಷ್ ಮೂಲಗಳು:

1.Edgar Thurston : Caste and Tribes of Southern India , Vol-1
Pu: Government Press , Madras

2.Eliot T.S. : Notes towards the defination of Culture
Pu: Faber and Faher Limited
24, Russel Square
London ,1962

3.Hersokvits Melville : Cultural Anthropology, 1960

4.Kluckohn dyde and Kelly : " The Concept of Culture " 1945

5.Krober A.L. : Anthropology , 1976

6.Krober A.L : The Nature of Culture
PU. The University of Chicago Press,Chicago and London.1987.

7.Kosambi D.D. : On Marxist Approach to Indian History,1950

8.Lenin V.I. : On Culture and Cultural Revolution,
Pu. Saint Petersburga, 1898

9. Lowie : Premative Society,1930.

10. Rabindranath Tagore: The centre of Indian Culture,
1921

11.Tylor,E.B. : Primative Culture,London Press,1981

12. Webster's New world Encyclopedia' :[single volume] New York,1992.

13. Encyclopedia of Britanica[Micropedia][5th Edition],The University ofChicago,1992.

ಪತ್ರಿಕೆಗಳು:
----

೧)ಪ್ರಬುದ್ಧ ಕರ್ನಾಟಕ

ಕನ್ನಡ ಸಂಘ , ಮೈಸೂರು ವಿಶ್ವವಿದ್ಯಾಲಯ

(ಮಹಿಳಾ ಸಂಚಿಕೆ)

೧೯೭೯

೨) ಸಿರಿಗನ್ನಡ.

ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೩

೩) ಸಂಕ್ರಮಣ.

ಸಂಕ್ರಮಣ ಪ್ರಕಾಶನ

ಬೆಂಗಳೂರು

೪)ಮಹಿಳಾ ಪತ್ರಿಕೆ,

ಬೆಂಗಳೂರು,೧೯೫೦

೫) ಹ್ಯಮಯೂರ.

ತ್ರೈಮಾಸಿಕ,೧೯೯೭.

ಬೆಂಗಳೂರು.

ಅನುಬಂಧ-೨

ದೇವುಡು ಅವರ ಕೃತಿಗಳು:

I. ಕಾದಂಬರಿ:

೧. ನಾಸ್ತಿಕ ವರ್ಗ
೨. ಮಹಾಬ್ರಾಹ್ಮಣ
೩. ಮಹಾಕ್ಷತ್ರಿಯ
೪. ಮಹಾದರ್ಶನ
೫. ಕಳ್ಳರ ಕೂಟ
೬. ಅಂತರಂಗ
೭. ಮಯೂರ
೮. ಒಡೆದ ಮುತ್ತು
೯. ಬಸ್ತ
೧೦. ಮಲ್ಲಿ
೧೧. ಮುಂದೇನು?
೧೨. ಗೆದ್ದವರು ಯಾರು?
೧೩. ಎರಡನೇ ಜನ್ಮ
೧೪. ಡಾ. ವಿಣಾ
೧೫. ಪರಿಪೂರ್ಣ(ಅಪೂರ್ಣ)

II. ಸಣ್ಣಕಥೆ:
೧. ಹೋಳಿಗೆಬುತ್ತಿ
೨. ದೇವುಡು ಕಥೆಗಳು
೩. ಘಟಿಮುದುಕ ಮತ್ತು ಇತರರ ಕಥೆಗಳು
೪. ಮೂರು ಕನಸು
೫. ಭಾರ್ಗವಿ (ಐತಿಹಾಸಿಕ)

III. ನಾಟಕ:
೧. ಸಾವಿತ್ರಿ
೨. ವಿಚಿತ್ರ ಶಿಕ್ಷೆ
೩. ಮಯೂರ
೪. ಯಾಜ್ಞವಲ್ಕ್ಯ

IV. ಪತ್ರಿಕೋದ್ಯಮ:
೧. ನಮ್ಮ ಪುಸ್ತಕ
೨. ರಂಗಭೂಮಿ
೩. ಮಕ್ಕಳ ಪುಸ್ತಕ
೪. ನವಜೀವನ

V. ಜಾನಪದ:
ಕರ್ನಾಟಕ ಸಂಸ್ಕೃತಿ

VI. ಮಕ್ಕಳ ಸಾಹಿತ್ಯ

೧. ಬುದ್ಧಿಯ ಕಥೆಗಳು.
೨. ಗಣೇಶನ ಕಥೆ.
೩. ದೇಶೋದ್ಧಾರರ ಕಥೆಗಳು.
೪. ತಂತ್ರಗಾರ ನರಿ ಮತ್ತು ಇತರ ಕಥೆಗಳು
೫. ಬಂಜೆಯ ಮಗ ಮತ್ತು ಇತರ ಕಥೆಗಳು
೬. ಒಂದು ಕನಸು ಮತ್ತು ಇತರ ಕಥೆಗಳು
೭. ಅವಸರ ಮತ್ತು ಇತರ ಕಥೆಗಳು
೮. ಬಿಳಿಯ ಆನೆ ಮತ್ತು ಇತರ ಕಥೆಗಳು
೯. ಸ್ನೇಹಿತರು ಮತ್ತು ಇತರ ಕಥೆಗಳು
೧೦. ಮಂಗಪ್ಪಜ್ಜ ಪುರಾಣ
೧೦. ಚಾಮುಂಡೇಶ್ವರಿ ಮತ್ತು ಇತರ ಕಥೆಗಳು
೧೨. ಯುವನ ಪುರಾಣ
೧೩. ಅಲ್ಲಿ ಇಲ್ಲಿಯ ಕಥೆಗಳು
೧೪. ಕಂದನ ಕಥೆಗಳು
೧೫. ಅವಾಯ ಉಪಾಯ
೧೬. ಧೀಮುಕಿನ ಬೆಕ್ಕು
೧೭. ಕಪ್ಪಡಿಯ ಕಥೆ

VII. ಸಂಗ್ರಹಗಳು:
೧. ರಾಮಾಯಣದ ಮಹಾಪುರುಷರು
೨. ಭಾರತದ ಮಹಾಪುರುಷರು
೩. ಸಂಗ್ರಹ ರಾಮಾಯಣ
೪. ಮಹಾಭಾರತ ಸಂಗ್ರಹ
೫. ಪುರುಷೋತ್ತಮ
೬. ಕಾಳಿದಾಸನ ಕೃತಿಗಳು
೭. ಕಾಳಿದಾಸ.

VIII. ಕಾವ್ಯ:

೧. ಭಾರತಿ ತೊಟ್ಟಿಲಿಯಲ್ಲಿ ಕರ್ನಾಟಕ ವಿಶ್ವಾಮಿತ್ರ ಚರಿತ್ರೆ.

IX. ವಿಚಾರ-ವಿಮರ್ಶೆ-ಸಂಪಾದನೆ:

೧. ಮಿಮಾಂಸ ದರ್ಶನ
೨. ಕವ್ಯತ ಜೈಮಿನಿ ದರ್ಶನ
೩. ಚಿತ್ರ ವ್ಯಾಕರಣ
೪. ರಾಮಾಯಣವು, ಭಗವದ್ಗೀತೆಯೂ
೫. ಭೇರುಂಡೇಶ್ವರ
೬. ಮುರಭ

X. ಅನುವಾದ:

೧. ವಿಕ್ರಮೋರ್ವಶೀಯ
೨. ರತ್ನಾವಳಿ
೩. [illegible]
೪. ಉಪನಿಷತ್ತು
೫. ಕಥಾಸರಿತ್ಸಾಗರ
೬. ಪಾರ್ವತಿ
೭. ಯೋಗವಾಸಿಷ್ಠ
೮. ಮಹಾಪ್ರಸ್ಥಾನ ([illegible])
೯. ಅಂತಿಮಯಾನ

ಅನುಬಂಧ-೩

ದೇವುಡು ಅವರ ಜೀವನದ ಪ್ರಮುಖ ಘಟನೆಗಳು:

೨೯-೧೨-೧೮೬೯: ಜನನ, ಮೈಸೂರು
೧೯೧೨- ಶ್ರೀಮತಿ ಗೌರಮ್ಮನವರೊಡನೆ ವಿವಾಹ
೧೯೨೨- ಎಂ.ಎ. ಮೈಸೂರು ವಿಶ್ವವಿದ್ಯಾಲಯ
೧೯೨೫- ಮುಖ್ಯೋಪಾಧ್ಯಾಯರು ಸದ್ವಿದ್ಯಾ ಪಾಠಶಾಲೆ,ಮೈಸೂರು
೧೯೨೮- ಮುಖ್ಯೋಪಾಧ್ಯಾಯರು ಆರ್ಯವಿದ್ಯಾಶಾಲೆ, ಬೆಂಗಳೂರು.
೧೯೨೯- ಕರ್ನಾಟಕ ಫಿಲ್ಮ್ ಕಾರ್ಪೋರೇಷನ್ ಸ್ಥಾಪನೆ.
ಸುಲ್ತಾನಪೇಟೆ ಗಣೇಶ ಸ್ಕೂಲ್ ಗಲಾಟೆ-ಭಾಗವಹಿಸಿದ್ದು,
ರಂಗಭೂಮಿ ಮಾಸಪತ್ರಿಕೆ ಸಂಪಾದಕರು.
೧೯೩೫- ಕರ್ನಾಟಕ ಸಂಸ್ಕೃತಿ ಕೃತಿಗೆ ದೇವರಾಜ ಬಹದ್ದೂರ್ ಪಾರಿತೋಷಕ ಮತ್ತು ಇತರ ಪುರಸ್ಕಾರಗಳು.
೧೯೩೬- 'ಚಿರಂಜೀವಿ' ಚಲನಚಿತ್ರದ ಸಾಹಿತ್ಯ ರಚನೆ ಮತ್ತು ನಟನೆ.
೧೯೩೭- 'ಕನ್ನಡ ಸಾಹಿತ್ಯ ಸಮಾಜ' ಸ್ಥಾಪನೆ.
೧೯೩೮- 'ಮೀಮಾಂಸ ದರ್ಪಣ'ಕ್ಕೆ ಶ್ರೀಮಾನ್ ಮಹಾರಾಜರಿಂದ ವಿಶೇಷ ಪ್ರಶಸ್ತಿ.
೧೯೪೦- ವಯಸ್ಕರಿಗೆ ಕನ್ನಡ ಕಲಿಸುವುದಕ್ಕಾಗಿ ಅಕ್ಷರ ಪ್ರಚಾರ ಯೋಜನೆ ಪ್ರಾರಂಭ.
೧೯೪೨- ಗಾಂಧಿನಗರ ಹೈಸ್ಕೂಲ್ ಸ್ಥಾಪನೆ.
೧೯೪೩-೪೫-ಪ್ರಜಾಪ್ರತಿನಿಧಿ ಸಭೆಗೆ ನೇಮಕ.
೧೯೪೬- ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿಗೆ ಡೈರೆಕ್ಟರ್ ಆಗಿ ಚುನಾಯಿತರಾದುದು.
ಪಠ್ಯಪುಸ್ತಕ ಸಮಿತಿಯ ಸದಸ್ಯತ್ವ.
೧೯೪೮- ಬೆಂಗಳೂರು ಸಿಟಿ ಕಾರ್ಪೋರೇಟರ್ ಆಗಿ ಚುನಾಯಿತರಾದುದು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ
ಭಾಗವಹಿಸಿದುದು.
೧೯೫೦- ಗೀರ್ವಾಣ ವಿದ್ಯಾಪೀಠದ ಸ್ಥಾಪನೆ.
೧೯೫೧- ಮೊಟ್ಟಮೊದಲ ಲೋಕಸಭಾ ಚುನಾವಣೆಯಲ್ಲಿ ಭಾಗವಹಿಸಿದ್ದು.
೧೯೫೨- ಮೊದಲ ರಾಷ್ಟ್ರಪತಿ ಬಾಬುರಾಜೇಂದ್ರಪ್ರಸಾದರಿಂದ ಕಾಶಿಯಲ್ಲಿ ಗೌರವ, ಕನ್ನಡ ಕಾದಂಬರಿಕಾರರ
ಸಮ್ಮೇಳನದ ಅಧ್ಯಕ್ಷತೆ.
೧೯೫೬-೫೯- ಕನ್ನಡ ಸಾಹಿತ್ಯಪರಿಷತ್ತಿನ ಕಾರ್ಯಕಾರೀ ಸಮಿತಿಯ ಸದಸ್ಯರು.
೨೬-೧೦-೧೯೬೨- ದೈವಾಧೀನ.
ಮಹಾಕ್ಷತ್ರಿಯ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ.(ಮರಣೋತ್ತರ)